ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 25

ನವೆಂಬರ್ 18, 2007

ಕನ್ನಡ ವಾರಪತ್ರಿಕೆ

ರೂ. 5/-

ಸರ್ಕಾರ ರಚನೆಗೆ ಸಜ್ಜು

ಕೋಮುವಾದಿಗಳ ತೆಕ್ಕೆಗೆ ಕರ್ನಾಟಕ

ಪೇಜ್ 3



ಪೇಜ್ 7



ಸೌಹಾರ್ದ ಪರಂಪರೆಯ ವೈವಿಧ್ಯತೆಗಳು



ಒಡಲ ಬೇಗುದಿ ಹೊತ್ತು ಬಂದ ರೈತ-ಕೂಲಿಕಾರರು

ಪೇಜ್ 14



ಪಾಕ್‌ನಲ್ಲಿ ತುರ್ತುಪರಿಸ್ಥಿತಿ: ಜನದನಿಯ ದಮನ

ಮಂಡ್ಯ : ಬಿಜೆಪಿ ಮೊಟ್ಟೆಗೆ ಜೆಡಿ(ಎಸ್) ಕಾವು

ಸಿದ್ಧಾಂತ ಮತ್ತು ಹೋರಾಟಕ್ಕೆ ಬದ್ಧ ಕಾಮ್ರೇಡ್ ಡೋಂಗಾ ನಿಧನ

ಭೂಮಾಲಕ್ಕಾಗಿ ಹೋರಾಡಿ ಮತ್ತು ಕಿಸಾನ್ ಸಭಾ ಕಟ್ಟಿರಿ, ಗೇಣಿ ಪದ್ಧತಿ ನಿಲ್ಲಲಿ, ಭೂ ಸುಧಾರಣೆ ಜಾರಿಯಾಗಲಿ, ಉಳುವವನೇ ಹೊಲದೊಡೆಯನಾಗಬೇಕೆಂದು, ಭೂ ಮಾಲಿಕ ಬಂಡವಾಳಶಾಹಿಗಳ ಕೈಗೊಂಬೆ ಸರ್ಕಾರದ ನೀತಿಗಳ ವಿರುದ್ಧ, ಕೃಷಿ ಯೋಗ್ಯ ಭೂಮಿ ರೈತರಿಗೆ, ಭೂ ಹೀನರಿಗೆ ಹಂಚಲು ಒತ್ತಾಯಿಸಿ ಇತ್ಯಾದಿ ಹೋರಾಟಗಳ ಕಣದಲ್ಲಿ ಕಾರವಾರದಲ್ಲಿ ದಣಿವಿಲ್ಲದೇ ದುಡಿದವರಲ್ಲಿ ಕಾಂ: ಡೋಂಗಾ ಲಾಡು ಚಿಂಚನಕರ ಒಬ್ಬರು. ಅವರು 03.11.2007ರಂದು ತಮ್ಮ ಮನೆ ಹಳಗಾ ಸಮೀಪದ ಹಣಕೋಣ ಜೋಗ್‌ದಲ್ಲಿ ನಿಧನರಾದರು. ರೈತ ಚಳುವಳಿ ಕಾರವಾರ ಭಾಗದಲ್ಲಿ 1935ರ ಪೂರ್ವದಲ್ಲೇ ಪ್ರಾರಂಭವಾಗಿ ಭೂ ಹೋರಾಟದ ಉಚ್ಛ್ರಾಯ ಕಾಲದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಎಐಕೆಎಸ್ ಜೊತೆ ಗುರುತಿಸಿಕೊಂಡ ಡೋಂಗಾ 1945 ರಿಂದಲೇ ಚಳುವಳಿಯಲ್ಲಿದ್ದರು. ಒಂದೆಡೆ ರೈತರ ಭೂ ಹಕ್ಕಿನ ಕುರಿತು ಭೂ ಮಾಲೀಕರ ವಿರುದ್ಧದ ಹೋರಾಟ ಮತ್ತೊಂದೆಡೆ ಸಾಮ್ರಾಜ್ಯ ಶಾಹಿ ವಿರೋಧೀ ಹೋರಾಟ ಗಳೆರಡಲ್ಲೂ ಎಐಕೆಎಸ್ ಪಾಲ್ಗೊಂಡಿತ್ತು. ಯುವಕ ಕಾಂ. ಡೋಂಗಾ ಇದರಲ್ಲಿ ಸಕ್ರಿಯರಾಗಿದ್ದರು.

ಕೆಂಬಾವುಟ ಹಿಡಿದು

1925ರ ಮೇ ತಿಂಗಳಲ್ಲಿ ಜನಿಸಿದ ಕಾ:ಡೋಂಗಾ ಚಿಕ್ಕಂದಿನಿಂದಲೇ ರೈತ ಚಳುವಳಿಗೆ ಸೇರಿ, ಕೆಲಸ ಮಾಡಿ ನಂತರ ಕಮ್ಯುನಿಸ್ಟ್ ಪಕ್ಷ ಸೇರಿದರು. 1945ರಲ್ಲಿ ಕಾರವಾರದ ಅಮದಳ್ಳಿಯ ತಮ್ಮ ಮನೆ ಬಿಟ್ಟು ಶಿರಸಿಯಲ್ಲಿ ಮತ್ತು ರೈಲು ಕಸ ತೆಗೆಯುವ ಸ್ಲೀಪರ್ ಮಾಡುವ ಕೆಲಸಕ್ಕೆ ಸೇರಿದರು. ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮಗಳಿಗೆ ಕದ್ದು ಮುಚ್ಚಿ ಹಲವೆಡೆ ಭಾಗವಹಿಸಿದ್ದರು. ಜಮೀನ್ದಾರಿ ಪದ್ಧತಿ ನಾಶ, ಅಂದಿನ ಕರಾಳ ಕಾಯ್ದೆ 'ರಾಕ್ಷಸ' ನಾಶಕ್ಕಾಗಿನ ಹೋರಾಟ, ಗೇಣಿ ಸಂಬಂಧಿ ನಿರಂತರ ಹೋರಾಟದ ಕಾವಿನಲ್ಲಿ ದಿನಂಪ್ರತಿ ಕಾರವಾರ ತಾಲ್ಲೂಕಿನ ಹತ್ತಾರು ಹಳ್ಳಿಗಳಿಗೆ ಕೆಂಬಾವುಟ ಹಿಡಿದು ಸಂಘಟನಾ ಕಾರ್ಯಕರ್ತನಾಗಿ ತಿರುಗಾಡಿದರು. ಮುಂಬೈ ಪ್ರಾಂತದಿಂದ ಗಡಿಪಾರು ಮಾಡಲ್ಪಟ್ಟು ನಾಸಿಕ್ ಸೆಂಟ್ರಲ್ ಜೈಲ್‌ನಲ್ಲಿ ಗೋಲಿಬಾರ್‌ನಲ್ಲಿ ಹತರಾದ ರೈತ ನೇತಾರ ಹುತಾತ್ಮ ಗಣುನಾಯ್ಕರು ಸತ್ತ ಸಂದರ್ಭದಲ್ಲಿ ಕಾರವಾರದಲ್ಲಿ ದೊಡ್ಡ ಹೋರಾಟ ಸಂಘಟಿಸಲ್ಪಟ್ಟು ಅಂದೇ ತಾನು ಕಮ್ಯುನಿಸ್ಟ್‌ನಾಗಬೇಕೆಂದು ತೀರ್ಮಾನಿಸಿದರು, 5 ರಿಂದ 6 ಬಾರಿ ಬಂಧನಕ್ಕೊಳಗಾಗಿದ್ದರು. ಬಳ್ಳಾರಿಯಲ್ಲಿ ಮೂರುವರೆ ತಿಂಗಳು ಜೈಲುವಾಸ ಮಾಡಿ ಶಿಕ್ಷೆ ಅನುಭವಿಸಿದರೂ ರೈತ ಕಾರ್ಮಿಕರ ಪಕ್ಷಕ್ಕೆ ತನ್ನ ಬದ್ಧತೆಯನ್ನು ಕೊನೆ ತನಕ ದಾಖಲಿಸಿದರು.

ಕಮ್ಯುನಿಸ್ಟ್ ಮುಖಂಡರಾದ ಇಎಂಎಸ್, ಗೋದುತಾಯಿ, ಶ್ಯಾಮರಾವ್ ಪರುಳೇಕರ, ಡಿ.ವಿ.ಸಿಂಗ್, ಬಾಲಸಿಂಗ್, ಎನ್.ಎಲ್. ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯ, ಮೀರ ಜಕರ, ಪಿ.ರಾಮಚಂದ್ರ ರಾಯರಂತವರ ಸಾಮೀಪ್ಯದಿಂದ ಈ ಅನಕ್ಷರಸ್ಥ ಜೀವ ಖುಷಿ ಪಡುತ್ತಿತ್ತು. ಪಕ್ಷ ಮತ್ತು ರೈತ ಸಂಘದ ಹಿತಕ್ಕೆ ಧಕ್ಕೆ ತಂದು ರೈತರನ್ನು ಒಡೆದು ಭೂ ಮಾಲಕರೊಂದಿಗೆ ಶಾಮೀಲಾದ ಮಾಜಿ ಎಂ.ಪಿ. ಬಿ.ಪಿ.ಕದಂರ ಸಿದ್ಧಾಂತದ ಕುರಿತು ಸಿಡಿದೇಳುತ್ತಿದ್ದರು. ಚಳುವಳಿಯಲ್ಲಿ ಎಲೆ ಮರೆಯ ಕಾಯಿಯಾಗೇ ಉಳಿದ ಇವರಿಗೆ ಗೋದು ತಾಯಿ (ಗೋದಾವರಿ ಪರುಳೇಕರ) ಹೇಳಿದ ಮಾತು 'ಏನೂ ಹೆದರಬಾರದು, ಮುಂದೆ ಹೋಗು, ನಾವಿದ್ದೇವೆ, ಚಳುವಳಿ ನಮ್ಮ ಬಿಡುಗಡೆಗೆ' ಎಂಬ ಮಾತು ಸ್ಫೂರ್ತಿ. ಕಾಂ.ಧಾರೇಶ್ವರರನ್ನು 'ಆಪ್ತ ಗೆಳೆಯ' ಎನ್ನುತ್ತಿದ್ದರು.

ಜನತಾ ಸಮಸ್ಯೆಗಳ ವಿರುದ್ಧದ ಹೋರಾಟವನ್ನು ಮಾರ್ಕ್ಸ್‌ವಾದದ ತಿರುಳೆಂದು ಬಗೆದ ಇವರು ಅನಕ್ಷರಸ್ಥರಾದರೂ ತಾವು ಹೋದಲ್ಲೆಲ್ಲ ಮಾರ್ಕ್ಸ್ ಎಂಗೆಲ್ಸ್, ಲೆನಿನ್, ಇಎಂಎಸ್, ಲಿಯೋ ಶಾವೊಕಿ ಮುಂತಾದವರ ದೊಡ್ಡ ದೊಡ್ಡ ಪುಸ್ತಕ ಖರೀದಿಸಿ ತರುತ್ತಿದ್ದರು. ಬೇರೆಯವರಿಗೆ ಓದಲಿಕ್ಕೆ ಹೇಳುತ್ತಿದ್ದರು. 'ಈಗಿನವರು ಸರಿಯಾಗಿ ಓದೋದಿಲ್ಲ' ಎಂಬ ಕೊರಗಿತ್ತು. ಅವರ ಮನೆಯಲ್ಲಿನ್ನೂ ಚಳುವಳಿಯ ಬತ್ತಿ ನೆನಪುಗಳಿವೆ. ಅವರೊಂದಿಗೆ ಸಂದರ್ಶನ ನಡೆಸಿದಾಗ ಹಲವು ಅಂಶಗಳನ್ನು ಹೇಳಿಕೊಂಡಿದ್ದು ದಾಖಲಾರ್ಹವಾದುವುಗಳೇ.

ಕೆಲವು ತಿಂಗಳ ಹಿಂದೆ ಅವರ ಅನಾರೋಗ್ಯ ಸುದ್ದಿ ಕೇಳಿ ಮನೆಗೆ ಹೋದಾಗ ಹೇಳಿದ್ದು ನೆನಪಿಸಿಕೊಂಡರೆ ಅವರ ಬದ್ಧತೆ ಪ್ರಶ್ನಾತೀತ ಎಂಬುದು ತಿಳಿಯುತ್ತದೆ. ಹಳೆಯ ಕರಪತ್ರ ಪುಸ್ತಕಗಳೆಲ್ಲ ತೋರಿಸಿದರೂ 6 ರಿಂದ 7 ವರ್ಷದಿಂದ ದೈಹಿಕವಾಗಿ ಪಕ್ಷದ ಚಟುವಟಿಕೆಯಿಂದ ದೂರ ಉಳಿದರೂ ಪಕ್ಷದ ಕಾರ್ಯಕ್ರಮ, ಹೋರಾಟ, ರೈತರ ಕುರಿತಂತೆ (ಕಿಸಾನ್ ಸಭಾ) ಕರ್ನಾಟಕ ಪ್ರಾಂತ ರೈತ ಸಂಘದ ಚಟುವಟಿಕೆ ಸುದ್ದಿ ಕೇಳಿ ಪುಳಕಗೊಂಡಿದ್ದೇನೆ. ಪಕ್ಷಕ್ಕೆ ತನ್ನಿಂದೇನೂ ಕಾಣಿಕೆ ಕೊಡಲಾಗಲಿಲ್ಲ. ಪಕ್ಷಕ್ಕೆ ನನ್ನ ಜೀವ ಕೊಡಲು ಮಾತ್ರ ಈಗ ಸಾಧ್ಯ. ಕಮ್ಯುನಿಸ್ಟ್‌ಗೆ ಕಿಸಾನ್ ಸಭೆಗೆ ಭೇದ ಭಾವ, ಜಾತಿ ಇಲ್ಲ. ಹಿಂದೂ ಕ್ರೈಸ್ತ ಎಲ್ಲ ಮನುಷ್ಯರಷ್ಟೇ ಎಂದು ಚುಟುಕಾಗಿ ಹೇಳಿ ಅಂತಿಮ ಬದ್ಧತೆ ವ್ಯಕ್ತಪಡಿಸಿದ ಕಾಮ್ರೆಡ್ ಡೋಂಗಾ ಲಾಡು ಚಿಂಚನಕಾರರ ಅಗಲಿಕೆಗೆ ನಮ್ಮ ಶ್ರದ್ಧಾಂಜಲಿ

■ ಯಮುನಾ ಗಾಂವ್ಕರ

ಸಂಗಾತಿ ಲೋಕೇಂದ್ರರಾವ್ ಸಾಹುಕಾರ್‌ರಿಗೆ ಜನಶಕ್ತಿ ಶ್ರದ್ಧಾಂಜಲಿ



ಸಂಗಾತಿ ಲೋಕೇಂದ್ರ ರಾವ್ ತುಂಗಭದ್ರ ಗ್ರಾಮೀಣ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಕಟ್ಟಿ ಬೆಳೆಸಿದ ಪ್ರಮುಖರಲ್ಲಿ ಒಬ್ಬರು. ಅವರು ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ ನೌಕರರ ಸಂಘಟನೆ ರಾಜ್ಯಸಮಿತಿ ಸದಸ್ಯರು ಮತ್ತು ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾದ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿಯಾಗಿದ್ದರು. ಅವರು ಸಿಪಿಐ(ಎಂ) ಪಕ್ಷಕ್ಕೆ ಕಳೆದ 20 ವರ್ಷಗಳಿಂದ ಸದಸ್ಯರು. ಬಳ್ಳಾರಿ ಜಿಲ್ಲೆಯ ಸ್ಥಳೀಯ ಸಮಿತಿ ಸದಸ್ಯರಾಗಿದ್ದರು. ಇತ್ತೀಚೆಗೆ ಸಿಂಧನೂರಿಗೆ ವರ್ಗಾವಣೆ ಹೊಂದಿ ಅಲ್ಲಿಯೂ ಪಕ್ಷ ಹಾಗೂ ಎಲ್ಲಾ ವರ್ಗ ಮತ್ತು ಸಾಮೂಹಿಕ ಸಂಘಟನೆಗಳನ್ನು ಮುನ್ನಡೆಸಲು ಸದಾ ಸಕ್ರಿಯರಾಗಿದ್ದ ಅವರು ಹಾವು ಕಡಿತದಿಂದ 28.10.2007 ರಂದು ನಮ್ಮನ್ನಗಲಿದ್ದಾರೆ.

ಈ ಸಂದರ್ಭದಲ್ಲಿ 'ಜನಶಕ್ತಿ' ಯು ಪಕ್ಷ ಮತ್ತು ಸಂಘಟನೆಗಳಿಗೆ ಅವರು ಕೊಡುಗೆಯನ್ನು ಸ್ಮರಿಸುತ್ತಾ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ. ಸಿಐಟಿಯು ಮತ್ತು ಪಕ್ಷದ ಸಿಂಧನೂರು ತಾಲ್ಲೂಕು ಸಮಿತಿಗಳು ಶ್ರದ್ಧಾಂಜಲಿ ಅರ್ಪಿಸಿವೆ.

ಅಮರ ಕ್ರಾಂತಿಯ ನೆನಪು.....

1917ರ ಮಹಾನ್ ಅಕ್ಟೋಬರ್ ಕ್ರಾಂತಿಯನ್ನು ಮಹತ್ವವನ್ನು ವಿವರಿಸುವ ಕಾರ್ಯಕ್ರಮವೊಂದು ಬೆಂಗಳೂರಿನಲ್ಲಿ ನಡೆಯಿತು. ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ಈ ಕಾರ್ಯಕ್ರಮವನ್ನು ಸಂಘಟಿಸಿತ್ತು. ಸಂಘಟಿಸಲಾಗಿದ್ದ ಸ್ಥಳವೂ ವಿಶೇಷವೇ.

ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಇ.ಎಂ.ಎಸ್. ಭವನ ಏನು ನಿರ್ಮಾಣದ ಹಂತದಲ್ಲಿದೆ, ಆ ಕಟ್ಟಡದ ಮುಂಭಾಗದಲ್ಲಿ ಅದು ನಡೆಯಿತು. ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕೆ.ವರದರಾಜನ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಮುಂತಾದವರು ಭಾಗವಹಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ವಹಿಸಿದ್ದರೆ, ಜಿಲ್ಲಾ ಮುಖಂಡರಾದ ಮೀನಾಕ್ಷಿ ಸುಂದರಂ, ಸ್ವಾಗತಿಸಿದರೆ, ಗೋಪಾಲಕೃಷ್ಣ ಅರಳಹಳ್ಳಿ ವಂದಿಸಿದರು.

ಹೊಸ ಜಗತ್ತಿನ ಮುನ್ನುಡಿ

ಅಕ್ಟೋಬರ್ ಕ್ರಾಂತಿಯಿಂದ ಇಡೀ ಜಗತ್ತು ಒಂದು ಹೊಸ ಬೆಳಕು ಕಂಡಿತು. ಅಮೆರಿಕದ ವಿರುದ್ಧ ಸೆಟೆದು ನಿಲ್ಲಬಲ್ಲ ತಾಕತ್ತನ್ನು ಜಗತ್ತಿಗೆ ತೋರಿಸಿದ ಘಟನೆಯದು. ಕಾರ್ಮಿಕರ ಒಗ್ಗಟ್ಟು, ತಾತ್ವಿಕ ಬದ್ಧತೆ ಮತ್ತು ಸಮಯಪ್ರಜ್ಞೆ ಜಗತ್ತನ್ನು ಹೊಸ ದಿಕ್ಕಿಗೆ ಕೊಂಡೊಯ್ಯಬಲ್ಲ ಕ್ರಾಂತಿಗೆ ಮುನ್ನಡಿಯಾಯಿತು.

ರಾಷ್ಟ್ರದಲ್ಲಿನ ಎಡಪಕ್ಷಗಳು ಯಾವತ್ತೂ ರಷ್ಯ ಅಥವಾ ಚೀನಾದ ಹಿತಾಸಕ್ತಿಯನ್ನು ಬಯಸಿಲ್ಲ. ತಾತ್ವಿಕ ಉದ್ದೇಶಕ್ಕಾಗಿ ಈ ರಾಷ್ಟ್ರಗಳ ಮೇಲೆ ಎಡಪಕ್ಷಗಳಿಗೆ ಗೌರವವಿದೆ. ಆದರೆ ದೇಶದ ಹಿತವೇ ನಮಗೆ ಮುಖ್ಯ ಎಂದು ಸಿಪಿಎಂ ಪಾಲಿಟ್‌ಬ್ಯೂರೋ ಸದಸ್ಯ ಕೆ.ವರದರಾಜನ್ ಹೇಳಿದರು.

ಧಮನಿಯಲಿ ಧಮನಿಯಲಿ ಬಿಸಿನೆತ್ತರುಕ್ಕದೆ.....

1928ರಷ್ಟರಲ್ಲೇ ರಾಷ್ಟ್ರಕವಿ ಕುವೆಂಪುರವರು ಅಕ್ಟೋಬರ್ ಮಹಾನ್ ಕ್ರಾಂತಿಯಿಂದ ಸ್ಫೂರ್ತಿ ಪಡೆದಿದ್ದರು. 'ಧಮನಿ ಧಮನಿಯಲಿ ಬಿಸಿನೆತ್ತರುಕ್ಕದೇ ನೆನೆಯಲಾರೆ ನಿನ್ನಂ' ಎಂದು ಅವರು ಬರೆದರು. ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿಯು ಕರ್ನಾಟಕ ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಜೀವನದ ಮೇಲೆ ಗಾಢವಾದ ಪ್ರಭಾವ ಬೀರಿದೆ. ಗೋಪಾಲಕೃಷ್ಣ ಅಡಿಗರಂತಹ ಪ್ರತಿಗಾಮಿ ಕವಿ ಕೂಡ, 'ಕಟ್ಟುವೆವು ನಾಡು ಹೊಸ ನಾಡೊಂದನು... ಇರುವೆಲ್ಲವನು ಜಗಕೆ ಸಮನಾಗಿಸುವ, ಸಾಮರಸ್ಯ ಸಾಮಗಾನ ಲಹರಿಯ ಮೇಲೆ' ಎಂದು ಬರೆಯುವಂತಾಯಿತು ಎಂದರು.

ಇಂದು ಲ್ಯಾಟಿನ್ ಅಮೇರಿಕಾದ ವೆನೆಜುವೆಲಾ, ಬ್ರೆಜಿಲ್, ಬೊಲಿವಿಯಾ, ಉರುಗ್ವೆ ಮುಂತಾದ ದೇಶಗಳಲ್ಲಿ ಸಮಾಜವಾದಿ ಆಶಯವನ್ನು ಘೋಷಿಸಿಕೊಂಡಿರುವ ಜನಪ್ರಿಯ ಸರ್ಕಾರಗಳು ಬಂದಿವೆ. ಸಾಮ್ರಾಜ್ಯಶಾಹಿ ಕುತಂತ್ರಕ್ಕೆ ಹಿನ್ನಡೆಯಾಗಿದೆ. ಇವೆಲ್ಲವುಗಳ ಹಿಂದೆ ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿ ಇದೆ ಎಂದರು.

ಇ.ಎಂ.ಎಸ್. ಭವನಕ್ಕೆ ಕೊಡುಗೆ ಸ್ವೀಕಾರ :

ರಾಜ್ಯದ ಜನಪರ ಚಳುವಳಿಯ ಮಾರ್ಗದರ್ಶಿ ಕೇಂದ್ರವಾಗಿ ರೂಪುಗೊಳ್ಳಲಿರುವ ಇ.ಎಂ.ಎಸ್.ಭವನಕ್ಕೆ ನಿಧಿ ಅರ್ಪಿಸುವುದು, ಸ್ವೀಕರಿಸುವುದು ಸಹ ಇದೇ ಸಂದರ್ಭದಲ್ಲಿ ಜರುಗಿದ ಮತ್ತೊಂದು ಮಹತ್ವದ ಘಟನೆ. ಬೆಂಗಳೂರಿನ ಹಲವು ಕಾರ್ಮಿಕ ಸಂಘಟನೆಗಳ ಮುಖಂಡರು, ಸಿಪಿಐ(ಎಂ)ನ ವಿವಿಧ ಶಾಖೆಗಳ, ಸಮಿತಿಗಳ ಪ್ರತಿನಿಧಿಗಳು ನಿಧಿ ಅರ್ಪಿಸಿದರು. ಉದ್ದೇಶಿತ ಸಂಗ್ರಹದ ಗುರಿ ಘೋಷಿಸಿದರು.

ಸಂಪಾದಕೀಯ

ರಾಷ್ಟ್ರಪತಿ ಆಡಳಿತ ರದ್ದು ಬಿಜೆಪಿ ನೇತೃತ್ವದ ಸರ್ಕಾರ ರಚನೆಗೆ ಸಜ್ಜು

ಇದು ಎಚ್ಚರಿಕೆಯ ಗಂಟೆ

ದಕ್ಷಿಣ ಭಾರತದಲ್ಲಿಯೇ ಪ್ರಥಮ ಬಾರಿಗೆ ಕೋಮುವಾದಿಗಳ ನೇತೃತ್ವದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರಲು ರಂಗ ಸಜ್ಜಾಗಿದೆ. ರಾಷ್ಟ್ರಪತಿಗಳ ಆಡಳಿತವನ್ನು ಹಿಂತೆಗೆದುಕೊಳ್ಳಬೇಕೆಂದು ಕೇಂದ್ರ ಮಂತ್ರಿಮಂಡಲ ತೀರ್ಮಾನಿಸಿದೆ. ಈ ಸಂಭವ ಅತ್ಯಂತ ದುರದೃಷ್ಟಕರ ಸಂಗತಿ. ಕರ್ನಾಟಕದ ಜನತೆಗೆ, ಕರ್ನಾಟಕದ ಒಟ್ಟು ಹಿತಕ್ಕೆ, ಕನ್ನಡ ಭಾಷೆಗೆ ಇದರಿಂದಾಗುವ ಹಾನಿ ಅಪಾರ.

ಕರ್ನಾಟಕವನ್ನು ಗುಜರಾತ್ ಮಾಡುವ, ಬಾಬಾಬುಡನ್‌ಗಿರಿಯನ್ನು ದಕ್ಷಿಣದ ಆಯೋಧ್ಯೆಯನ್ನಾಗಿ ಮಾಡುವ ಅವರ ಬಹಿರಂಗ ಘೋಷಣೆಗಳ ಕಾರ್ಯಗತಗೊಳಿಸುವುದು, ಕರಾವಳಿಯಲ್ಲಿ ನಿರಂತರವಾಗಿ ಗೋವಧೆಯ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ಧಾಳಿಗಳು, ಹಿಂದೂ-ಮುಸ್ಲಿಂ ಹುಡುಗ-ಹುಡುಗಿಯರು ಮಾತನಾಡುವುದು ಕಂಡರೆ ಸಾಕು, ಹಿಂದೂ ಮಾಲೀಕರ ಅಡಿಯಲ್ಲಿ ಮುಸ್ಲಿಂ, ಮುಸ್ಲಿಂ ಮಾಲೀಕರಡಿಯಲ್ಲಿ ಹಿಂದೂಗಳು ಕೆಲಸ ಮಾಡುತ್ತಿದ್ದರೆ ಸಾಕು, ಅವುಗಳನ್ನೇ ನೆಪ ಮಾಡಿಕೊಂಡು ಮಾಡುವ ದಾಂಧಲೆ, ಅನೇಕ ದೇವರ ಉತ್ಸವ, ಹಬ್ಬಗಳ ಸಮಯದಲ್ಲಿನ ಆಟಾಟೋಪ ಇವುಗಳನ್ನು ಇಡೀ ಕರ್ನಾಟಕಕ್ಕೆ ಹಬ್ಬಿಸುವ ವಿರಾಟ್ ಹಿಂದೂ ಸಮಾವೇಶಗಳ ಪ್ರಯತ್ನ ಇತ್ಯಾದಿಗಳು ಸಂಘ ಪರಿವಾರದ ಶಕ್ತಿಯ ಬೆಳವಣಿಗೆ, ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳಿಗೆ ಇನ್ನಷ್ಟು ಗೂಂಡಾ ಪಡೆಗಳು, ಭೂಮಾಲಕ, ಬಂಡವಾಳಶಾಹಿಗಳು ಇತರ ಸ್ವಾರ್ಥಪರ ಶಕ್ತಿಗಳು, ಮಠ ಮಾನ್ಯಗಳು ಸೇರಿ ಅವುಗಳ ಹಾರಾಟ ಮತ್ತಷ್ಟು ಹೆಚ್ಚುವುದು. ಅಧಿಕಾರದ ಸುತ್ತ ಸುತ್ತುವ ಬುದ್ಧಿಜೀವಿಗಳ, ವಿ.ವಿ. ಕಾಲೇಜುಗಳ ಪ್ರಾಧ್ಯಾಪಕ ವೃಂದ ಇತ್ಯಾದಿಗಳು ಸಂಘ ಪರಿವಾರದ ತೆಕ್ಕೆಗೆ ಬೀಳುವುದು.

ಹೀಗೆ ಒಟ್ಟಾರೆಯಾಗಿ ಕರ್ನಾಟಕದ ಕೋಮು ಸೌಹಾರ್ದತೆ ಅಪಾಯಕ್ಕೊಳಗಾಗುವುದು. ನಿರಂತರ ಕೋಮುದ್ವೇಷದ ಬೇಗೆಯಲ್ಲಿ ಬೇಯುವುದು ಮುಂದೆ ಕರ್ನಾಟಕದ ಜನತೆ ನಿರಂತರವಾಗಿ ಎದುರಿಸಬೇಕಾಗಿರುವ ಕಟು ವಾಸ್ತವ.

ಇವುಗಳ ಜೊತೆಗೆ ರಾಜ್ಯದ ಆಡಳಿತ ಯಂತ್ರದ ವಿ.ವಿ.ಗಳ ಕೋಮುವಾದೀಕರಣ, ಈ ಸರ್ಕಾರ ಹೋದ ಮೇಲೂ ಪರಿಣಾಮ ಬೀರುವ ಅಪಾಯವಿದೆ. ಆತಂಕಕ್ಕೊಳಗಾದ, ದಾಳಿಗೊಳಗಾದ ಮುಸ್ಲಿಂ ಅಲ್ಪಸಂಖ್ಯಾತರು, ಅದರಲ್ಲಿಯೂ ಯುವಜನರು ಅಲ್ಪಸಂಖ್ಯಾತ ಮೂಲಭೂತವಾದಿಶಕ್ತಿಗಳು, ಕರ್ನಾಟಕ ಫೋರಂ ಫಾರ್ ಡಿಗ್ನಿಟಿಯಂತಹ ಅಪಾಯಕಾರಿ ಸಂಘಟನೆಗಳ ಕಡೆಗೆ ಒಲಿಯುವ ಸಾಧ್ಯಗಳೂ ಹೆಚ್ಚಿವೆ.


ಒಕ್ಕಲಿಗ ರಾಜಕೀಯ ಪ್ರಧಾನ್ಯತೆಯ ವಲಯದಲ್ಲಿ ಬಿಜೆಪಿ ನೆಲೆಗಳನ್ನು ಗಳಿಸಿಕೊಳ್ಳುವ, ಜೆಡಿ(ಎಸ್) ದುರ್ಬಲವಾಗುವ, ಕುಗ್ಗುವ ಅಪಾಯಗಳು ರಾಜ್ಯ ಮುಂದಿನ ಹಲವಾರು ವರ್ಷ ದೀರ್ಘಕಾಲಿಕ ಪರಿಣಾಮವನ್ನು ಬೀರಬಹುದಾಗಿದೆ. ಬಿಜೆಪಿ ನೇತೃತ್ವದ ಸರ್ಕಾರವೆಂಬ ಅಪಾಯ ಕರ್ನಾಟಕದ ಮೇಲೆರಗಲು ಕಾರಣರಾದ ಜಾತ್ಯಾತೀತ ಜನತಾದಳದ ಸಂದರ್ಭಸಾಧಕತನ, ಕಾಂಗ್ರೆಸ್‌ನ ಬೇಜವಾಬ್ದಾರಿತನವನ್ನು ಜನತೆ ಖಂಡಿಸಬೇಕು. ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಅವಕಾಶವಾಗದಂತೆ, ಅಲ್ಪಸಂಖ್ಯಾತರ ಹಿತಗಳಿಗೆ ಧಕ್ಕೆಯಾಗದಂತೆ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಲು ಒತ್ತಡ ಹೇರಬೇಕು.

ಹೀಗೆ ಕೋಮುವಾದಿ ಶಕ್ತಿಗಳ ಬೆಳವಣಿಗೆಯಾಗುವ ಪರಿಸ್ಥಿತಿಯಿರುವಾಗಲೇ ಕರ್ನಾಟಕದ ಜನತೆ ಈಗಲೂ ಮೂಲಭೂತವಾಗಿ ಜಾತ್ಯಾತೀತ ಮನೋಭಾವದವರಾಗಿದ್ದಾರೆ. ಕೋಮುವಾದವನ್ನು ಸಹಿಸದವರು. ಆದರೆ ಕರ್ನಾಟಕದಲ್ಲಿ ಜಾತ್ಯಾತೀತ ಸಿದ್ಧಾಂತಕ್ಕೆ ದೃಢವಾದ ಬದ್ಧತೆಯನ್ನು ತೋರುತ್ತಿರುವ ರಾಜಕೀಯ ಪಕ್ಷ ಸಂಘಟನೆಗಳು ವಿರಳ ಮತ್ತು ಶಕ್ತಿ ಕಡಿಮೆ.

ಇಂದಿನ ಅಪಾಯದ ಸಂದರ್ಭದಲ್ಲಿ ಈ ಎಲ್ಲಾ ಶಕ್ತಿಗಳೂ ಒಗ್ಗಟ್ಟಾಗಿ ಪ್ರಜಾಸತ್ತಾತ್ಮಕ ದಾರಿಯಲ್ಲಿ ವಿಶಾಲ ಐಕ್ಯತೆಯನ್ನು ರೂಪಿಸಿ ಕೋಮುವಾದಿಗಳನ್ನು ಎದುರಿಸಬೇಕಾಗಿದೆ. ನಿರಂತರ ಎಚ್ಚರ ವಹಿಸಬೇಕಾಗಿದೆ.

■ ಜೆ.ಎನ್.ನಾಗರಾಜ್

ಇದೆಂಥಾ ಜನಾಂದೋಲನ ?



■ ಎಸ್.ವೈ.ಗುರುಶಾಂತ್

ಯಾತ್ರೆ ಜಾತ್ರೆಗಳಿಂದಲೇ ಎಲ್ಲವನ್ನು ದಕ್ಕಿಸಿಕೊಳ್ಳಬಹುದು ಎಂದು ಅಧಿಕಾರದ ಕುರ್ಚಿಯ ಸುತ್ತಲೇ ಸುತ್ತುತ್ತಿರುವ ರಾಜಕೀಯ ಪಕ್ಷಗಳ ನಾಯಕರು ಭಾವಿಸಿದಂತಿದೆ. ಅಧಿಕಾರ ತನ್ನ ಜನ್ಮ ಸಿದ್ಧ ಹಕ್ಕೆಂದೇ ಪ್ರತಿಪಾದಿಸಿದ ಬಿಜೆಪಿ ಜನರ ಯಾವುದೇ ಪ್ರಶ್ನೆಗಳನ್ನು ಹೊಂದಿರದೇ ಅಧಿಕಾರ ದಾಹವೇ ಪ್ರಧಾನ ಕೇಂದ್ರವನ್ನಾಗಿ ರಾಜ್ಯದಾದ್ಯಂತ ಯುದ್ಧ ಸಾರಿದ್ದು, ಮಹಾತ್ಮಗಾಂಧಿ ರಸ್ತೆಯ ಕಾಲುದಾರಿಯಲ್ಲಿ ಮಲಗಿದ್ದು, ಕೊನೆಗೆ ಆ ಘನ ಕಾರ್ಯಕ್ಕೆ ದೆಹಲಿಯವರಿಗೂ ದಂಡಯಾತ್ರೆ ನಡೆಸಿದ್ದು ಇದೆ. ಹೇಗೋ ಒಂದು ಸರ್ಕಾರ ರಚಿಸಿದರೆ ಸಾಕು. ಅಧಿಕಾರದ ದೋಣಿಯಲ್ಲಿ ಹಾಯಾಗಿಯೇ ತೇಲಿ ಬಿಡಬಹುದು ಎಂದೇ ಹಪಾಹಪಿಸುವ ಜನ ಪ್ರತಿನಿಧಿಗಳೆನ್ನಿಸಿಕೊಂಡ ಆ ಶಾಸಕರು ದೆಹಲಿ ತಲುಪಿದರೂ ಒಂದೇ ನೆರೆ, ಬರ ಇತ್ಯಾದಿ ಪ್ರಶ್ನೆಗಳನ್ನು ಎತ್ತದಿರುವುದು ಅವರ 'ಕಾಳಜಿ' ಯನ್ನು ನಗ್ನಗೊಳಿಸಿದೆ.

> ಕಾಂಗ್ರೆಸ್‌ನ ಜನಾಂದೋಲನದಲ್ಲಿ ಜನರ ಜ್ವಲಂತ ಪ್ರಶ್ನೆಗಳೇ ಮಾಯ! ಅಲ್ಲಿದ್ದ ವ್ಯಕ್ತಿಗಳ ಪ್ರತಿಷ್ಠೆ, ಅಹಂಕಾರ ಮಾತುಗಳು ಜನರಿಗೇನು ಪ್ರಯೋಜನ, ಕೋಮುವಾದಿ ಬಿಜೆಪಿಯನ್ನು ಇದರಿಂದ ಎದುರಿಸಲಾದೀತೇ?

20 ತಿಂಗಳ ನಂತರದಲ್ಲಿ ಅಧಿಕಾರ ಹಸ್ತಾಂತರದ ವಿಷಯದಲ್ಲಿ ಬಿಜೆಪಿ ಜೆಡಿ(ಎಸ್) ನಡುವಿನ ಮೈತ್ರಿ ಮುರಿದ ಬಳಿಕ, ಬಿಜೆಪಿಯನ್ನು ದೂರವಿಟ್ಟು ಮತ್ತೆ ಜೆಡಿ(ಎಸ್) ಜೊತೆಗೂಡಿ ಸರ್ಕಾರ ರಚಿಸುವ ಒಂದು ಅವಕಾಶವನ್ನು ಕಾಂಗ್ರೆಸ್ ತಪ್ಪಿಸಿಕೊಂಡಿತು ಮತ್ತು ಜೆಡಿ(ಎಸ್) ಪಕ್ಷದ ನಡುವೆ ತನ್ನ ಅಸ್ತಿತ್ವ ತೋರಿಸಿಕೊಳ್ಳಲು ಕಾಂಗ್ರೆಸ್ ನಡೆಸಿದ ಜನಾಂದೋಲನ ಎಂಬ ಕಸರತ್ತು ಕಳಪೆಯಾಗಿತ್ತು. ಅರಮನೆ ಮೈದಾನದಲ್ಲಿ ಒಂದಿಷ್ಟು ಜನರನ್ನು ಸೇರಿಸಲಾಗಿತ್ತಾದರೂ, ಈ 'ಜನಾಂದೋಲನ'ದಲ್ಲಿ ಜನರ ಹಿತಗಳು ಮಾಯವಾಗಿ ಬಿಟ್ಟಿದ್ದವು. ಅಲ್ಲಿ ನಡೆದದ್ದು ಕಾಂಗ್ರೆಸ್ ನಾಯಕರ ಪ್ರತಿಭಾ ಪ್ರದರ್ಶನದ ಭಾಷಣಗಳು, ಮೂದಲಿಕೆಯ, ಅಹಂಕಾರದ, ವ್ಯಕ್ತಿಗತ ಹಿತಗಳ ಮಾತುಗಳೇ. ಯಾಕೆ ಚುನಾವಣೆಗಳಿಗೆ ತಾವು ಹೋಗಬೇಕೆಂದು ಬಯಸುತ್ತೇವೆ, ಇದರಲ್ಲಿ ಜನರ ಪ್ರಶ್ನೆಯೇನು ಎಂಬ ಬಗ್ಗೆ ಒಂದು ಚಕಾರವೂ ಹೊರಬರಲಿಲ್ಲ. ಅಧಿಕಾರ ಹಸ್ತಾಂತರದ ಬೀದಿ ರಂಪಾಟದಲ್ಲಿ ಆಡಳಿತಯಂತ್ರ ಜಡಗೊಂಡು ಜನಸ್ಪಂದನವೇ ಇಲ್ಲದೆ ಕುಸಿದ ಬಗ್ಗೆ, ನೆರೆಹಾನಿ, ಪಡಿತರ, ಕೋಮುವಾದದ ಪ್ರಶ್ನೆ ಇತ್ಯಾದಿ ಒಂದಶಗಳತ್ತ ಇಣುಕಲೂ ಇಲ್ಲ. ಕಾಂಗ್ರೆಸ್ ನಾಯಕರ ವೈಭವೀಕರಣ, ಬೇರೆ ಪಕ್ಷಗಳ ನಾಯಕರ ಮೂದಲಿಕೆಯಲ್ಲೇ ಈ 'ಜನಾಂದೋಲನ' ಎಂಬುದು ಮುಗಿದುಹೋಯಿತು.

ಈಗ ಸರ್ಕಾರದ ನೇತೃತ್ವ ಬಿಜೆಪಿಗೆ ಬರುತ್ತಿದೆ. ಆಯಕಟ್ಟಿನ ಖಾತೆಗಳೂ



ಶಾಸಕರನ್ನು ಖರೀದಿಸಲು ನಡೆಸಿದ ಯತ್ನಗಳು, ಚುನಾವಣೆಗಳಿಗೆ ಹೋಗಲು ಹೆದರಿದ ಜೆಡಿ(ಎಸ್) ಶಾಸಕರು ಮತ್ತೆ ಬಿಜೆಪಿಯತ್ತ ಸರಿಯುವಂತೆ ಮಾಡಿದುದು ಇತಿಹಾಸ. ಕಾಂಗ್ರೆಸ್‌ನ ತಪ್ಪು ನಿರ್ಧಾರ, ಮೈತ್ರಿಯುಗದಲ್ಲಿಯೂ ಬದಲಾದ ಸರ್ವಾಧಿಕಾರದ ಧೋರಣೆಗಳು ವ್ಯಾಪಕವಾದ ಟೀಕೆಗಳಿಗೆ ಕಾಂಗ್ರೆಸ್‌ನ್ನು ಒಳಪಡಿಸಿದವು. ಚುನಾವಣೆಗೆ ಹೋಗಬೇಕು ಎಂದು ಪ್ರತಿಪಾದಿಸಿದ ಕಾಂಗ್ರೆಸ್ ಪಕ್ಷವು ಅದಕ್ಕಾಗಿಯೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಯತ್ನಿಸಿತು.

ಬಿಜೆಪಿಯ ಬೀದಿ ಶೋಗಳು, ಟಿ.ವಿ. ಪತ್ರಿಕೆ ಮಾಧ್ಯಮದವರು ನಡೆಸಿದ ಬಿಜೆಪಿ ಪರ ಅಬ್ಬರದ ಪ್ರಚಾರಗಳ ಅದರಲ್ಲಿಯೇ ಕೇಂದ್ರೀಕರಣವಾಗಬಹುದು. ಅಧಿಕಾರ ಬಳಸಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಶತಾಯಗತಾಯ ಬಿಜೆಪಿ ಆರ್‌ಎಸ್‌ಎಸ್ ಯತ್ನಿಸುತ್ತವೆ. ಹೇಗಾದರೂ ಕರ್ನಾಟಕದಲ್ಲಿ ದಕ್ಷಿಣ ಭಾರತದಲ್ಲಿ ಸರ್ಕಾರ ನೇತೃತ್ವ ವಹಿಸಿದರೆ ಅದನ್ನೇ ಬಳಸಿ ಕುಸಿಯುತ್ತಿರುವ ಅದರ ಪ್ರಭಾವವನ್ನು ಮತ್ತೆ ಚೇತರಿಸಿಕೊಳ್ಳಬಹುದು ಎಂಬುದು ಅದರ ಲೆಕ್ಕಾಚಾರ. ಹೀಗಾಗಿ ಮುಂದಿನ ದಿನಗಳಲ್ಲಿ ತನ್ನ, ಕೋಮುವಿಭಜನೆಯ, ಭ್ರಷ್ಟಾಚಾರದ ಕರಾಳ ಬಾಹು ಚಾಚಲಿದೆ. ಬಿಜೆಪಿಯ ರಾಜಕೀಯ ತಂತ್ರಗಾರಿಕೆ, ಅದರ ನೀತಿಗಳ ಬಗ್ಗೆ ಚಕಾರ ಎತ್ತದೇ ಕಾಂಗ್ರೆಸ್‌ನ ಕಾರ್ಯಕರ್ತರು ಅದೆಂತಹ ಪಾತ್ರ ನಿರ್ವಹಿಸಿಯಾರು? ಅಧಿಕಾರದ ಕುರ್ಚಿಯ ಸುತ್ತ ಓಡಾಡುವ ಈ ನಾಯಕರು ಅದನ್ನು ಯೋಚಿಸಬೇಕು.

ಅಕ್ರಮ ಸಂಪತ್ತು

ಅಕ್ರಮ ಸಂಪತ್ತನ್ನು ಗಳಿಸಿದ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತರು ಧಾಳಿ ಮಾಡಿ ವಶಪಡಿಸಿಕೊಂಡ ಹಣ ಹಾಗೂ ಆಸ್ತಿ ವಿವರಗಳು ಭ್ರಷ್ಟಾಚಾರದ ಬ್ರಹ್ಮಾಂಡದಲ್ಲಿ ಒಂದು ಸಣ್ಣ ಚುಕ್ಕಿ ಅಷ್ಟೇ. ಬೀದರ್, ಬಳ್ಳಾರಿ ಮತ್ತು ಬೆಂಗಳೂರು ನಗರಗಳಲ್ಲಿ ಪೋಲೀಸ್, ಸಾರಿಗೆ, ನೀರಾವರಿ ಇಲಾಖೆಯ 13 ಅಧಿಕಾರಿಗಳ ಮನೆ ಮೇಲೆ ಏಕಕಾಲಕ್ಕೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದಾಗ 50 ಕೋಟಿಗೂ ಅಧಿಕ ಹಣ ಮತ್ತು ಸ್ಥಿರ ಆಸ್ತಿಗಳ ದಾಖಲೆಗಳು ದೊರೆತಿವೆ. [illegible] ಕೈಗೆ ಸಿಗದಂತೆ ಮರೆ ಮಾಚಲಾಗಿದೆ. ಹೀಗೆ ದಾಖಲೆಗಳನ್ನು ಪರಾರಿ ಮಾಡಲು ದಾಳಿಗೆ ಮೊದಲೇ ಮಾಹಿತಿ ಧಾಳಿಗೊಳಗಾಗಿರುವ ಅಧಿಕಾರಿಗೆ ತಲುಪಿತ್ತು ಎಂಬುದು, ಅದು ಲೋಕಾಯುಕ್ತರ ಕಛೇರಿಯಿಂದಲೇ ಸೋರಿದೆ ಎಂಬುದಾಗಿ ಆಯುಕ್ತರೇ ಅನುಮಾನಿಸಿರುವುದು ಭ್ರಷ್ಟರ ಕೈ ಜಾಲ ಎಲ್ಲಿಯವರೆಗೂ ಚಾಚಿದೆ ಎಂಬುದನ್ನು ತೋರಿಸುತ್ತದೆ.

ಅದೇ ಸುಮಾರಿನಲ್ಲಿ ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರ ಮನೆಗಳಿಗೆ ಕೇಂದ್ರ ಆದಾಯ ತೆರಿಗೆ ಧಾಳಿ ಮಾಡಿ ಅಪಾರ ಪ್ರಮಾಣದ ಅಕ್ರಮ ಹಣ, ಆಸ್ತಿ ಪತ್ತೆ ಮಾಡಿದ್ದಾರೆ. ಇದರಲ್ಲಿ ಬಿಜೆಪಿ ಶಾಸಕ ಜನಾರ್ಧನರೆಡ್ಡಿಯೂ ಒಬ್ಬರು. ಸಿ.ಡಿ.ರೆಡ್ಡಿ ಕುಟುಂಬದ ದರ್ಪದ ಮಾತಿನಲ್ಲಿ ಹಿಂದೆ ಇಂತಹ ಅಪಾರ ಅಕ್ರಮ ಸಂಪತ್ತೇ ಇದೆಯೆಂಬುದು ಸ್ಪಷ್ಟ.

ಇಂತಹವರ ವಿರುದ್ಧ ಅತ್ಯಂತ ಕಠಿಣ, ನಿಷ್ಠುರ ಕ್ರಮವನ್ನು ಜರುಗಿಸಬೇಕು. ಕೇವಲ ಲೋಕಾಯುಕ್ತರು, ತೆರಿಗೆ ಅಧಿಕಾರಿಗಳಿಂದ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಆದಾಗ್ಯೂ ಎಲ್ಲಾ ಕ್ರಮಗಳನ್ನು ಕಠಿಣವಾಗಿ ಬಳಸಿ ಮಟ್ಟ ಹಾಕಬೇಕು. ○

ಇವರೇನು ಮನುಷ್ಯರೋ ಇಲ್ಲ.... ನಕ್ಸಲರೋ ?

ಅದೊಂದು ಗ್ರಾಮ, ಚಿಲ್ಖಾಡಿಯಾ ಅದರ ಹೆಸರು. ಕಳೆದ ಶನಿವಾರ ನಡುರಾತ್ರಿಯಲ್ಲಿ ಅಲ್ಲೊಂದು ಸಾಂಸ್ಕೃತಿಕ ಕಾರ್ಯಕ್ರಮ. ಕ್ರೀಡಾ ಸ್ಪರ್ಧೆಯಲ್ಲಿ ಗದ್ದಿದ್ದಕ್ಕಾಗಿ ಅದು ನಡೆಯುತ್ತಿತ್ತು. ಒಂದು ಗಂಟೆಯ ಸುಮಾರಿನಲ್ಲಿ 25ರಿಂದ 30 ಜನರ ಸಶಸ್ತ್ರ ತಂಡ ಅಲ್ಲಿಗೆ ನುಗ್ಗಿ ಬಂತು. ಏನಾಗುತ್ತಿದೆ ಎಂದು ಅರಿವಾಗುವುದರೊಳಗೆ 18 ಹೆಣಗಳು ಉರುಳಿದವು. ಗುಂಡಿನ ದಾಳಿ, ಬಾಂಬ್ ದಾಳಿ.



ಈ ಹಳ್ಳಿ ಇರುವುದು ಜಾರ್ಖಂಡ್‌ನಲ್ಲಿ, ಸತ್ತವರಲ್ಲಿ ಒಬ್ಬರು ಅನೂಪ್ ಅಂತ. ಆ ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಲಿ ಸಂಸದ ಬಾಬುಲಾಲ್ ಮರಾಂಡಿಯ ಮಗ. ದಾಳಿ ಮಾಡಿದವರು ಈತನನ್ನು ಕೊಲ್ಲಲು ಉದ್ದೇಶಿಸಿದ್ದರಂತೆ. ಕೊಂದರು. ಜೊತೆಗೆ 17 ಜನ ಅಮಾಯಕರನ್ನೂ ಕೊಂದರು.

ಇಷ್ಟು ಜನರನ್ನು ಹೀಗೆ ಕೊಂದವರು ಯಾರು. ಸಿಪಿಐ(ಎಂ) ಪಕ್ಷದವರು. ಗಾಬರಿಯಾಗಬೇಡಿ ಇಲ್ಲಿ ಎಂ ಅಂದರೆ ಮಾವೋವಾದಿ ಅಂತ ಓದಿಕೊಳ್ಳಬೇಕು. ನಾವೇ ಕೊಂದಿದ್ದು ಅಂತ ಅವರೇ ಹೇಳಿಕೊಂಡಿದ್ದಾರೆ. ಅನೂಪನನ್ನು ಕೊಲ್ಲುವ ಭರದಲ್ಲಿ 17 ಜನ ಮುಗ್ಧರನ್ನು ಕೊಂದು ಬಿಟ್ಟರಂತೆ. ಅದಕ್ಕಾಗಿ ಅವರು ಕ್ಷಮೆ ಕೋರುತ್ತಾರಂತೆ.ಹಾಗಂತ ಪತ್ರಿಕೆ ಹೇಳಿಕೆ ಕೊಟ್ಟಿದ್ದಾರೆ. ಕ್ಷಮಿಸುವುದಕ್ಕೆ ಪಾಪ ಅಮಾಯಕರು ಎಲ್ಲಿ ಬದುಕಿದ್ದಾರೆ? ಅವರು ಹೇಗೆ ಕ್ಷಮಿಸಬೇಕು.



ಇದೇ ಜನಗಳು ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಇಂದಿಗೂ ಹಿಂಸಾಚಾರ ನಡೆಸುತ್ತಿರುವುದು. ರಾಸಾಯನಿಕ ಕೈಗಾರಿಕಾ ಸಮುಚ್ಚಯದ ಯೋಜನೆಯನ್ನೇ ಸರ್ಕಾರ ಕೈ ಬಿಟ್ಟಾಗಿದೆ. ಆದರೂ ಹಿಂಸಾಚಾರ. ನಿರಾಶ್ರಿತರ ಶಿಬಿರಗಳಿಗೆ ಅಟ್ಟಲಾಗಿದ್ದ ನೂರಾರು ಸಿಪಿಐ(ಎಂ) ಕಾರ್ಯಕರ್ತರು, ಬೆಂಬಲಿಗ ಕುಟುಂಬ, ಇಂದಿಗೂ ಗ್ರಾಮಕ್ಕೆ ಮರಳಲು ಆಗಿಲ್ಲ. ಗ್ರಾಮಕ್ಕೆ ಬಂದರೆ ಬಾಂಬು ಬಂದೂಕಿನ ದಾಳಿ. ದಿನದಲ್ಲಿ ದೇಶದ ಯಾವುದಾದರೂ ಮೂಲೆಯಲ್ಲಿ ನೆಲಬಾಂಬ್, ಬಾಂಬ್‌ಗಳಿಂದಲೋ ಬಂದೂಕಿನಿಂದಲೋ.ಒಂದಷ್ಟು ಹೆಣ ಕಡವಿ, ರಕ್ತ ಹರಿಸದಿದ್ದರೆ ಈ 'ನಕ್ಸಲ್ ಕ್ರಾಂತಿ ದೇವಿ'ಗೆ ತೃಪ್ತಿಯೇ ಇಲ್ಲವೇನೋ?

ಜನರು ತಮ್ಮ ಮಾತಿನಲ್ಲಿ ಇನ್ನು ಮುಂದೆ 'ಇವರೇನು ಮನುಷ್ಯರೋ ಇಲ್ಲ ರಾಕ್ಷಸರೋ' ಅನ್ನುವ ಬದಲಿಗೆ, ಇವರೇನು ಮನುಷ್ಯರೋ ಇಲ್ಲ ನಕ್ಸಲರೋ' ಅನ್ನಲು ಶುರು ಮಾಡಿದರೂ ಆಶ್ಚರ್ಯಪಡಬೇಕಿಲ್ಲ.

ಇಂಥವರೂ ಇದ್ದಾರೆ !

ಆಟೋ ಚಾಲಕರು ಅಂದರೆ ಹಲವಾರು ಜನ ಅವರೆಲ್ಲ ಪುಂಡರು, ಪೋಕರಿಗಳೂ ಎನ್ನುತ್ತಾರೆ. ಕರೆದ ಕಡೆ ಬರುವುಲ್ಲ, ಹೆಚ್ಚಿಗೆ ಹಣ ಕೇಳುತ್ತಾರೆ ಎಂಬುದು ಮಾತ್ರವಲ್ಲ ಇದಕ್ಕಿಂತಲೂ ಹೆಚ್ಚಿನ ಆರೋಪ ಮಾಡುವವರು ಇದ್ದಾರೆ.

ಯಾವುದೇ ಉದ್ಯೋಗ ಮಾಡುವವರಲ್ಲೂ ಒಳ್ಳೆಯವರು ಕೆಟ್ಟವರು ಇದ್ದೇ ಇದ್ದಾರೆ. ಹಾಗೆ ಆಟೋಚಾಲಕರಲ್ಲೂ ಸಹ.

ಈ ಉದಾಹರಣೆ ನೋಡಿ. ಅಕ್ಟೋಬರ್ 30ನೇ ತಾರೀಖು. ರಾತ್ರಿ 9.00 ಗಂಟೆಗೆ ಸುಮಾರಿನಲ್ಲಿ ಬೆಂಗಳೂರು ನಗರದ ಜಯನಗರ ಬಡಾವಣೆಯಲ್ಲಿ ಮದುವೆ ಮನೆಯಿಂದ ಹೊರ ಬರುತ್ತಿದ್ದ ಮಹಿಳೆಯರ ಕುತ್ತಿಗೆಗೆ ಕೈ ಹಾಕಿ ಸುಮಾರು 1.5 ಲಕ್ಷ ಮೌಲ್ಯದ ಒಡವೆ ಕಿತ್ತುಕೊಂಡು ಇಬ್ಬರು ಯುವಕರು ಬಜಾಜ್ ಚೇತಕ್ ಮೂಲಕ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ.

ಜನರ ಕೂಗಾಟ ಕೇಳಿ ಸಮೀಪದಲ್ಲಿದ್ದ ಆಟೋ ಚಾಲಕ ಟಿ.ಎನ್. ಮಂಜುನಾಥ್ ಮತ್ತು ಮಹಿಳೆಯರ ಸಂಬಂಧಿಕರು ಕಳ್ಳನನ್ನು ಬೆನ್ನಟ್ಟಿ ಹಿಡಿದೇ ಬಿಟ್ಟಿದ್ದಾರೆ. ಟಿ.ಎನ್.ಮಂಜುನಾಥ್ ಆಟೋ ರಿಕ್ಷಾ ಚಾಲಕರ ಸಂಘ (ಎಆರ್‌ಡಿಯು) ಕಾರ್ಯಕರ್ತರು. ಎ.ಆರ್.ಡಿ.ಯು. ಸಂಘಟನೆಯಂತೂ ಚಾಲಕರಲ್ಲಿ ಇಂತಹ ಪ್ರವೃತ್ತಿ, ಸಮಾಜ ಮುಖಿಯಾದ ನಡವಳಿಕೆಯನ್ನು ಬೆಂಬಲಿಸುತ್ತಾ, ಅದನ್ನೇ ಬೆಳೆಸಲು ಶ್ರಮಿಸುತ್ತಿದೆ.

ಮಂಜುನಾಥರವರಿಗೆ ಅಭಿನಂದನೆ

ಪುತ್ರ ಪ್ರೇಮಿ 'ಪತ್ರ' ಕರ್ತ

ಮೊಬೈಲ್ ಫೋನ್ ಬಂದ ನಂತರ ಪತ್ರ ಬರೆಯುವ ಸಂಸ್ಕೃತಿ ಸಂಪೂರ್ಣ ನಿರ್ನಾಮ ಆಗಿದೆ. ಅಂಥದ್ರಲ್ಲಿ ಇಡೀ ಕರ್ನಾಟಕದಲ್ಲಿ ಈ ಸಂಸ್ಕೃತಿಯನ್ನು ಉಳಿಸಿಕೊಂಡಿರುವವರೆಂದರೆ ಸನ್ಮಾನ್ಯ ಶ್ರೀ ದೇವೇಗೌಡರು-ಕನ್ನಡನಾಡಿನ ವಿಕಮೇವಾದ್ವಿತೀಯ 'ಪತ್ರ' ಕರ್ತ! ಇವರ ಇತ್ತೀಚಿನ ಪತ್ರ 'ಸುಖ ಸರ್ಕಾರಕ್ಕೆ 12 ಸೂತ್ರಗಳು' ಇದರ ಬಗ್ಗೆ ಬಿಜೆಪಿಯವರಾದಿಯಾಗಿ ಬಹಳಷ್ಟು ಜನ ತಪ್ಪು ತಿಳಿದಿದ್ದಾರೆ. ಈಗ್ಯಾಕೆ ಬರೀಬೇಕಾಗಿತ್ತು ಈ ಮುದ್ದ ಅಂತ ಕೆಲವು ಜೆಡಿಎಸ್ ಶಾಸಕರೂ ಗೊಣಗಾಡಿದ್ದಾರೆ. ಆದರೆ ಈ ಸೂತ್ರಗಳು ಬಿಜೆಪಿ-ಜೆಡಿ(ಎಸ್) ಮೈತ್ರಿ ಕೂ(ಕಾ)ಟಕ್ಕೆ ಮಾತ್ರ ಅಲ್ಲ ದೇಶದ ಯಾವುದೇ ರಾಜ್ಯವಾಗಬಹುದು, ಅಥವಾ ಕೇಂದ್ರಕ್ಕೆ ಆಗಬಹುದು. ಕಲಬೆರಕೆ ಸರ್ಕಾರಗಳಿಗೆ 'ಮಾದರಿ' ಆಗಬಲ್ಲ ಸೂತ್ರಗಳು ಇವು. ಭಗವದ್ಗೀತೆ ಎಲ್ಲರಿಗೂ ಸುಲಭದಲ್ಲಿ ಅರ್ಥವಾಗುವಂತದ್ದಲ್ಲ, ಆದ್ದರಿಂದ ಅನೇಕರು ಅದಕ್ಕೆ ಭಾಷ್ಯಗಳನ್ನು ಬರೆದು ಅದರ ಅರ್ಥ ವಿವರಿಸಿದ್ದಾರೆ. ಅಂತೆಯೇ ಈ ಸೂತ್ರಗಳ ಬಗ್ಗೆಯೂ ಕೆಲವು 'ಪನ್'ಡಿತರು ಭಾಷ್ಯವನ್ನು ಬರೆದಿದ್ದು ಅವು ಹೀಗಿವೆ: (ಸೂಚನೆ: 12 ಸೂತ್ರದ ಕ್ರಮ ಪ್ರಕಾರ ಅಲ್ಲ ಪನ್‌ಡಿತರು ಅರ್ಥ ಮಾಡಿಕೊಂಡಿರುವಷ್ಟು ಮಾತ್ರ)

1. ಒಂದು ಮುಖ್ಯಮಂತ್ರಿ ಹುದ್ದೆಯ ಬದಲು ಎರಡು ಸಮಾನಾಂತರ ಮುಖ್ಯಮಂತ್ರಿ, ಇನ್ನೊಂದು ಅಪ ಮುಖ್ಯಮಂತ್ರಿ

2. ಮುಖ್ಯವಲ್ಲದ ಮಂತ್ರಿಗಳ ಖಾತೆಯನ್ನು ಒಳ್ಳೆ ಕಮಾಯಿ ಇರುವ ಖಾತೆಗಳು, ಸುಮಾರಾದವು ಹಾಗೂ ಕೆಲಸಕ್ಕೆ ಬಾರದವು ಎಂದು ವಿಂಗಡಿಸಬೇಕು.

3. ಒಳ್ಳೆ ಕಮಾಯಿ ಖಾತೆಗಳನ್ನು ಸರಿಯಾಗಿ ಹಂಚಿಕೊಳ್ಳತಕ್ಕದ್ದು.

4. ಎಲ್ಲರೂ ಅವರವರ ಶಕ್ತ್ಯಾನುಸಾರ ತಿಂದುಕೊಳ್ಳತಕ್ಕದ್ದು.

5. ನಾವು ತಿಂದಿದ್ದರ ಬಗ್ಗೆ ನೀವು, ನೀವು ತಿಂದಿದ್ದರ ಬಗ್ಗೆ ನಾವು 'ಕಣ್ಣು' ಹಾಕಬಾರದು. ಯಾಕೆಂದರೆ ತಿನ್ನುವಾಗ 'ಕಣ್ಣು' ಹಾಕಿದರೆ ಹೊಟ್ಟೆನೋವು ಬರುತ್ತದೆಂದು ಹಿರಿಯರು ಹೇಳುತ್ತಾರೆ. (ಇದು ಸರಿಯಾದ ಮಾತೇ ಅಲ್ಲವೇ? ಎಲ್ಲರೂ ಯಥಾಶಕ್ತಿ ತಿನ್ನಲು ಅವಕಾಶವಿರುವಾಗ ಬೇರೆಯವರು ತಿನ್ನುವ ಬಗ್ಗೆ ಸಾ ರ್ವ ಜ ನಿ ಕ ವಾ ಗಿ ಮಾ ತ ನಾ ಡು ವು ದು ತಪ್ಪಲ್ಲವೇ? ಸಾರ್ವಜನಿಕರಿಗೆ ತಿಳಿಯದ ವಿಚಾರವೇ ಇದು? ತಿಳಿದ ವಿಚಾರವನ್ನೇ ಹೇಳಿ ಹೇಳಿ ಬೋರ್ ಮಾಡುವುದು ಸರಿಯೇ? ಎಂಥಾ ಸಾರ್ವಜನಿಕ ಹಿತ ಚಿಂತನೆ ಅಲ್ಲವೇ ಇದು?)

6. ಯಾರಿಗಾದರೂ 'ಅವಸರ' ವಾದಾಗ 'ವಿಸರ್ಜನೆ' ಮಾಡಬೇಕು ಸರಿಯೇ ತಾನೇ? ಬರೀ ತಿನ್ನುತ್ತಲೇ ಇದ್ದು 'ವಿಸರ್ಜನೆ' ಆಗದಿದ್ದರೆ ಆರೋಗ್ಯ ಕೆಡುತ್ತದೆ ಅಲ್ಲವೇ?

ಹೀಗೆ ಇನ್ನೂ ಉಳಿದ ಸೂತ್ರಗಳ ಬಗ್ಗೆ 'ಪನ್'ಡಿತರು ಭಾಷ್ಯ ಬರೆಯಲು ತಿಣುಕಾಡುತ್ತಿದ್ದಾರೆ. ಯಾಕೆಂದರೆ ಅಷ್ಟು ಸುಲಭದಲ್ಲಿ ಅರ್ಥವಾಗುವಂಥದ್ದಲ್ಲ, ಇತ್ಯರ್ಥವೂ ಆಗುವಂಥದ್ದಲ್ಲ ಈ 'ಪತ್ರ' ಕರ್ತನ ಪತ್ರಗಳು. ಉದಾಹರಣೆಗೆ ನೋಡಿ, ತಮ್ಮ ಪಕ್ಷದ ಶಾಸಕರೆಲ್ಲ ಅನರ್ಹರು ಅಂತ ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ. ಆದರೂ ಅನರ್ಹ ಶಾಸಕರೆಲ್ಲ ಇನ್ನೂ ಅವರ ಪಕ್ಷದಲ್ಲೇ ಇದ್ದಾರೆ. ಇವರ ಪತ್ರದ ಮರ್ಮ ಇನ್ನೂ ಅರ್ಥವಾಗದ ಸ್ಪೀಕರ್‌ರವರು ಅದರ ವ್ಯಾಖ್ಯಾನ ತಿಳಿಸಲು ಗೌಡರನ್ನೇ ಕರೆದಿದ್ದಾರೆ. ಇನ್ನೊಂದು ಉದಾಹರಣೆಯೆಂದರೆ ಆ ಕಡೆ ರಾಜ್ಯಪಾಲರಿಗೆ 'ವಿಸರ್ಜಿಸಿ' ಅಂತ ಪತ್ರ ಬರೆದಿದ್ದಾರೆ. ಈ ಕಡೆ ಪುತ್ರನನ್ನು ಸರ್ಕಾರ ರಚಿಸಲು ಕಳಿಸಿದ್ದಾರೆ. ರಾಜ್ಯಪಾಲರಿಗೂ ಇದು ಅರ್ಥವಾಗದೇ ಸಂವಿಧಾನ ತಜ್ಞರನ್ನೇ ಕರೆದು ಸಮಾಲೋಚಿಸಬೇಕಾಯಿತು.

ಭಲೇ, ಪುತ್ರ ಪ್ರೇಮಿ 'ಪತ್ರ' ಕರ್ತ ಸನ್ಮಾನ್ಯ ಶ್ರೀ ದೇವೇಗೌಡರೇ, ನಿಮ್ಮ ಪತ್ರಾಸ್ತ್ರಗಳು ಇನ್ನಷ್ಟು ಮತ್ತಷ್ಟು ನಿಮ್ಮ ಬತ್ತಳಿಕೆಯಿಂದ ಹೊರಬರುತ್ತಿರಲಿ. ಪನ್‌ಡಿತರ ತಲೆಗಳಿಗೆ ಇನ್ನಷ್ಟು ಕೆಲಸ ಸಿಗಲಿ.

ಕಸ್ತೂರಿ

ಒಡಲಲ್ಲಿ ನೂರೆಂಟು ಬೇಗುದಿ ಹೊತ್ತ ರೈತರು ರಾಜಧಾನಿಯಲ್ಲಿ ಬೃಹತ್ ರ್‍ಯಾಲಿ ಮಾಡಿದ್ದಾರೆ. ಇಲ್ಲಿ ಅವರು ಬಾಧಿಸುತ್ತಿರುವ ಪ್ರಶ್ನೆಗಳು, ಚಳುವಳಿಯ ಒಂದು ವರದಿ



ರೈತರ ಒಡಲ ಬೇಗುದಿಯೂ ಮೊಸಳೆಗಣ್ಣೀರಿನ ಆಳುವವರೂ

ಲಕ್ಷ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡು ಮಸಣ ಸೇರಿದರೂ ತಮ್ಮ ಕೃಷಿ ನೀತಿಯನ್ನು ಬದಲಿಸದ ನಮ್ಮ ಆಳುವ ಸರ್ಕಾರಗಳು ಬಂಡವಾಳ ರಕ್ಷಣೆಗಾಗಿ ರಾತ್ರೋರಾತ್ರಿ ಆರ್ಥಿಕ ನೀತಿಗಳನ್ನು ಬದಲಾಯಿಸುತ್ತಿವೆ. ವರ್ಷಕ್ಕೊಮ್ಮೆ ಬಜೆಟ್ ಮಂಡನೆ ಸಂದರ್ಭದಲ್ಲಿ ಕೆಲವು ಕೃಷಿ ನೀತಿಗಳಲ್ಲಿ ಮಾರ್ಪಾಟು ಮಾಡಿ ಸ್ವಲ್ಪ ಹಣ ಮೀಸಲಾಗಿಟ್ಟರೆ ಮುಗಿಯಿತು. ನಂತರ ಅದರ ಪ್ರಶ್ನೆಯೇ ಬರುವುದಿಲ್ಲ.

ನಸ್ಸಿಲ್ಲ

ಡಬ್ಲ್ಯೂಟಿಓ ಒಪ್ಪಂದಗಳು, ವಿಶ್ವ ಬ್ಯಾಂಕ್ ನೀತಿಗಳು, ಐಎಂಎಫ್ ನೀತಿಗಳು ಸೇರಿದಂತೆ, ಭಾರತೀಯ ರಿಸರ್ವ್ ಬ್ಯಾಂಕ್, ಷೇರು ಮಾರುಕಟ್ಟೆ, ವಿದೇಶಿ ವಿನಿಮಯ ಮಾರುಕಟ್ಟೆ, ಸರಕು ವಿನಿಮಯ ಮಾರುಕಟ್ಟೆ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ದೂರಸಂಪರ್ಕ ಸಚಿವಾಲಯ, ಚಿನಿವಾರ ಪೇಟೆ, ವಿದೇಶಿ ಬಂಡವಾಳ ಉತ್ತೇಜನ ಮಂಡಳಿ, ಪೆಟ್ರೋಲಿಯಂ ಸಚಿವಾಲಯ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ, ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ನಾಗರೀಕ ವಿಮಾನಯಾನ ಸಚಿವಾಲಯ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರುವ ಬಹುತೇಕ ಇಲಾಖೆಗಳು ಸಂಸ್ಥೆ, ಸಮಿತಿಗಳು ಇರುವ ಬಂಡವಾಳಶಾಹಿ ಪರವಾದ ನೀತಿಗಳನ್ನು ರೂಪಿಸುತ್ತವೆ. ಶೇಕಡ 10ರಷ್ಟು ಬಂಡವಾಳಶಾಹಿಗಳು, ಶ್ರೀಮಂತರ ಪರವಾಗಿ ಆಡಳಿತ ನಡೆಸಲು ಹಲವಾರು ಇಲಾಖೆ, ಸಚಿವಾಲಯಗಳಿರುವಾಗ ಶೇಕಡ 70 ರಷ್ಟಿರುವ ರೈತ ಸಮುದಾಯದ ಕುರಿತು ನೀತಿಗಳನ್ನು ರೂಪಿಸಲು ಕೇವಲ ಒಂದೋ ಎರಡೋ ಇಲಾಖೆಗಳು ಮಾತ್ರ ಇವೆ ಎಂದರೆ ಇದರ ಗಂಭೀರತೆ ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ರೈತರ ಪರಿಸ್ಥಿತಿ ಕುರಿತು ಚಿಂತಿಸಿದಾಗ ದೇಹದಲ್ಲಿನ ಸಂವೇದನೆಗಳು ವಿಚ್ಛಲಗೊಂಡು ತಮಗರಿವಿಲ್ಲದೆ ಕಣ್ಣುಗಳು ಹನಿಗೂಡಿರುತ್ತವೆ.

ದೇಶದಲ್ಲಿನ ರೈತರ ಆತ್ಮಹತ್ಯೆಗಳು 5 ಲಕ್ಷ ಮೀರಿದೆ. ಸೌರವ್ಯೂಹದಲ್ಲೇನಿದೆ, ಸಮುದ್ರದಲ್ಲೇನಿದೆ, ಭೂಮಿಯೊಳಗೇನಿದೆ ಎಂಬುದನ್ನು ಪತ್ತೆ ಹಚ್ಚುವ ತಂತ್ರಜ್ಞಾನಗಳು ರೈತರ ಆತ್ಮಹತ್ಯೆಗಳಿಗೆ ನಿಖರ ಕಾರಣ ತಿಳಿಯಲು ಸಾಧ್ಯವಿಲ್ಲವೇ? ಅಥವಾ ಇವರಿಗೆ ನಿಜಕ್ಕೂ ಗೊತ್ತಿಲ್ಲವೇ? ಗೊತ್ತಿದೆ. ಆದರೆ ಇದನ್ನು ಪರಿಹರಿಸುವ ಮನಸ್ಸು ಬಂಡವಾಳಶಾಹಿ ಪರವಾದ ಈ ಸರ್ಕಾರಗಳಿಗೆ ಇಲ್ಲ.

ಅವರು ಬೊಬ್ಬೆ ಹಾಕುತ್ತಾರೆ

ಕೃಷಿಯಲ್ಲಿ ಬಂಡವಾಳ ತೊಡಗಿಸುವಿಕೆ ವೆಚ್ಚ ದಿನೇ ದಿನೇ ಹೆಚ್ಚಾಗುತ್ತಿದೆ. ಸಾಲಸೋಲ ಮಾಡಿ ಬಂಡವಾಳ ತೊಡಗಿಸುವಂತಾಗಿದೆ. ಬೆಳೆದ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಇಲ್ಲ. ಮಾಡಿದ ಸಾಲ ತೀರಿಸಲಾಗುತ್ತಿಲ್ಲ. ಮಾನ ಮರ್ಯಾದೆಗೆ ಕಟ್ಟು ಬಿದ್ದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಉದ್ಯಮಿಗಳು ವ್ಯಾಪಾರದಲ್ಲಿ ನಷ್ಟವಾಗಿ ಪಡೆದ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆ ಕಡಿಮೆ. ಅವರು ನಷ್ಟಕ್ಕೆ ಒಳಗಾಗುವುದಿರಲಿ, ಅವರು ಗುರಿ ಇಟ್ಟುಕೊಂಡಿರುವ ಆದಾಯದ ಪ್ರಮಾಣದಲ್ಲಿ ಸ್ವಲ್ಪ ಕಡಿಮೆಯಾದರೂ ಬೊಬ್ಬೆ ಹಾಕುತ್ತಾರೆ. ಸೂಕ್ತ ಪರಿಹಾರವನ್ನು ಪಡೆಯುತ್ತಾರೆ. ರಾತ್ರೋರಾತ್ರಿ ಹಣಕಾಸು ನೀತಿಗಳನ್ನು ಬದಲಾಯಿಸುತ್ತಾರೆ. ಬಜೆಟ್ ಮಂಜೂರಾತಿಗಾಗಿ ಇನ್ನೊಂದು ಮತ್ತೊಂದಕ್ಕೆ ಕಾಯುವ ಪ್ರಶ್ನೆಯೇ ಇಲ್ಲ. ಭಾರತದ ಸಂವಿಧಾನಕ್ಕೆ ಇದುವರೆಗೂ 100ಕ್ಕೂ ಹೆಚ್ಚು ತಿದ್ದುಪಡಿಗಳಾಗಿವೆ. ಅದರಲ್ಲಿ ಒಮ್ಮೆಯೂ ರೈತರ ಪರವಾಗಿ ತಿದ್ದುಪಡಿಯಾಗಿಲ್ಲ ಎಂಬುದು ಎಷ್ಟೊಂದು ವಿಪರ್ಯಾಯ ನೋಡಿ.

47 ಲಕ್ಷ ಕುಟುಂಬಕ್ಕೆ ಇಲ್ಲದ ಸೌಲಭ್ಯಗಳು

ರಾಜ್ಯ ಸರ್ಕಾರ ರೈತರಿಗೆ ಶೇ.4ರ ದರದಲ್ಲಿ ಸಾಲ ನೀಡುತ್ತೇವೆ ಎಂದು ಬೊಗಳೆ ಬಿಡುತ್ತಿದೆ. ಸಾಲ ಮನ್ನಾ ಬಡ್ಡಿ ಮನ್ನಾ ಬಡ್ಡಿ ಮನ್ನಾ ಎಂದೆಲ್ಲಾ ಹೇಳುತ್ತಿದ್ದಾರೆ. ರೈತರ ದಿಕ್ಕು ತಪ್ಪಿಸಲು ಗ್ರಾಮ ವಾಸ್ತವ್ಯದ ಸ್ಟಂಟ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಆದರೆ ಇಲ್ಲಿರುವ ವಾಸ್ತವವೇ ಬೇರೆ. ಕರ್ನಾಟಕದಲ್ಲಿ 71 ಲಕ್ಷ ರೈತ ಕುಟುಂಬಗಳಿವೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಇದುವರೆಗೂ ಸಾಲ ಸೌಲಭ್ಯ ಸಿಕ್ಕಿರುವುದೇ 24 ಲಕ್ಷ ಕುಟುಂಬಗಳಿಗೆ ಅಂದರೆ ಉಳಿದ 47 ಲಕ್ಷ ಕುಟುಂಬಗಳಿಗೆ ಸಾಲದ ಸೌಲಭ್ಯ ಸಿಕ್ಕಿಲ್ಲ. ಇಂತಹ ಪರಿಸ್ಥಿತಿಗಳಲ್ಲಿ ರೈತರು ಹೊರಗಡೆ ಧನಿಕರ ಬಳಿ ಶೇಕಡ 5 ರವರೆಗೂ ಸಾಲ ಪಡೆಯುವಂತಹ ಪರಿಸ್ಥಿತಿ. ಬಿತ್ತನೆ ಬೀಜದಿಂದ ಆರಂಭಿಸಿ ಕೊಯ್ಲಿನ ತನಕ ಎಲ್ಲ ವೆಚ್ಚಗಳೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಬೆಳೆದ ಫಸಲಿಗೆ ಸೂಕ್ತ ಮಾರುಕಟ್ಟೆ ಇಲ್ಲ. ಮತ್ತೆ ರೈತರ ಪರಿಸ್ಥಿತಿ ಏನಾಗಬೇಕು. ಮಾನಮರ್ಯಾದೆಗೆ ಕಟ್ಟು ಬಿದ್ದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ರಾಜ್ಯ ಸರ್ಕಾರ ನೀಡಿರುವ ರೈತರ ಸಾಲ ಮನ್ನಾ ಬಡ್ಡಿ ಮನ್ನಾಗಳು ಕೇವಲ ಒಂದು ವರ್ಗದ ರೈತರಿಗೆ ಮಾತ್ರ ದಕ್ಕುತ್ತಿವೆ. ವಾಣಿಜ್ಯ ಬ್ಯಾಂಕ್‌ಗಳಲ್ಲಿ ಪಡೆದಿರುವ ಸಾಲಕ್ಕೆ ಇದು ಅನ್ವಯವಾಗುತ್ತಿಲ್ಲ. ಕೇವಲ ಸಹಕಾರಿ ಬ್ಯಾಂಕ್‌ಗಳಿಗೆ ಮಾತ್ರ ನೀಡಲಾಗಿದೆ. ಸಹಕಾರಿ ಬ್ಯಾಂಕ್‌ಗಳಲ್ಲಿನ ಹಣ ಅಲ್ಲಿನ ನಿರ್ದೇಶಕರು, ಅವರ ಸಂಬಂಧಿಗಳು ಮತ್ತು ಅವರ ಚೇಲಾಗಳಿಗೆ ಮಾತ್ರ ದೊರೆಯುತ್ತದೆ. ಸಾಲ ಮನ್ನಾ ಬಡ್ಡಿ ಮನ್ನಾ ಸೌಲಭ್ಯಗಳು ಸಹ ಅವರಿಗೇ ಸೇರುತ್ತಿವೆ. ಹಾಗಾಗಿ ಬಹುತೇಕ ರೈತರು ಈ ಎಲ್ಲ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ದೇಶದ ಆರ್ಥಿಕತೆ ಶೇಕಡ 9ರ ದರದಲ್ಲಿ ಅಭಿವೃದ್ಧಿಯಾಗುತ್ತಿದೆ. ಷೇರು ಮಾರುಕಟ್ಟೆಗೆ ವಿದೇಶಿ ಬಂಡವಾಳ ಭಾರಿ ಪ್ರಮಾಣದಲ್ಲಿ ಹರಿದು ಬರುತ್ತಿದೆ. ಸೆನ್ಸೆಕ್ಸ್ ದಿನೇ ದಿನೇ ಹೆಚ್ಚಳ ಕಾಣುತ್ತಿದೆ ಎಂದು ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್ ಹೇಳುತ್ತಿದ್ದಾರೆ. 'ರೈತರು ಉತ್ಪಾದನೆ, ಉತ್ಪಾದಕತೆ ಹೆಚ್ಚಿಸಿಕೊಳ್ಳಬೇಕು-ಇಲ್ಲದಿದ್ದಲ್ಲಿ ಕೃಷಿ ಬಿಕ್ಕಟ್ಟು ನಿವಾರಣೆ ಅಸಾಧ್ಯ, ಎನ್ನುತ್ತಾರೆ. ಆದರೆ ಕೃಷಿಯಲ್ಲಿನ ಹೂಡಿಕೆ ವೆಚ್ಚ ಹೆಚ್ಚುತ್ತಿರುವ ಕುರಿತು ಚಕಾರ ಎತ್ತುವುದಿಲ್ಲ. ಆದರೆ ವಿದೇಶಿ ಉತ್ಪನ್ನಗಳೊಂದಿಗೆ ಪೈಪೋಟಿ ನಡೆಸಲು ಅಲ್ಲಿನ ದೇಶಗಳು ನೀಡುವಷ್ಟು ಸಬ್ಸಿಡಿಯನ್ನು ಕೇಂದ್ರ ಸರ್ಕಾರ ನೀಡುತ್ತಿಲ್ಲ. ವಿದ್ಯುತ್

ಪುಟ 15ಕ್ಕೆ



ಅಧಿಕಾರಕ್ಕಾಗಿ ಅನೈತಿಕ ಮಾರ್ಗಗಳಲ್ಲಿ ತೊಡಗಿರುವ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಶಾಸಕರು

ಸಮಸ್ಯೆಗಳ ಮೂಟೆಹೊತ್ತು ಧಾವಿಸಿದ ರೈತರು

ಹೆಜ್ಜೆಗೆ ಹೆಜ್ಜೆ ಹಾಕಿದರು, ಕೈಗೆ ಕೈ ಜೋಡಿಸಿದರು. ತಮ್ಮ ಶಕ್ತ್ಯಾನುಸಾರ ಬುತ್ತಿ ಕಟ್ಟಿಕೊಂಡು ನೂರಾರು ಮೈಲಿಗಳಿಂದ ರಾಜಧಾನಿಗೆ ಬಂದರು. ನಿಲ್ಲಲು ನೆಲೆ ಇಲ್ಲ ನಿವೇಶನ ಕೊಡಿ, ಹೊಟ್ಟೆಗೆ ಊಟ ಇಲ್ಲ ರೇಷನ್ ಕಾರ್ಡ್ ಕೊಡಿ, ವಿಧವಾ ವೇತನ ನೀಡಿ, ಸಾಗುವಳಿ ಚೀಟಿ ವಿತರಿಸಿ, ಅತಿಕ್ರಮಣಕಾರರು, ಉದ್ಯಮಿಗಳು, ರಿಯಲ್ ಎಸ್ಟೇಟ್ ದರೋಡೆಕೋರರಿಂದ ನಮ್ಮ ಭೂಮಿಯನ್ನು ರಕ್ಷಿಸಿ ಎಂಬ ಹಲವಾರು ಸಮಸ್ಯೆಗಳೊಂದಿಗೆ ಸೂಕ್ತ ಪರಿಹಾರ ದೊರೆಯುವ ಭರವಸೆಯ ಭಾರ ಹೊತ್ತು ಸರ್ಕಾರವನ್ನು ಕೋರಲು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಮುಂದಡಿ ಇಟ್ಟರು.

ಇದೊಂದೇ ಮಾರ್ಗ

ಮಹಿಳೆಯರು, ವಿಧವೆಯರು, ರೈತರು ಮಕ್ಕಳು ಮರಿ, ಹಗಲಿರುಳೆನ್ನದೆ ಬೆಂಗಳೂರಿಗೆ ಆಗಮಿಸಿದರು. ಇದು ಸುಗ್ಗಿಯ ಕಾಲವಾಗಿದ್ದು ರೈತರು ಹೊಲಗಳಲ್ಲಿ ಬೆವರು ಸುರಿಸದಿದ್ದರೆ ಹೊಟ್ಟೆಗಿಲ್ಲದೆ ಸಾಯುವ ಪರಿಸ್ಥಿತಿ. ಆದರೆ ಸಮಸ್ಯೆಗಳು ಬದುಕನ್ನು ಕಿತ್ತುತಿನ್ನುತ್ತಿವೆ. ಪ್ರಾಂತ ರೈತ ಸಂಘ ಬೃಹತ್ ರ್‍ಯಾಲಿ ಸಂಘಟಿಸಿ, ರೈತರನ್ನು ಹೋರಾಟಕ್ಕೆ ಅಣಿನೆರೆಸಿತು. ಹೋರಾಟ ಮಾಡದೆ ಅನ್ಯ ಮಾರ್ಗವಿಲ್ಲ. ಬಡವರು, ರೈತರನ್ನು ಆತ್ಮಹತ್ಯೆಗೆ ದೂಡುತ್ತಿರುವ ನೀತಿಗಳನ್ನು ಹಿಮ್ಮೆಟ್ಟಿಸಲು ಇದೊಂದೇ ಮಾರ್ಗ ಎಂಬ ದೃಢ ಮನಸ್ಸಿನೊಂದಿಗೆ ಎಲ್ಲ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಬೆಂಗಳೂರಿನತ್ತ ಹೊರಟರು. ಮಹಾನಗರದ ಪ್ರಮುಖ ರಸ್ತೆಗಳಲ್ಲಿ ಉರಿಬಿಸಿಲಿನಲ್ಲಿ ಘೋಷಣೆಗಳನ್ನು ಕೂಗುತ್ತಾ ರೈತ ವಿರೋಧಿ, ಜನವಿರೋಧಿ ನೀತಿಗಳನ್ನು ಕಿತ್ತೊಗೆಯ ಬೇಕೆಂದು ಆಗ್ರಹಿಸಿದರು.

ಮಂಗಳವಾರ ನಡೆದ ಈ ಬೃಹತ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಸಂಖ್ಯೆಯ ರೈತರು ತಾವು ಅನುಭವಿಸುತ್ತಿರುವ ಕಷ್ಟಗಳನ್ನು ಬಿಡಿಸಿಟ್ಟರು. ದುರದೃಷ್ಟ ವಶಾತ್ ಅವರ ನೋವುಗಳನ್ನು ಆಲಿಸಲು ರಾಜ್ಯದಲ್ಲಿ ಸರ್ಕಾರವೇ ಇಲ್ಲ. ತಾವೇ ಆಯ್ಕೆ ಮಾಡಿದ ಜನಪ್ರತಿನಿಗಳು ಅಕಾರಕ್ಕಾಗಿ, ಮೂಳೆಗಾಗಿ ಕಚ್ಚಾಡುವ ನಾಯಿಗಳನ್ನೂ ನಾಚಿಸುವಂತೆ ನಡೆದುಕೊಳ್ಳುತ್ತಿದ್ದಾರೆ.

ವಿಪರ್ಯಾಸ ಎಂದರೆ ಒಂದೆಡೆ ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದರೆ, ಮತ್ತೊಂದೆಡೆ ಇವರು ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದಾರೆ. ಅನ್ಯಾಯದ ವಿರುದ್ಧ ಬೀದಿಗಿಳಿದು ಹೋರಾಟ ಮಾಡುವುದು ಸ್ವಾಸ್ಥ್ಯ ಸಮಾಜದ ಲಕ್ಷಣ. ಆದರೆ ಇಲ್ಲಿ ನಡೆಯುತ್ತಿರುವುದೇನು. ಒಂದು ರಾಷ್ಟ್ರೀಯ ಪಕ್ಷ ಅಧಿಕಾರಕ್ಕಾಗಿ ಎಂ.ಜಿ. ರಸ್ತೆಯಲ್ಲಿ ನಿದ್ದೆ ಮಾಡುತ್ತಾ ಕಿಂಚಿತ್ತೂ ಮಾನ ಮರ್ಯಾದೆ, ನೈತಿಕತೆ ಇಲ್ಲ ಎಂಬುದನ್ನು ಸಾಬೀತು ಮಾಡಿದೆ. ಮತ್ತೊಂದು ರಾಜಕೀಯ ಪಕ್ಷ ಸಮಾನ ದೂರ ಎಂದು ಹೇಳಿ ಇಬ್ಬರೊಂದಿಗೂ ಸೇರಿ ಅಧಿಕಾರ ಅನುಭವಿಸಿ ರಾಜ್ಯದ ರಾಜಕೀಯ ತಮ್ಮ ಸ್ವಂತ ಮನೆಯ ಖಾಸಗಿ ಆಸ್ತಿಯೆಂಬಂತೆ ವರ್ತಿಸುತ್ತಿದೆ. ಇವರನ್ನು ನೋಡಿ ಜನರೇ ತಮ್ಮ ಮಾನಮರ್ಯಾದೆ ಕಾಪಾಡಿಕೊಳ್ಳಲು ಇದರಿಂದ ದೂರ ಓಡಿಹೋಗುವಂತಾಗಿದೆ.

ಬಿಕಾರಿಗಳಾದರು

ಕೈಗಾರಿಕೆಗಳ ಅಭಿವೃದ್ಧಿ, ಪ್ರಗತಿ ಬೆಳವಣಿಗೆ ಹೆಸರಿನಲ್ಲಿ ಉದ್ಯಮಿಗಳು, ರಿಯಲ್ ಎಸ್ಟೇಟ್ ದರೋಡೆಕೋರರು ಬೆಂಗಳೂರಿನ ಸುತ್ತ ಮುತ್ತ ಕೋಟ್ಯಾಂತರ ರೂ. ಬೆಲೆ ಬಾಳುವ ರೈತರ ಭೂಮಿಯನ್ನು ಕಬಳಿಸುತ್ತಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಟೀಕಿಸಿದರು. ಯಾವುದೇ ಕಾರಣಕ್ಕೂ ರೈತರ ಅನುಮತಿ ಇಲ್ಲದೆ, ಭೂಮಿ ಕಳೆದುಕೊಂಡವರಿಗೆ ಶಾಶ್ವತವಾದ ಪರಿಹಾರ ಒದಗಿಸದೆ ಭೂಮಿ ಸ್ವಾಧೀನಕ್ಕೆ ಅವಕಾಶ ನೀಡುವುದಿಲ್ಲ ಎಂದು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಎಚ್ಚರಿಸಿದರು. ದೇವನಹಳ್ಳಿ ಸಮೀಪ ಭೂ ಸ್ವಾಧೀನ ಮಾಡಿ ರೈತರಿಗೆ ಅಲ್ಪ ಸ್ವಲ್ಪ ಹಣ ನೀಡಿದರು. ಆ ಎಲ್ಲ ಹಣ ಖರ್ಚಾದ ನಂತರ ರೈತರು ಅಲ್ಲಿನ ಬಸ್ ನಿಲ್ದಾಣ, ಪಟ್ಟಣದಲ್ಲಿ ಬಿಕಾರಿಗಳಂತೆ ಅಲೆಯುತ್ತಿದ್ದಾರೆ ಎಂದು ವಿಷಾದಿಸಿದರು. ಅಂತಹ ಪರಿಸ್ಥಿತಿ ಮತ್ಯಾವುದೇ ರೈತರಿಗೆ ಬರದಿರುವಂತೆ ಎಲ್ಲ ರೈತರು ಒಗ್ಗಟ್ಟಾಗಿ ಹೋರಾಟ ಮಾಡಬೇಕೆಂದು ಕರೆ ನೀಡಿದರು. ಸರ್ಕಾರಿ ಭೂಮಿಯನ್ನು ಉದ್ಯಮಿಗಳಿಗೆ ನೀಡುವ ಉದ್ದೇಶದಿಂದ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ಸಾಗುವಳಿ ಚೀಟಿ ವಿತರಿಸಲು ಸರ್ಕಾರ ಹಿಂದು ಮುಂದು ನೋಡುತ್ತಿದೆ. ಇದರಿಂದ ರೈತರು ಭೂಮಿ ಕಳೆದುಕೊಂಡು ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡಿ ಬದುಕುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದರು.

ಪ್ರಧಾನಮಂತ್ರಿ ಮನಮೋಹನ್ ಸಿಂಗ್

ಪುಟ 12 ಕ್ಕೆ

ದುಃಖ ದುಮ್ಮಾನಗಳ ವಿರುದ್ಧ ಕೃಷಿಕೂಲಿಕಾರರ ಆಂದೋಲನ

ಬೆಂಗಳೂರಿನಲ್ಲಿ ರ್‍ಯಾಲಿ - ಅರಣ್ಯಭವನದ ಮುಂದೆ ಪ್ರತಿಭಟನೆ

ರಾಜ್ಯದ ಅನೇಕ ಜಿಲ್ಲೆಗಳಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಮತ್ತು ಇತರ ಭೂರಹಿತ ಬಡವರು ಅನೇಕ ವರ್ಷಗಳಿಂದ ಸರ್ಕಾರಿ ಭೂಮಿಯನ್ನು ಹಾಗೂ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಜೀವನ ನಿರ್ವಹಿಸಲು ಪ್ರಯತ್ನ ಪಡುತ್ತಾ ಬಂದಿದ್ದಾರೆ. ಗ್ರಾಮಗಳ ಅಕ್ಕಪಕ್ಕದಲ್ಲಿರುವ ಈ ಭೂಮಿಯಲ್ಲಿ ಯಾವುದೇ ಗಿಡಮರಗಳು ಇರುವುದಿಲ್ಲ. ಕೃಷಿಗೆ ಯೋಗ್ಯವಾಗಿರುವ ಈ ಭೂಮಿಯಲ್ಲಿ ಮಳೆ ನೀರನ್ನು ಆಶ್ರಯಿಸಿ ಭೂರಹಿತ ಬಡವರು ಅಲ್ಪಸ್ವಲ್ಪ ಬೆಳೆ ಬೆಳೆದು ಬದುಕು ಸಾಗಿಸುತ್ತಿದ್ದಾರೆ. ಕೆಲವು ಕಡೆ, ಉದಾಹರಣೆಗೆ ಬೆಳಗಾವಿ ಜಿಲ್ಲಾ ಸವದತ್ತಿ ತಾಲೂಕಿನಲ್ಲಿ, ಮೇಲ್ಪಟ್ಟದಲ್ಲಿ ನೀರಾವರಿ ಕಾಲುವೆ ಹಾದು ಹೋಗುತ್ತಿರುವುದರಿಂದ ಕೆಳಮಟ್ಟದಲ್ಲಿರುವ ಅರಣ್ಯ ಭೂಮಿಯಲ್ಲಿ ನೀರಾವರಿ ಸೌಲಭ್ಯವನ್ನು ಪಡೆದು ಉತ್ತಮವಾದ ಪ್ರತಿಫಲವನ್ನು ಪಡೆಯುವ ಸಾಧ್ಯತೆಯಿದೆ. ಆದರೆ ಅರಣ್ಯ ಇಲಾಖೆಯವರ ಪ್ರತಿಗಾಮಿ ನೀತಿಯಿಂಗಾಗಿ ಬಡ ಭೂರಹಿತ ಕುಟುಂಬಗಳಿಗೆ ಅನ್ಯಾಯವಾಗುತ್ತಿದೆ.

ಬೆಳೆದುನಿಂತ ಪೈರು ನಾಶ

ಬಡವರು ಕಷ್ಟಪಟ್ಟು ಸಾಗುವಳಿ ಮಾಡಿದ ಭೂಮಿಯಲ್ಲಿ ಬೆಳೆದು ನಿಂತಿರುವ ಪೈರನ್ನು ನಾಶಮಾಡಿ ಸಸಿಗಳನ್ನು ನೆಡುವ ಅರಣ್ಯ ಇಲಾಖೆಯವರ ದೌರ್ಜನ್ಯ ಮಿತಿಮೀರಿದೆ. ಈ ಸಲವಂತೂ ಎಲ್ಲಾ ಕಡೆ ಒಳ್ಳೆಯ ಮಳೆ ಆಗಿರುವುದರಿಂದ ಬಡವರು ಕಷ್ಟಪಟ್ಟು ಸಾಲ ಮಾಡಿ, ತುಟ್ಟಿ ಬೀಜ ತಂದು ಅವರು ಅತಿಕ್ರಮಣ ಮಾಡಿಕೊಂಡ ಅರಣ್ಯ ಭೂಮಿಯಲ್ಲಿ ಬಿತ್ತಿ, ಬೆಳೆ ಬೆಳೆದಿದ್ದಾರೆ. ಅಂತಹ ಬೆಳೆಯನ್ನು ನಾಶಮಾಡಿ, ಬಡ ಕೂಲಿಕಾರರನ್ನು ಆ ಭೂಮಿಯಿಂದ ಒಕ್ಕಲೆಬ್ಬಿಸುವ ಕ್ರೌರ್ಯ ರಾಜ್ಯದ ಹಲವೆಡೆ ನಡೆದಿದೆ.

ಗ್ರಾಮದ ಅಸುಪಾಸಿನಲ್ಲಿರುವ ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರಿರುವ ಈ ಬಂಜರು ಭೂಮಿ ಕೆಲವೇ ವರ್ಷಗಳ ಹಿಂದೆ ಕಂದಾಯ ಇಲಾಖೆ ಸೇರಿತ್ತು. ಸದರಿ ಕಂದಾಯ ಭೂಮಿಯಲ್ಲಿ ಅರಣ್ಯ ಬೆಳೆಸುವ ಉದ್ದೇಶದಿಂದ ಅದನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಇಂತಹ ಭೂಮಿಯಲ್ಲಿ ಅನೇಕ ಕಡೆ ಮೊದಲಿನಿಂದಲೂ ಬಡ ಭೂರಹಿತರು ಸಾಗುವಳಿ ಮಾಡುತ್ತಾ ಬಂದಿದ್ದರು. ಅಂತಹ ಅರಣ್ಯ ಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಮೂಲಕ ಅರಣ್ಯ ಇಲಾಖೆಯವರು ದೊಡ್ಡ ಅನ್ಯಾಯ ಮಾಡಿದ್ದಾರೆ.

'ಅರಣ್ಯ ಸಮಿತಿ' ದೌರ್ಜನ್ಯ



ಅರಣ್ಯ ಭೂಮಿ ಅತಿಕ್ರಮಣ ಮಾಡುವುದನ್ನು ತಡೆಯುವ ಹೆಸರಿನಲ್ಲಿ ಗ್ರಾಮಗಳಲ್ಲಿ ರಚಿಸಲಾಗಿರುವ 'ಅರಣ್ಯ ಸಮಿತಿ' ಗಳ ಮೂಲಕವೂ ಅರಣ್ಯ ಇಲಾಖೆ ದೌರ್ಜನ್ಯವೆಸಗುತ್ತಿದೆ. ಅರಣ್ಯ ಸಮಿತಿಗಳಲ್ಲಿ ಗ್ರಾಮದ ಶ್ರೀಮಂತರನ್ನು ಭೂಮಿ ಇರುವ ದೊಡ್ಡ ದೊಡ್ಡ ರೈತರನ್ನು ಸೇರಿಸಿಕೊಳ್ಳಲಾಗಿದ್ದು ಅವರಿಗೆ ಗ್ರಾಮದ ಭೂರಹಿತ ಬಡವರ ಬಗ್ಗೆ ಸಹಾನುಭೂತಿ ಇರುವುದಿಲ್ಲ ಮಾತ್ರವಲ್ಲ ಬಡವರು ಸರ್ಕಾರಿ ಭೂಮಿ ಸಾಗುವಳಿ ಮಾಡುವ ಬಗ್ಗೆ ಹೊಟ್ಟೆಕಿಚ್ಚು ಪಟ್ಟುಕೊಳ್ಳುತ್ತಾರೆ. ತಮ್ಮ ಭೂಮಿಯಲ್ಲಿ ಕೆಲಸಮಾಡಲು ಈ ಬಡ ಕೂಲಿಕಾರರು ಬರಲಾರರು ಎಂಬ ಸ್ವಹಿತವೇ ಅವರಿಗೆ ಪ್ರಧಾನವಾಗಿರುತ್ತದೆ. ಇಂತಹ ಅರಣ್ಯ ಸಮಿತಿಗಳಿಂದ ಗ್ರಾಮಗಳಲ್ಲಿ ದ್ವೇಷವನ್ನು ಬೆಳಸಬಹುದೇ ಹೊರತು ಅರಣ್ಯ ಬೆಳಸಲಾಗುವುದಿಲ್ಲ.

ಈ ಸಮಿತಿಗಳಲ್ಲಿರುವ ಪಟ್ಟಭದ್ರರು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ಸೇರಿಕೊಂಡು ಭೂರಹಿತ ಬಡವರು ಬೆಳೆಬಾಳುವ ಅರಣ್ಯ ಮರಗಳನ್ನು ಕಡಿದು ಹಾಕಿದ್ದಾರೆ ಎಂದು ಸುಳ್ಳುದೂರು ನೀಡಿ, ಸತಾಯಿಸುತ್ತಾರೆ.

ವಲಸೆ ಹೆಚ್ಚುತ್ತಿದೆ

ಕೃಷಿ ಕ್ಷೇತ್ರದಲ್ಲಿ ಇಂದು ಆವರಿಸಿಕೊಂಡಿರುವ ಬಿಕ್ಕಟ್ಟಿನಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಭೂರಹಿತ ಬಡ ಕೂಲಿಕಾರರು ಜೀವನ ಸಾಗಿಸುವುದೇ ಕಷ್ಟವಾಗಿದೆ. ಅವರಿಗೆ ಹಳ್ಳಿಗಳಲ್ಲಿ ಮೊದಲಿನಂತೆ ಉದ್ಯೋಗ ಸಿಗುತ್ತಿಲ್ಲ. ಸಣ್ಣ ಸಣ್ಣ ರೈತರು ಭೂಮಿಯನ್ನು ಕಳೆದುಕೊಂಡು ಕೂಲಿಕಾರರಾಗುತ್ತಿದ್ದಾರೆ. ಇವರೆಲ್ಲರೂ ಉದ್ಯೋಗ ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಬರುವುದು ಹೆಚ್ಚಾಗುತ್ತಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕರ್ನಾಟಕದಲ್ಲಿ ಸಮರ್ಪಕವಾಗಿ ಜಾರಿ ಮಾಡದೆ ಇರುವುದರಿಂದ, ಬಡವರಿಗೆ ಸಮರ್ಪಕವಾಗಿ ರೇಷನ್ ಕಾರ್ಡ್ ವಿತರಣೆ ಮಾಡದೆ ರೇಷನ್ ವಿತರಣೆಯಲ್ಲಿ ಕಡಿತ ಮಾಡಿರುವುದರಿಂದ ನಗರಗಳತ್ತ ಹಳ್ಳಿಯ ಕೂಲಿಕಾರರ ವಲಸೆ ಹೆಚ್ಚಾಗಿದೆ. ಅರಣ್ಯ ಭೂಮಿಯಿಂದ ಬಡವರನ್ನು ಒಕ್ಕಲೆಬ್ಬಿಸುವ ಕ್ರಮದಿಂದಲೂ ವಲಸೆ ಸಮಸ್ಯೆ ಉಲ್ಬಣಗೊಂಡಿದೆ.

ಜಾರಿಗಿಲ್ಲ ಅರಣ್ಯ ಕಾಯ್ದೆ

ಬುಡಕಟ್ಟು ಜನರ ಮತ್ತು ಇತರ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳ ಕಾಯ್ದೆ 2006 ಸಂಸತ್ತಿನಲ್ಲಿ ಪಾಸಾಗಿದೆ. ಇದರ ಅಡಿಯಲ್ಲಿ ಕೇಂದ್ರ ಸರ್ಕಾರ ಇನ್ನೂ ಅಗತ್ಯವಾದ ನಿಯಮಾವಳಿಗಳನ್ನು ರೂಪಿಸದೆ ಇರುವುದರಿಂದ ಅತ್ಯಂತ ಮಹತ್ವದ ಈ ಕಾಯ್ದೆ ಇದುವರೆಗೂ ಜಾರಿಯಲ್ಲಿ ಬಂದಿಲ್ಲ. ಆದರೆ ಈ ಕಾಯ್ದೆ ಇವತ್ತು ಅಲ್ಲದಿದ್ದರೂ ನಾಳೆ ಜಾರಿ ಆಗಲಿರುವುದರಿಂದ ಅರಣ್ಯ ಇಲಾಖೆಯವರು ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವವರ ಹಕ್ಕುಗಳನ್ನು ಗೌರವಿಸುವ ಮನೋಭಾವವನ್ನು ತಾಳುವುದು ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಕೃಷಿ ಕೂಲಿಕಾರರ ಸಂಘ ವಿವಿಧ ಬೇಡಿಕೆಗಳಿಗಾಗಿ ಒತ್ತಾಯಿಸಿದೆ. ○

ಸಿಪಿಐ(ಎಂ) ರಾಜ್ಯ ಸಮ್ಮೇಳನ ಮೈಸೂರಿನಲ್ಲಿ

ದೇಶದ ರಾಜಕೀಯದಲ್ಲಿ ದುಡಿಯುವ ವರ್ಗ ರಚನೆ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ)ಯ 19ನೇ ರಾಜ್ಯ ಸಮ್ಮೇಳನದ ಸಿದ್ಧತೆಗಳು ಆರಂಭಗೊಂಡಿವೆ. ಐತಿಹಾಸಿಕ ನಗರ ಮೈಸೂರಿನಲ್ಲಿ 2008ನೇ ಇಸ್ವಿ ಜನವರಿ 21 ರಿಂದ 24ರವರೆಗೆ ಜರುಗಲಿದೆ. ಸಮ್ಮೇಳನವು ಡಾ: ಅಂಬೇಡ್ಕರ್ ಸಮುದಾಯಭವನ, ವಿಶ್ವೇಶ್ವರ ನಗರ, ಚಾಮುಂಡಿಪುರದಲ್ಲಿ ಕಲಾಪಗಳು ನಡೆಯಲಿವೆ.

ಸಮ್ಮೇಳನವನ್ನು ಯಶಸ್ವಿಗೊಳಿಸಲು ಅತ್ಯಂತ ಉತ್ಸಾಹದಾಯಕ ಸಿದ್ಧತೆಗಳು ನಡೆದಿವೆ. ಇದಕ್ಕಾಗಿ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಸಮಿತಿಯ ರಚನಾ ಸಭೆಯಲ್ಲಿ ಭಾಗವಹಿಸಿ ಸಮ್ಮೇಳನದ ಮಹತ್ವಪೂರ್ಣ ಸಂದರ್ಭವನ್ನು ವಿವರಿಸಿದ್ದಾರೆ. ನಂತರ ಸ್ವಾಗತ ಸಮಿತಿಯ ರಚನೆಯಾಗಿದೆ.

ಅಧ್ಯಕ್ಷರಾಗಿ ಕಾರ್ಮಿಕ ನಾಯಕ, ವಿಕ್ರಾಂತ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಜಿ. ಜಯರಾಮ್, ಪ್ರಧಾನ ಕಾರ್ಯದರ್ಶಿಯಾಗಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಎಸ್. ಪ್ರಭಾಕರ, ಖಜಾಂಚಿ, ವಿಮಾ ನೌಕರರ ಸಂಘದ ಎನ್.ಕೆ. ಬಾಲಾಜಿರಾವ್, ಜಂಟಿ ಕಾರ್ಯದರ್ಶಿಯಾಗಿ ಎಲ್. ಜಗನ್ನಾಥ್ ಅಲ್ಲದೆ ಹಲವಾರು ಉಪಾಧ್ಯಕ್ಷರು, ಸಹ ಕಾರ್ಯದರ್ಶಿಗಳು ಆಯ್ಕೆಯಾಗಿರುತ್ತಾರೆ.

ದುಡಿಯುವ ವರ್ಗದ ರಾಜಕೀಯವನ್ನು ಜನರ ನಡುವೆ ಕೊಂಡೊಯ್ಯಲು, ರಾಜ್ಯದಾದ್ಯಂತ ನಡೆದ ವರ್ಗದ ಹೋರಾಟದ ಸ್ಫೂರ್ತಿಯನ್ನು ಒಳಗೊಂಡು ದಾಪುಗಾಲಿನ ಮುಂದಿಡಲು ಎಲ್ಲರೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ○

ಒಕ್ಕಲೆಬ್ಬಿಸುವ ಕ್ರಮದ ವಿರುದ್ಧ ಪ್ರತಿಭಟನೆ

ಜೀವನ ನಿರ್ವಹಣೆಗಾಗಿ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಹಾಗೂ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ಬಡವರನ್ನು ಒಕ್ಕಲೆಬ್ಬಿಸುವ ಅರಣ್ಯ ಇಲಾಖೆಯವರ ಕ್ರಮದ ಇದೇ ನವೆಂಬರ್ 5 ರಂದು ಬೆಂಗಳೂರಿನಲ್ಲಿ ಅರಣ್ಯ ಭವನ ಎದುರು ಕೃಷಿ ಕೂಲಿಕಾರರು ಮತ ಪ್ರದರ್ಶನ ನಡೆಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ದಾವಣಗೆರೆ ಮೊದಲಾದ ಜಿಲ್ಲೆಗಳಿಂದ ಆಗಮಿಸಿದ್ದ ಅರಣ್ಯ ಭೂಮಿ ಸಾಗುವಳಿದಾರರು ಭಾಗವಹಿಸಿದ್ದರು.

ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ ಅವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಾ - ಗ್ರಾಮಗಳ ಆಸುಪಾಸಿನಲ್ಲಿ ಲಭ್ಯವಿರುವ, ಮರಗಳೇ ಇಲ್ಲದ ಅರಣ್ಯ ಇಲಾಖೆಗೆ ಸೇರಿದ ಭೂಮಿಯನ್ನು ಭೂ ರಹಿತ ಬಡವರಿಗೆ ವಿತರಣೆ ಮಾಡಿ ಅಂತಹ ಭೂಮಿಯಲ್ಲಿ ಅರಣ್ಯ ಮರಗಳ ಜೊತೆಯಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ರಕ್ತವನ್ನಾದರೂ ಚೆಲ್ಲುತ್ತೇವೆ, ಆದರೆ ಭೂಮಿಯನ್ನು ಮಾತ್ರ ಬಿಡುವುದಿಲ್ಲ ಎಂದು ಘೋಷಿಸಿದ ಅವರು ಅರಣ್ಯ ಇಲಾಖೆಯವರು ಬಡವರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ಕೈಬಿಡದೇ ಹೋದರೆ ಕರ್ನಾಟಕದಲ್ಲಿಯೂ ಆಂಧ್ರ ಮಾದರಿಯ ಭೂ ಚಳುವಳಿಯನ್ನು ಎದುರಿಸಬೇಕಾಗುವುದು ಎಂದು ಎಚ್ಚರಿಸಿದರು.

ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಬಗರ್ ಹುಕುಂ ಸಾಗುವಳಿದಾರರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಮೆರವಣಿಗೆ : ಇದಕ್ಕೂ ಮೊದಲು ಬೆಂಗಳೂರು ಕೇಂದ್ರ ರೈಲು ನಿಲ್ದಾಣದಿಂದ ಮೆರವಣಿಗೆಯೊಂದನ್ನು ಹೊರಡಿಸಲಾಗಿತ್ತು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಚಂದ್ರಪ್ಪ ಹೊಸ್ಕೇರಾ, ಹಕ್ಕಲಗೌಡ ಪಾಟೀಲ್, ಭೀಮಶೆಟ್ಟಿ ಯಂಪಳ್ಳಿ, ಕರಿಯಪ್ಪ ಅಚ್ಚೊಳ್ಳಿ, ಗಂಗಾಧರ ಸ್ವಾಮಿ, ಎಲ್.ಎಸ್. ನಾಯಕ್ ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದರು.

ರಾಜ್ಯಪಾಲರಿಗೆ ಮನವಿ : ಅನಂತರ ಸಂಘದ ಮುಖಂಡರು ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೂ ಮನವಿಯನ್ನು ಸಲ್ಲಿಸಿದರು.

ಭಾ.ಜ.ಪ

ಭಾ.ಜ.ಪ. ಇರುವುದೇ ಕೆಲವು ಜನಕಾಗಿ
ಎಂಬುದನ್ನು ನಿತ್ಯವೂ ಹೇಳಿರ್‍ಪೈ ಕೂಗಿ ಇಲ್ಲದಿರೆ
ಈ ಮುಗ್ಧ ಹಿಂದುಳಿದ ಮಂದಿ ವಂಚಕರ
ಬಲೆಯೊಳಗೆ ಆಗುವರು ಚೆಂಡಿ

- ವಿಡಂಬಾರಿ

ಗಾಂಧಿನಾಡನ್ನು ದಹನಕುಂಡವಾಗಿಸಿದವರು

2002ರ ಗುಜರಾತ್ ಹತ್ಯಾಕಾಂಡ ಡೆಸಿದ ಕೆಲವರ ನಡುವೆ ತೆಹಲ್ಕಾ ನಡೆಸಿದ 'ಕುಟುಕು ಾರ್ಯಾಚರಣೆ' ಮತ್ತೊಮ್ಮೆ ಇದೊಂದು ಭೀಕರ ೋಮುವಾದೀ ದುಷ್ಕೃತ್ಯ ಎಂಬುದನ್ನು ೃಢಪಡಿಸಿದೆ. ತೆಹಲ್ಕಾದ ಪತ್ರಕರ್ತರು ಾತನಾಡಿಸಿದ 14 ಮಂದಿ ತಾವು ಹೇಗೆ ಈ ಗ್ಗೊಲೆಗಳನ್ನು ನಡೆಸಿದೆವು, ಹೇಗೆ ಮೋದಿ ಆಡಳಿತ ಂತ್ರ, ಮುಖ್ಯವಾಗಿ ಪೋಲೀಸರು ಬೆಂಬಲ ೀಡಿದರು, ಅಷ್ಟೇ ಅಲ್ಲ, ಕೆಲವೊಂದು ಂದರ್ಭಗಳಲ್ಲಿ ಅವರೇ ನೇರವಾಗಿ ಾಗವಹಿಸಿದರು ಎಂಬುದನ್ನು ಕ್ಯಾಮರಾದ ಎದುರು ೆಮ್ಮೆಯಿಂದ ಹೇಳಿಕೊಂಡರು. ಇದನ್ನು ೀಕ್ಷಿಸಿದವರು, ನಿಜವಾಗಿಯೂ ಈ ೋಮುವಾದಿಗಳಿಗೆ ಮಾನವೀಯ ೌಲ್ಯಗಳೆಂಬುದೇ ಇಲ್ಲವೇ ಎಂದು ಬೆಚ್ಚಿ ೀಳುವಂತಾಯಿತು. ತಮ್ಮ ಘೋರಕೃತ್ಯಗಳ ಬಗ್ಗೆ ಶ್ಚಾತ್ತಾಪದ ಸುಳಿವೂ ಅಲ್ಲಿ ಕಾಣಿಸಲಿಲ್ಲ. ೇಗಿರಲು ಸಾಧ್ಯ? ರಾಜಕೀಯ ಲಾಭಕ್ಕಾಗಿ ಾರಣ ಹೋಮ ನಡೆಸಿಯಾದರೂ ಕೋಮು ್ರುವೀಕರಣ ಸೃಷ್ಟಿಸುವುದು ಅವರ ಅಸ್ತಿತ್ವದ ೇವಾಳ ತಾನೇ! ಅವರ ಅಜೆಂಡಾವೇ ಸ್ಪಷ್ಟವಾಗಿರುವಾಗ ಅವರ ಕೃತ್ಯಗಳು ಇಷ್ಟೊಂದು ಮಾನವೀಯ ವಾಗಿರುವುದರಲ್ಲಿ ಆಶ್ಚರ್ಯವೇನು?

ಈ ಹತ್ಯಾಕಾಂಡಗಳಲ್ಲಿ ಭಾಗವಹಿಸಿ ದವರಲ್ಲಿ ರಡು ವಿಧ- ಒಂದು, ಈ ಕಗ್ಗೊಲೆಗಳ ಕ್ರೂರ ೋಜನೆಗಳನ್ನು ಹಿನ್ನೆಲೆಯಲ್ಲಿ ಕೂತು ಯಾರಿಸಿದವರು ಮತ್ತು ಇನ್ನೊಂದು, ಹಿಂದುತ್ವದ ಷ ತುಂಬಿಸಿಕೊಂಡು ಅದರ ಪ್ರಕಾರ ಲೂಟಿ, ೊಲೆ, ಅತ್ಯಾಚಾರಗಳನ್ನು ನಡೆಸಿದ ಕೇಸರಿ ಪಡೆಗಳ ಾಳುಗಳು. ಕೆಲವೆಡೆ ಯೋಜನಾಕಾರರೇ ್ವೇಶ ಕಂಡು ಧೈರ್ಯ ತುಂಬಿಕೊಂಡು ಸ್ವತಃ ಾಗವಹಿಸಿದ ಸಂದರ್ಭಗಳೂ ಕಂಡು ಬಂದವು. ಹಲ್ಕಾ ಕಾರ್ಯಾಚರಣೆ ಹೊರಗೆಡಹಿದ ಕರತೆಗಳ ಕೆಲವು ತುಣುಕುಗಳನ್ನು ನೋಡಿ:

ಮೂರು ದಿನಗಳು ಏನು ಬೇಕಾದರೂ ಮಾಡಿ' ಎಂದ ಮೋದಿ

ಸಬರಮತಿ ಎಕ್ಸ್‌ಪ್ರೆಸ್‌ನ ಎಸ್-6 ಬೋಗಿಗೆ ಕಿ ಹಚ್ಚಿದ ದಿನ ಮುಖ್ಯ ಮಂತ್ರಿ ನರೇಂದ್ರ ೋದಿ ಗೋಧ್ರಾಕ್ಕೆ ಧಾವಿಸಿದರು. ಅದೇ ದಿನ ೋದಿ ಬಿಜೆಪಿ, ಆರ್‌ಎಸ್‌ಎಸ್, ವಿಹೆಚ್‌ಪಿ, ರಂಗ ದಳ, ಎಬಿವಿಪಿ ಮತ್ತಿತರ ಕೋಮುವಾದಿ ಘಟನೆಗಳ ಮುಖಂಡರ ಸಭೆಯಲ್ಲಿ ಗೋಧ್ರಾ ಿ ಪ್ರಕರಣದಲ್ಲಿ ಸಂಭವಿಸಿದ ಸಾವುಗಳಿಗೆ ಸೇಡು ತೀರಿಸಿಕೊಳ್ಳಲು ಮುಂದಿನ ಮೂರು ದಿನಗಳಲ್ಲಿ ಏನು ಬೇಕಾದರೂ ಮಾಡಿ ಎಂದರಂತೆ. ಇದು ಧೀಮಂತ ಭಟ್ಟ ಎಂಬಾತ ಹೊರಗೆಡಹಿದ ಸಂಗತಿ. ಈತ ಈಗ ಬರೋಡಾದ ಎಂ.ಎಸ್.ವಿಶ್ವವಿದ್ಯಾಲಯದ ಮುಖ್ಯ ಆಡಿಟರ್.

ತೆಹಲ್ಕಾದ ಕಾರ್ಯಾಚರಣೆಯನ್ನು 'ಆಜ್ ತಕ್' ಚಾನಲ್‌ನಲ್ಲಿ ಗುಜರಾತಿನ 2002ರ ಹತ್ಯಾಕಾಂಡಗಳ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ನಾನಾವತಿಯವರಿಗೆ ನೋಡ ಲಾಗಲಿಲ್ಲವಂತೆ. ಏಕೆಂದರೆ ಆ ದಿನ ಗುಜರಾತಿನಲ್ಲಿ ಆ ಚಾನಲ್‌ನ ಪ್ರಸಾರವನ್ನು ತಡೆಯಲಾಗಿತ್ತು. ಆದರೆ ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳು ಮತ್ತು ಅವರ ಪಕ್ಷದ ಶಾಸಕರಿಗೆ ಈ ಸಮಸ್ಯೆ ಇರಲಿಲ್ಲವಲ್ಲ. ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎನ್ನುವವರ ಜತೆ ಕೈಜೋಡಿಸಲು ಅವರಿಗೆ ಈಗಲಾದರೂ ಆತಂಕವೆನಿಸುವುದಿಲ್ಲವೇ?



ಆಗ ಭಜರಂಗ ದಳದ ರಾಷ್ಟ್ರೀಯ ಸಹ-ಸಂಯೋಜಕನಾಗಿದ್ದ ಹರೇಶ್ ಭಟ್ಟ ಕೂಡಾ ಈ ಸಭೆಯಲ್ಲಿ ಭಾಗವಹಿಸಿದ್ದರಂತೆ. 'ಆತ ನಮಗೆ ನಿಲ್ಲಿಸಿ ಎಂದರು, ಎಲ್ಲವೂ ನಿಂತುಹೋಯಿತು' ಎನ್ನುತ್ತಾರೆ ಹರೇಶ್ ಭಟ್ಟ. ಈತ ಈಗ ಗೋಧ್ರಾ ಶಾಸಕ. 2002ರ ವರೆಗೆ ಗೋಧ್ರಾ ಕಾಂಗ್ರೆಸ್ಸಿನ ಭದ್ರಕೋಟೆ ಆಗಿತ್ತು.

ಈತ ಒಂದು ಪಟಾಕಿ ಫ್ಯಾಕ್ಟರಿಯ ಮಾಲಕ. ಇಲ್ಲಿ 'ಕಂಟ್ರಿ' ಸ್ಫೋಟಕಗಳನ್ನು, ರಾಕೆಟ್ ಲಾಂಚರುಗಳನ್ನು ಕೂಡಾ ತಯಾರಿಸಿ ಅಹಮದಾಬಾದಿನ ಕೊಲೆಗಡುಕರಿಗೆ ಸರಬರಾಜು ಮಾಡಲಾಯಿತು ಎಂದು ಈತ ಹೇಳಿಕೊಳ್ಳುತ್ತಾನೆ. ಆಗ ಅಹಮದಬಾದಿನಲ್ಲಿ ಕರ್ಫ್ಯೂ ಇದ್ದರೂ ಪಂಜಾಬಿನಿಂದ ಖಡ್ಗಗಳನ್ನು ತರಿಸಿದೆವು, ಯುಪಿ, ಬಿಹಾರ ಮತ್ತು ಮಧ್ಯಪ್ರದೇಶದಿಂದ ಕಂಟ್ರಿ ಪಿಸ್ತೂಲುಗಳನ್ನು ತರಿಸಿದೆವು, ಎನ್ನುವ ಈತ ಆಗ ಈ ಯಾವ ರಾಜ್ಯಗಳೂ ಬಿಜೆಪಿ ಆಡಳಿತದಲ್ಲಿ ಇರಲಿಲ್ಲ, ಆದರೂ ಒಂದಲ್ಲ ಹಲವು ಬಾರಿ ಇವು ಗಡಿ ದಾಟಿ ಬಂದವು ಎಂದು ಹೆಮ್ಮೆ ಪಡುತ್ತಾನೆ. ಹತ್ತು ವರ್ಷಗಳ ಹಿಂದೆ ಈತ ತರಬೇತಿ ನೀಡಿದ 40 ಯುವಕರು ಡಿಸೆಂಬರ್ 1992ರಲ್ಲಿ ಬಾಬ್ರಿ ಮಸೀದಿ ಧ್ವಂಸ ಕಾರ್ಯದಲ್ಲಿ ಭಾಗವಹಿಸಿದರೆಂದೂ ಆತ ಹೊರಗೆಡಹುತ್ತಾನೆ. 30ಅಡಿ ಹಗ್ಗವೇರುವ ತರಬೇತಿ ಅವರಿಗೆ ನೀಡಿದ ಕ್ಯಾಂಪ್ ಇನ್ನೂ ಅಹಮದಾಬಾದಿನಲ್ಲಿ ಇದೆಯಂತೆ.

ಇನ್ನೊಬ್ಬ, ವಿಹೆಚ್‌ಪಿಯ ಧವಳ್ ಜಯಂತೀ ಪಟೇಲ್, ಸಬರ್ಕಾಂತಾ ದಲ್ಲಿರುವ ತನ್ನ ಕಲ್ಲುಗಣಿಗಳಲ್ಲಿನ ಡೈನಮೈಟ್ ಬಳಸಿದೆ ಎನ್ನುತ್ತಾನೆ. ಒಬ್ಬ ಹಳೆಯ ಆರೆಸ್ಸೆಸ್ಸಿಗ ಹಾಗೂ ಸ್ಫೋಟಕಗಳ ಪರಿಣತ ಅಮೃಧ್ ಪಟೇಲ್ ನೆರವಿನಿಂದ ಡೈನಮೈಟ್ ಮತ್ತು ಆರ್‌ಡಿಎಕ್ಸ್ ಆಧಾರಿತ ಮಡಿ ಬಳಸಿ ಬಾಂಬುಗಳನ್ನು ತಯಾರಿಸಲಾಯಿತಂತೆ.

ವಿಹೆಚ್‌ಪಿ ವಿಭಾಗ ಪ್ರಮುಖ ಅನಿಲ್ ಪಟೇಲ್ ಕೂಡ ಹೇಗೆ ಸಬರ್ಕಾಂತದಲ್ಲಿ ಸ್ಫೋಟಕಗಳನ್ನು ತಯಾರಿಸಿ ಅಹಮದಾಬಾದಿಗೆ ಪೂರೈಸಲಾಯಿತು ಎನ್ನುತ್ತಾನೆ.

* * *

'ಸ್ಕೋರು 200 ದಾಟಿತು' ಎಂದ ಭಜರಂಗಿ

ಈ ಹತ್ಯಾಕಾಂಡಗಳಲ್ಲಿ ಅತ್ಯಂತ ಭೀಕರವಾದ ಹತ್ಯಾಕಾಂಡ ನಡೆದದ್ದು ಅಹಮದಾಬಾದಿನ ನರೋದ ಗಾಂವ್ ಮತ್ತು ನರೋದ ಪತಿಯಾ ಎಂಬಲ್ಲಿ. ಇದರ ಪ್ರಮುಖ 'ರೂವಾರಿ' ಬಾಬು ಭಜರಂಗಿ. ಹೆಸರೇ ಸೂಚಿಸುವಂತೆ ಈತ ಸ್ಥಳೀಯ ಭಜರಂಗ ದಳದ ಮುಖಂಡ. 2002ರ ಫೆಬ್ರುವರಿ 27ರ ಸಂಜೆಯೇ ಯೋಜನೆ ಕಾರ್ಯಗತವಾಗಲಾರಂಭಿಸಿತು. ಸ್ಫೋಟಕ ಸಾಮಗ್ರಿಗಳನ್ನು ಸಂಗ್ರಹಿಸಲಾಯಿತು. ನರೋದ ಪತಿಯಾದ ಹಿಂದುಗಳಿಂದ 23 ರಿವಾಲ್ವರುಗಳನ್ನು ಸಂಗ್ರಹಿಸಿದೆ ಎಂದು ಆತ ಹೇಳುತ್ತಾನೆ.ಭಜರಂಗ ದಳ ಹಾಗೂ ವಿಹೆಚ್‌ಪಿಯಿಂದ ಆರಿಸಿದ ಕಾರ್ಯಕರ್ತರ ಒಂದು ತಂಡವನ್ನು ಆತ ರಚಿಸಿದ. ಇಲ್ಲಿ ಚಹಾರಾ ಎಂಬ ಒಂದು ಬುಡಕಟ್ಟು ಇದೆ. ಹಿಂದೆ ಇದನ್ನು ಬ್ರಿಟಿಶರು ಕ್ರಿಮಿನಲ್ ಬುಡಕಟ್ಟು ಎಂದು ಪಟ್ಟಿ ಮಾಡಿದ್ದರು. ಈ ಸಮುದಾಯದ ಕೆಲವರನ್ನು ಸೆಳೆಯಲಾಯಿತು. ತೆಹಲ್ಕಾ ಇವರಲ್ಲಿ ಇಬ್ಬರನ್ನು ಮಾತನಾಡಿಸಿತು. ಮುಸ್ಲಿಮರನ್ನು ಕೊಂದು ತಾವು ಹಿಂದೂ ಧರ್ಮಕ್ಕೆ ಮಹಾನ್ ಸೇವೆ ಸಲ್ಲಿಸುತ್ತಿದ್ದೇವೆ ಎಂದು ಇವರನ್ನು ನಂಬಿಸಿದ್ದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಫೆಬ್ರುವರಿ 28ರಂದು ಭಜರಂಗಿ ತನ್ನ ತಂಡವನ್ನು

ಪುಟ 12ಕ್ಕೆ

ನರೇಂದ್ರಭಾಯಿ ಇಲ್ಲದಿದ್ದರೆ ನಮಗೆ ಸೇಡು ತೀರಿಸಿಕೊಳ್ಳಲಾಗುತ್ತಿರಲಿಲ್ಲ !

ಇದು ಬಾಬು ಭಜರಂಗಿ ಉದ್ಗಾರ. ತೆಹಲ್ಕದ ತ್ರಕರ್ತರ ಪ್ರಶ್ನೆಗಳಿಗೆ ಆತನ ಉತ್ತರಗಳ ಒಂದು ್ಯಾಂಪಲ್ ಇಲ್ಲಿದೆ:


ತೆಹಲ್ಕ: ಹತ್ಯಾಕಾಂಡದ ದಿನ ನರೇಂದ್ರಭಾಯಿ ತಿಯಾಗೆ ಬಂದಿದ್ದರೇ?

ಭಜರಂಗಿ: ನರೇಂದ್ರ ಭಾಯಿ ಪತಿಯಾಗೆ ಂದಿದ್ದರು..... ಆದರೆ ಘಟನೆಗಳು ನಡೆದ ಸ್ಥಳಕ್ಕೆ ರಲಾಗಲಿಲ್ಲ, ಏಕೆಂದರೆ ಅವರ ಜತೆಗೆ ಮಾಂಡೋ-ಫಮಾಂಡೊ ಎಲ್ಲಾ ರುತ್ತಿದ್ದರು.... ಆದರೆ ಅವರು ಪತಿಯಾಕ್ಕೆ ಂದರು, ನಮ್ಮ ಉತ್ಸಾಹವನ್ನು ೋಡಿದರು........ನಿಜವಾಗಿಯೂ ಒಳ್ಳೇ ತಾವರಣ ಬಿಟ್ಟು ಹೋದರು........

ತೆಹಲ್ಕ: ನೀವೆಲ್ಲಾ ಪುಣ್ಯಾತ್ಮರು ಂದರು........

ಭಜರಂಗಿ: ನರೇಂದ್ರಭಾಯಿ ಕೆಲಸಗಳು ುದಿನ ನಿಲ್ಲಬಾರದು ಎಂದು ನೋಡಲು ಬಂದಿದ್ದರು.....ಅವರು ಅಹಮದಾಬಾದ್ ಎಲ್ಲಾ ಸುತ್ತಿದರು, ಮಿಯಾಗಳು(ಮುಸ್ಲಿಮರು) ಇದ್ದ ಎಲ್ಲಾ ಸ್ಥಳಗಳಿಗೆ, ...ಹಿಂದೂಗಳ ಪ್ರದೇಶಗಳಿಗೆ.........ಒಳ್ಳೆ ಕೆಲಸ ಮಾಡಿದ್ದೀರಿ ಮತ್ತು ಇನ್ನೂ ಹೆಚ್ಚು ಮಾಡಬೇಕು ಎಂದರು.

ಭಜರಂಗಿ: (ಹತ್ಯಾಕಾಂಡದ ನಂತರ) ಕಮಿಶನರ್(ನನ್ನ ವಿರುದ್ಧ) ಆದೇಶ ಹೊರಡಿಸಿದರು..... ಮನೆ ಬಿಟ್ಟು ಹೋಗಲು ಹೇಳಿದರು.....ನಾನು ಓಡಿ ಹೋದೆ.......ನರೇಂದ್ರಭಾಯಿ ನನ್ನನ್ನು ಬಚ್ಚಿಟ್ಟರು...... ಮೌಂಟ್ ಅಬುನಲ್ಲಿ ಗುಜರಾತ್ ಭವನದಲ್ಲಿ ನಾಲ್ಕೂವರೆ ತಿಂಗಳು...... .ಆನಂತರ ನರೇಂದ್ರಭಾಯಿ ಹೇಳಿದಂತೆಯೇ ಮಾಡಿದೆ.....ಬೇರೆ ಯಾರೂ ನರೇಂದ್ರಭಾಯಿ ಮಾಡಿದ್ದನ್ನು ಮಾಡಲಾರರು...... ಗುಜರಾತಿನಲ್ಲಿ ....ನರೇಂದ್ರಭಾಯಿಯ ಬೆಂಬಲ ಇಲ್ಲದಿದ್ದರೆ ನಾವು ಸೇಡು ತೀರಿಸಿಕೊಳ್ಳಲು



ಆಗುತ್ತಿರಲಿಲ್ಲ.....ನರೇಂದ್ರಭಾಯಿಗೆ ಸಂತೋಷವಾಯಿತು, ಜನಗಳಿಗೆ ಸಂತೋಷವಾಯಿತು, ನಮಗೆ ಸಂತೋಷವಾಯಿತು.....ನಾನು ಜೈಲಿಗೆ ಹೋದೆ, ಹಿಂದಿರುಗಿದೆ........ಮೊದಲಿನ ಜೀವನಕ್ಕೆ ಮರಳಿದೆ.

ಭಜರಂಗಿ: ನರೇಂದ್ರಭಾಯಿ ನನ್ನನ್ನು ಜೈಲಿನಿಂದ ಹೊರತಂದರು.........ಅವರು ಜಡ್ಜುಗಳನ್ನು ಬದಲಿಸುತ್ತಲೇ ಇದ್ದರು......ನನ್ನ ಬಿಡುಗಡೆಯಾಗುವಂತೆ ಅದನ್ನೆಲ್ಲಾ ಮಾಡಿದರು, ಇಲ್ಲವಾದರೆ ನಾನಿನ್ನೂ ಹೊರಬರುತ್ತಿರಲಿಲ್ಲ ....ಮೊದಲ ಜಡ್ಜ್ ಧೋಲಕಿಯ ಎಂಬವರೊಬ್ಬರು.......ಅವರು ಬಾಬು ಭಜರಂಗಿಗೆ ನೇಣು ಹಾಕಬೇಕು ಎಂದರು-ಒಂದಲ್ಲ, ನಾಲ್ಕು ಬಾರಿ, ಮತ್ತು ಅವರು ಫೈಲನ್ನು ಬದಿಗೆಸೆದರು.......ನಂತರ ಇನ್ನೊಬ್ಬರು ಬಂದರು, ಅವರು ನನಗೆ ನೇಣು ಹಾಕಬೇಕು ಎಂದು ಹೇಳಲಿಲ್ಲವಷ್ಟೆ...ನಂತರ ಮೂರನೆಯವರು..... ಆ ವೇಳೆಗೆ ಜೈಲಿನಲ್ಲಿ ನಾಲ್ಕೂವರೆ ತಿಂಗಳಾಗಿತ್ತು; ಆಗ ನರೇಂದ್ರಭಾಯಿ ನನಗೊಂದು ಸಂದೇಶ ಕಳಿಸಿದರು.... ಒಂದು ದಾರಿ ಹುಡುಕುತ್ತೇನೆ ಎಂದರು......ನಂತರ ಅವರು ಅಕ್ಷಯ ಮೆಹತಾ ಎಂಬ ಹೆಸರಿನ ಜಡ್ಜರನ್ನು ನೇಮಿಸಿದರು....ಅವರು ಎಂದೂ ಫೈಲನ್ನು ಅಥವಾ ಬೇರೇನನ್ನೂ ನೋಡಲಿಲ್ಲ....ಅವರು (ಜಾಮೀನು) ನೀಡಲಾಗಿದೆ ಎಂದಷ್ಟೆ ಹೇಳಿದರು.... ಮತ್ತು ನಾವೆಲ್ಲಾ ಹೊರಬಂದೆವು...ನಾವು ಸ್ವತಂತ್ರ ರಾದೆವು..... ಇದಕ್ಕೆ ನನಗೆ ದೇವರಲ್ಲಿ ನಂಬಿಕೆ ಇದೆ.....ನಾವು ಹಿಂದುತ್ವಕ್ಕಾಗಿ ಸಾಯಲು ಸಿದ್ಧ.......

!!?!!

ಸಾಂಸ್ಥಿಕ ಧರ್ಮಗಳು ತಮ್ಮ ಘೋಷಿತ ಉದ್ದೇಶಕ್ಕೆ ವಿರುದ್ಧವಾಗಿ ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಸಿಲುಕಿ ಸಮಾಜದ ಪ್ರಗತಿಯನ್ನು ನಿರ್ಬಂಧಿಸುವ ಸಂಕೋಲೆಗಳಾಗಿ, ಮನುಷ್ಯ-ಮನುಷ್ಯರ ನಡುವೆ ತಡೆಗೋಡೆಯಂತೆ ಅಡ್ಡನಿಂತಿರುವುದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಕೋಮುವಾದಿ ಶಕ್ತಿಗಳು ಇದೇ ಧರ್ಮವನ್ನು ತಮ್ಮ ದ್ವೇಷ-ಹಿಂಸೆಗಳನ್ನು ಹರಡುವ ಜೀವವಿರೋಧಿ ದುರುದ್ದೇಶಗಳಿಗೆ ಬಳಕೆ ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ಇಂತಹ ಜಡ್ಡುಗಟ್ಟಿದ ಕರ್ಮಠ ಧರ್ಮಗಳನ್ನು ತಿರಸ್ಕರಿಸಿ ಜನರ ನಡುವೆ ಧಾರ್ಮಿಕ ಸೌಹಾರ್ದತೆ, ಪ್ರೀತಿ ಜೀವನ ಪ್ರೀತಿ, ಜೀವಪರ ನಿಲುವನ್ನು ಪ್ರತಿಪಾದಿಸಿದ ಹಲವು ಪರಂಪರೆಗಳು ನಮ್ಮ ನಾಡಿನಲ್ಲಿವೆ. ಕೋಮುವಾದಿ ಶಕ್ತಿಗಳು ಮರೆಮಾಚಲು, ನಾಶಮಾಡಲು ಯತ್ನಿಸುವ ಇಂತಹ ಮಹತ್ವದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪರಂಪರೆಗಳ ಕುರಿತು ಒಂದು ಲೇಖನ ಲೇಖಕಿ, ಗುಲ್ಬರ್ಗಾ ಜಿಲ್ಲೆಯ ಉಪನ್ಯಾಸಕರೂ ಆದ ಡಾ॥ಮೀನಾಕ್ಷಿ ಬಾಳಿ ಅವರಿಂದ.

ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುತ್ತಿರುವ ಈ ಸಂದರ್ಭದಲ್ಲಿ.

ಸೌಹಾರ್ದ ಪರಂಪರೆಯ ವೈವಿಧ್ಯತೆಗಳು



ಸೂಫಿ ಪರಂಪರೆಯ ಶ್ರದ್ಧಾ ಕೇಂದ್ರ
ಹಿಂದೂ - ಮುಸ್ಲಿಂ ಸೌಹಾರ್ದ ಪರಂಪರೆಯ ಕೇಂದ್ರ ಬಾಬಾಬುಡನ್ ಗಿರಿ

ಪ್ರಭುತ್ವಕ್ಕೆ ಧರ್ಮಗಳು ಅಪರಿಹಾರ್ಯ ಮುಖವಾಡಗಳು. ಹೀಗೆಂದ ಒಂದೊಂದು ರಾಜಮನೆತನಗಳ ಆಳ್ವಿಕೆಯಲ್ಲಿ ನಿರ್ದಿಷ್ಟ ಧರ್ಮಗಳು ಮುಂಚೂಣಿಗೆ ಬಂದು ನಿಂತಿದ್ದು ಇದೆ. ಪ್ರಭುತ್ವಗಳು ಏನೇನೋ ಕಾರಣಗಳಿಂದಾಗಿ ನಿರ್ದಿಷ್ಟ ಧರ್ಮವೊಂದಕ್ಕೆ ಜೋತು ಕೊಂಡಿರುವಾಗಲೂ ಸಿಂಹಾಸನದ ಉಳಿವಿಗಾಗಿಯಾದರೂ ಧರ್ಮ ಸಮನ್ವಯವನ್ನು ಸಾಧಿಸಿಕೊಂಡುಬಂದಿವೆ. ಕರ್ನಾಟಕವು ಧರ್ಮ ಸಮನ್ವಯಕ್ಕೆ ಅಪೂರ್ವ ಮಾದರಿಯಾಗಿ ನಿಂತಿದೆ.

ನಿಜವಾದ ಬಂಗಾರ

ಕನ್ನಡನಾಡನ್ನು ಬಹುಧರ್ಮ, ಭಾಷೆ, ಸಂಸ್ಕೃತಿಗಳ ಆಡುಂಬೋಲವೆಂದು ಗುರುತಿಸಲಾಗಿದೆ. ಕನ್ನಡದ ಮೊಟ್ಟಮೊದಲ ಉಪಲಬ್ಧ ಕೃತಿಯಾದ ಕವಿರಾಜಮಾರ್ಗ ದಲ್ಲಿಯೇ ಕವಿ ಕನ್ನಡಿಗರ ಸೌಹಾರ್ದ ಪರಂಪರೆಯನ್ನು ಎತ್ತಿತೋರಿಸಿದ್ದಾನೆ.

ಕಸವರಮೆಂಬುದು ನೆರೆ ಸೈ
ರಿಸಲಾರ್ಪೊಡೆ ಪರ ವಿಚಾರಮಂ
ಪರಧರ್ಮಮುಮಂ
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವೊಡೆಲ್ಲಂ॥

ಎಂದು ವಿವರಿಸುತ್ತ ಪರಧರ್ಮ ಮತ್ತು ಪರವಿಚಾರವನ್ನು ಸೈರಿಸುವುದೇ ನಿಜವಾದ ಬಂಗಾರವೆಂದು ಘೋಷಿಸುತ್ತಾನೆ. ಪರಮತ ಸಹಿಷ್ಣುತೆ ಇಲ್ಲದ ಬದುಕು ಬದುಕೇ ಅಲ್ಲ. ಅಂಥ ಉಗ್ರಮತಾವಲಂಬಿ ಬದುಕಿನಲ್ಲಿ ಬಂಗಾರವಿದ್ದರೂ ಅದು ಕಸದ ಸಮಾನ ವ್ಯರ್ಥ ಅನ್ನುತ್ತಾನೆ. ಈ ಕಂದಪದ್ಯ ಒಂದೆಡೆ ಧರ್ಮ ಸಮನ್ವಯವನ್ನು ಒತ್ತಿ ಹೇಳುತ್ತಿರುವಾಗಲೇ ಇನ್ನೊಂದೆಡೆ ಧರ್ಮಾಂಧರ ಮಧ್ಯೆ ವೈಷಮ್ಯಗಳು ಇದ್ದಿರಬಹುದಾದ ಇತಿಹಾಸದತ್ತ ಬೆರಳು ಮಾಡುತ್ತದೆ.

'ಧರ್ಮ ಸಮನ್ವಯ'

ನಮ್ಮ ನಾಡಿನ ಬೇಲೂರಿನ ಶಾಸನವೊಂದರಲ್ಲಿ ಕೆತ್ತಲಾದ ಸುಪ್ರಸಿದ್ಧ ಶ್ಲೋಕವೊಂದು ಹೀಗಿದೆ.

ಯಂ ಶೈವಾಸ್ಸ ಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವ : ಕರ್ತೇತಿ ನೈಯಾಯಿಕಾ:॥
ಅರ್ಹನ್ನಿತ್ಯಥ ಜೈನ ಶಾಸನ ರತಾ: ಕರ್ಮೇತಿ ಮೀಮಾಂಸಕಾ:॥
ಸೋಯಂ ವೋ ವಿಧಧಾತು ವಾಂಛಿತ ಫಲಂ ಶ್ರೀ ಕೇಶವೇಸ್ಸದಾ॥

ಇದರ ತಾತ್ಪರ್ಯ: ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ಪ್ರಮಾಣದಲ್ಲಿ ಸಮರ್ಥರಾದ ನೈಯಾಯಿಕರು ಕರ್ತೃವೆಂದು, ಜೈನರು ಅರ್ಹಂತನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ ಅವನೇ ಆದ ಈ ಕೇಶವನೆಂಬ ಈಶನು ನಿಮಗೆ ಇಷ್ಟಾರ್ಥವನ್ನು ನೀಡಲಿ ಎಂದಾಗುತ್ತದೆ. ಈ ಶ್ಲೋಕವು ಕನ್ನಡಿಗರ ವಿಶಾಲ ಮನೋಭಾವನೆಯ ಧರ್ಮ ಸಮನ್ವಯವನ್ನು ಬಿಂಬಿಸುತ್ತಿರುವಾಗಲೂ ಇಷ್ಟು ಭಿನ್ನ ಸಮಯಾಚಾರಿಗಳು ಈ ನೆಲದಲ್ಲಿ ಬಾಳು ಹೂಡಿರುವ ಅನಿವಾರ್ಯತೆಯನ್ನು ಬಿಂಬಿಸುತ್ತದೆ.



ಡಾ. ಮೀನಾಕ್ಷಿ ಬಾಳಿ

ಶೈವ, ಜೈನ, ಬೌದ್ಧ, ಮೀಮಾಂಸಕರ, ನೈಯಾಯಿಕ, ಶಾಕ್ತ, ಇವುಗಳೊಂದಿಗೆ ಮತ್ತೆ ಮುಂದುವರೆದಂತೆ, ವೀರಶೈವ, ನಾಥ, ಸಿದ್ಧ, ಅವಧೂತ, ಸೂಫಿ, ಶರಣ ಹೀಗೆ ಅಸಂಖ್ಯ ಪರಂಪರೆಗಳು ಕೈಜೋಡಿಸಿವೆ. ಹೀಗಾಗಿಯೇ ಧರ್ಮಗಳ ನಡುವೆ ಪರಸ್ಪರ ಕಾದಾಟ, ಹೋರಾಟ, ದಾಳಿ, ಆಕ್ರಮಣ ಇವೆಲ್ಲವೂ ನಡೆಯುತ್ತಲೇ ಇರುತ್ತವೆ. ಒಂದರ್ಥದಲ್ಲಿ ಪ್ರಾಚೀನ ಇತಿಹಾಸವೆಂದರೆ, ಅದು ರಾಜಮನೆತನಗಳ ಸಿಂಹಾಸನ ಕಚ್ಚಾಟದ, ಧರ್ಮಗಳ ಸಂಘರ್ಷದ, ಜನಾಂಗೀಯ ವೈಷಮ್ಯಗಳ, ಅಸಂಖ್ಯ ಸಾಮೂಹಿಕ ಕೊಲೆ, ಸುಲಿಗೆ, ದರೋಡೆಗಳ ಇತಿಹಾಸವೆಂದೇ ಅರ್ಥ.

ವೈಷ್ಣವರು ಜೈನರುವೊಂದು

ಧರ್ಮಗಳ ನಡುವಿನ ಕಿತ್ತಾಟಕ್ಕೆ ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಬಹುದೊಡ್ಡ ಇತಿಹಾಸವೇ ಇದೆ. ರಕ್ತಸಿಕ್ತವಾದ ಇತಿಹಾಸದ ಪುಟಗಳಿಗೆ ಧರ್ಮದ ಬಂಗಾರದ ಚೌಕಟ್ಟುಗಳು ಆದರ್ಶದ ಮುಖವಾಡ ಹೊದಿಸಿವೆ. ಧರ್ಮ ವ್ಯಾಜ್ಯಗಳು ಸಂಭವಿಸುತ್ತಲೇ ಇರುತ್ತಿರುವುದಕ್ಕೆ ಹಲವು ಸಾಕ್ಷಿಗಳು ದೊರೆಯುತ್ತವೆ. ಉದಾಹರಣೆಗಾಗಿ ವಿಜಯನಗರ ಸಾಮ್ರಾಜ್ಯದ ಬುಕ್ಕದೇವರಾಯದ ಕಾಲಕ್ಕೆ ಜೈನ ಮತ್ತು ವೈಷ್ಣವರ ನಡುವೆ ವ್ಯಾಜ್ಯ ತಲೆದೋರಿರುತ್ತದೆ. ಅಲ್ಪಸಂಖ್ಯಾತರಾದ ಜೈನರು ತಮ್ಮ ಮೇಲೆ ಬಹುಸಂಖ್ಯಾತರಾದ ವೈಷ್ಣವರು ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂದು ಬುಕ್ಕರಾಯನ ಬಳಿ ದೂರು ಕೊಂಡೊಯ್ಯುತ್ತಾರೆ. ಆಗ ನ್ಯಾಯನಿಷ್ಠುರಿಯಾದ ಬುಕ್ಕರಾಯನು ಎರಡೂ ಕೋಮಿನ ನಡುವೆ ಸೌಹಾರ್ದ ಮೂಡುವಂತೆ ನ್ಯಾಯ ಬಗೆಹರಿಸಿದನೆಂದು ಶಾಸನವೊಂದು ತಿಳಿಸುತ್ತದೆ. "ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವು ಜೈನದರ್ಶನವು ರಕ್ಷಿಸಿಕೊಂಡು ಬಹೆವು. ವೈಷ್ಣವರು ಜೈನರುವೊಂದು: ಬೇಧವಾಗಿ ಕಾಣಲಾಗದು" ಎಂಬ ಉಲ್ಲೇಖವು ಶಾಸನದ ಸಾಲುಗಳಲ್ಲಿದ್ದು ವಿಜಯನಗರ ಸಾಮ್ರಾಟರ ಧರ್ಮ ಸಹಿಷ್ಣುತೆಯನ್ನು ಎತ್ತಿ ತೋರಿಸುತ್ತದೆ. ಆದರೂ ಹಲವು ವಿಭಿನ್ನ ಧಾರ್ಮಿಕಾಚರಣೆಗಳ ನಡುವೆ ಸಂಘರ್ಷ ತಪ್ಪಿದ್ದಲ್ಲ. ಈ ಸಂಘರ್ಷಗಳನ್ನು ನಿಯಂತ್ರಿಸುವುದೇ ಯಾವತ್ತೂ ದೊಡ್ಡ ಸವಾಲಾಗಿ ಪರಿಣಮಿಸುತ್ತದೆ. ಕನ್ನಡ ನಾಡಿನಲ್ಲಿ ಇಂಥ ಧಾರ್ಮಿಕ ಪುಂಡಾಟಿಕೆಯನ್ನು ನಿಯಂತ್ರಿಸುವ ಸೌಹಾರ್ದ ಪರಂಪರೆಯೊಂದು ಸದಾ ಜಾಗ್ರತವಾಗಿದೆ.

ಬೆವರ ಹನಿ ಹನಿಯಲ್ಲೂ

ಹಾಗೆ ನೋಡಿದರೆ ಧರ್ಮ ಮತ್ತು ದೇವರ ಬಗೆಗೆ ಜನಸಾಮಾನ್ಯರಿಗೆ ಯಾವತ್ತೂ ಅಂಥ ದೊಡ್ಡ ಭ್ರಮೆಗಳು ಇರುವುದಿಲ್ಲ. ದುಡಿದುಂಡು ಹೊಟ್ಟೆ ಹೊರೆಯುವ ಅವರಿಗೆ "ದೇವರು" ಗತಾನುಗತಿಕ ನಂಬಿಕೆಯ ಭಾಗ ಮಾತ್ರ. ಆದ್ದರಿಂದಲೇ ಅವರು ಎಲ್ಲರ ದೇವರನ್ನು, ಎಲ್ಲರ ನಂಬಿಕೆ, ಆಚರಣೆಗಳನ್ನು ಸಹಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ. ಶಿವ, ವಿಷ್ಣು, ಬ್ರಹ್ಮ, ಏಸು, ಬುದ್ಧ, ಅರ್ಹಂತ, ಅಲ್ಲಾ, ದೇ... ಹೀಗೆ ಅಸಂಖ್ಯ ದೇವರನ್ನು ಪೂಜಿಸುತ್ತಾರೆ. ಸೃಷ್ಟಿಯ ಪ್ರತಿ ಕಣಕಣದಲ್ಲೂ, ಮಣ್ಣಿನ ಹುಡಿಹುಡಿಯಲ್ಲೂ, ಬೆವರ ಹನಿಹನಿಯಲ್ಲಿಯೂ ದೇವರನ್ನು ಆವಾಹಿಸಿಕೊಂಡು ಆನಂದಪಡುತ್ತಾರೆ. ಆದರೆ ದುಡಿಯುವ ಅಸಂಖ್ಯಾತ ಕೈಗಳ ಮೇಲೆ ತ... ಮಾಲಕತ್ವವನ್ನು ಸ್ಥಾಪಿಸಬೇಕೆಂಬ ಜಮೀನ್ದಾರಿ ವ್ಯವಸ್ಥೆಯ ವಕ್ತಾರರು ಜನತೆಯ ಈ ಮುಗ್ಧ ಮಧು... ಭಕ್ತಿಯನ್ನು ಶೋಷಿಸುತ್ತಾರೆ. ಜಗತ್ತಿನೆಲ್ಲ ಸಂಪತ್ತು ಮತ್ತು ಅವಕಾಶ ವನ್ನು ತಾನು ಮಾತ್ರ ಅನುಭವಿಸಬೇಕೆಂಬ ಗುಂಪೊಂದು ಪ್ರಭುತ್ವದ ರೂಪುತೊಟ್ಟುಕೊಂಡು ಬರುತ್ತದೆ. ಇನ್ನೊಂದು ಗುಂಪು ದೇವರುಗಳನ್ನು ಗುತ್ತಿಗೆ ಹಿಡಿದುಕೊಂಡುಬರುತ್ತದೆ. ಹೀಗೆ ಬಂದ ರಾಜ್ಯಶಾಹಿ ಮತ್ತು ಪುರೋಹಿತಶಾಹಿಗಳಿಗೆ ಧರ್ಮವೇ ಬಂಡವಾಳವಾಗುತ್ತದೆ. ತಮ್ಮ ಅಸ್ತಿತ್ವದ ಉಳಿವಿಗಾಗಿ ಇವು ಜನಸಾಮಾನ್ಯರ ಮುಗ್ಧ ಭಕ್ತಿಯನ್ನು ಹದಗೆಡಿಸಿ ಧರ್ಮಾಂಧತೆಯ ರೂಪಕ್ಕೆ ತಿರುಗಿಸುತ್ತದೆ. ಆಗ ಧರ್ಮಗಳ ಹುಸಿ ಆವೇಶ ತಳೆದ ಕ್ರೌರ್ಯದಲ್ಲಿ ಹಿಂಸೆ ತಾನೇ ತಾನಾಗಿ ವಿಜೃಂಭಿ... ಮಾರಣಹೋಮಗಳು ಎಗ್ಗಿಲ್ಲದೇ ಸಾಗುತ್ತವೆ. ಇಂಥ ಧಾರ್ಮಿಕ ಬಿಕ್ಕಟ್ಟುಗಳಿಗೆ ರೋಗ ನಿರೋಧಕ ಶಕ್ತಿಯಾಗಿ ಕರ್ನಾಟಕದಲ್ಲಿ ಶರಣ, ಸಂತ, ಸೂಫಿ, ಅವಧೂತ, ನಾಥ, ಸಿದ್ಧ, ಶಾಕ್ತ ಪರಂಪರೆಗಳು ಅನವರತ ದುಡಿದಿವೆ.

ಜೀವಪರ ಸಿದ್ಧಾಂತ

ಕರ್ನಾಟಕದಲ್ಲಿ ಉದ್ದಕ್ಕೂ ಹರಡಿಕೊಂಡಿರುವ ಹರಿಹರ ದೇವಾಲಯಗಳು, ತ್ರಿಮೂರ್ತಿ ಕಲ್ಪನೆ, ಅರ್ಧನಾರೀಶ್ವರ ಪರಿಕಲ್ಪನೆ, ಭಾಗವತ ಪರಂಪರೆಗಳು ಇಂಥ ಧರ್ಮ ಸಮನ್ವಯದ ದ್ಯೋತಕವಾಗಿಯೇ ಜನ್ಮ ತಾಳಿವೆ. ಎಲ್ಲ ಮತೀಯ ಮಿತಿಗಳನ್ನು ಮೀರಿ ನಿಂತ ಶುದ್ಧ ಆಧ್ಯಾತ್ಮವಾದಿ ಚಿಂತನಧಾರೆಗಳು ಅಪ್ಪಟ ಮಾನವೀಯ ಬದುಕನ್ನು ಕಟ್ಟಿಬೆಳೆಸಿವೆ. ಜೀವಪರ ಸಿದ್ಧಾಂತಗಳನ್ನು ವಾಸ್ತವವಾದಿ ನೆಲೆಯಲ್ಲಿ ತೆರೆದಿಡುವ ಅಲ್ಲಮ, ಬಸವಣ್ಣ, ಮಾದಾರ ಚನ್ನಯ್ಯ, ಜೇಡರ ದಾಸಿಮಯ್ಯ, ಅಕ್ಕಮಹಾದೇವಿ ಮುಂತಾದವರು ನಿಗೂಢೀಕರಣ ಆಧ್ಯಾತ್ಮದ ಮೈಲಿಗೆಯನ್ನು ಕಳೆದರು. ದುಡಿಮೆಯೇ ದೇವರು. ಉತ್ಪಾದಿಸಿದೆಲ್ಲವನ್ನು ಸರ್ವರೂ ಸಮವಾಗಿ ಹಂಚಿಕೊಂಡು ತಿನ್ನುವ ದಾಸೋಹಭಾವ ಇವೆರಡನ್ನು ತತ್ವಬದ್ಧಗೊಳಿಸಿದರು.



ಖಾಜಾ ಬಂದೆ ನವಾಜ್ ದರ್ಗಾ, ಗುಲ್ಬರ್ಗಾ

ಬಸವಾದಿ ಶರಣರ ಕಾಯಕಪ್ರೇಮ ಮತ್ತು ನ್ಯಾಯನಿಷ್ಠುರಿ ನಿಲುವುಗಳನ್ನು ಮೈಗೂಡಿಸಿಕೊಂಡು ಬಂದ ತತ್ವ ಪದಕಾರರಂತೂ ಸೌಹಾರ್ದ ಪರಂಪರೆಯ ಮುಖವಾಣಿಯಾದರು. 15ನೇ

ಶತಮಾನದಿಂದ 20ನೇ ಶತಮಾನದವರೆಗೆ ಒಟ್ಟು ಐದು ಶತಮಾನಗಳ ಅವಧಿಯಲ್ಲಿ ಕರ್ನಾಟಕವು ತೀವ್ರತರವಾದ ರಾಜಕೀಯ ಪಲ್ಲಟಗಳ ಸಾಮಾಜಿಕ ವೈಪರೀತ್ಯಗಳು, ಧಾರ್ಮಿಕ ಘರ್ಷಣೆಗಳನ್ನು ಕಂಡಿದೆ. ಮೇಲಾಗಿ ಅಸಂಖ್ಯ ಪ್ರಾಕೃತಿಕ ವಿಕೋಪಗಳನ್ನು, ಆರ್ಥಿಕ ದಿವಾಳಿಖೋರತನವನ್ನು, ಸಾಂಸ್ಕೃತಿಕ ಸಂಕೀರ್ಣತೆಗಳನ್ನು ಅನುಭವಿಸಿದೆ. ಇಂಥ ಸಂಕಷ್ಟದ ಕ್ಷಣಗಳಲ್ಲಿ ಜನಸಾಮಾನ್ಯರನ್ನು ಶರಣ, ಸಂತ, ಸೂಫಿ ಪರಂಪರೆಗಳು ಕೈಹಿಡಿದು ನಡೆಸಿವೆ.

ಅವಧೂತ ಪ್ರಜ್ಞೆಯು ಈ ಪರಂಪರೆಗಳು ಕರ್ನಾಟಕದ ಬಹುಮುಖಿ ಸಂಸ್ಕೃತಿಯ ಅನಂತ ವೈವಿಧ್ಯತೆಗಳನ್ನು ಮುಕ್ಕಾಗದಂತೆ ಕಾಪಿಟ್ಟು ಕೊಳ್ಳುವಲ್ಲಿ ಸಫಲತೆ ಸಾಧಿಸಿವೆ. ತತ್ಫಲವಾಗಿಯೇ ಅಸ್ತಿತ್ವದಲ್ಲಿದ್ದ ಹಲವು ಹತ್ತು ಜಾತಿ ಮತ ಪಂಥಗಳ ಜನರು ಪರಸ್ಪರ ಸಹ್ಯವಾಗುವಂತೆ ಬಾಳನ್ನು ಹೂಡಿಕೊಂಡು ಬಂದಿದ್ದಾರೆ.

ನಿಜಗುಣಾದಿಯಾಗಿ ಕೂಡಲೂರು ಬಸಲಿಂಗಪ್ಪ, ಕಡಕೋಳದ ಮಡಿವಾಳಪ್ಪ, ಶಿಶುನಾಳ ಶರೀಫ ಸಾಹೇಬ, ಚನ್ನೂರ ಜಲಾಲಸಾಹೇಬ, ಮೋಟ್ನಳ್ಳಿ ಹಸನಸಾಹೇಬ, ಖೈನೂರು ಕೃಷ್ಣಪ್ಪ ಇವರ ಪಟ್ಟಿಯನ್ನು ಎಷ್ಟು ಬೇಕು ಅಷ್ಟು ಧೀರ್ಘವಾಗಿ ಬೆಳೆಸಬಹುದು.

ಶಿಷ್ಟಮತ ಮೀರಿ ನಿಂತು

ಈ ಸಂತರು ಎಲ್ಲ ಶಿಷ್ಟಮತ ಧರ್ಮಗಳನ್ನು ಮೀರಿನಿಂತು ಶುದ್ಧ ಜಾನಪದಿಯ ಅಪ್ಪಟ ಮನುಜಮತ ವಿಶ್ವಪಥವನ್ನು ಸಂಗತಗೊಳಿಸಿದರು. ಹರ-ಹರಿ-ಹಜರತ ಮಾರ್ಗವನ್ನು ಬಗಲಿಗೇರಿಸಿಕೊಂಡು ಹೊರಟ ಇವರ ಪ್ರಧಾನ ಕಾಳಜಿಯೆಂದರೆ ಜೀವಜಗತ್ತು.; ಇಹಲೋಕವೇ ಇವರಿಗೆ ಕರ್ತಾರನ ಕಮ್ಮಟ. ಪ್ರೀತಿಯೊಂದೇ ಎಲ್ಲ ಪೂಜೆಯ ಗುರಿ ಮತ್ತು ಗಮ್ಯ. ಧಾರವಾಡ ಜಿಲ್ಲೆಯ ಶಿಶುನಾಳ ಶರೀಫ ಸಾಹೇಬ ಹುಟ್ಟಿನಿಂದ ಮುಸಲ್ಮಾನ. ದೀಕ್ಷೆ ಕೊಟ್ಟ ಗುರುವು ಬ್ರಾಹ್ಮಣ ಮತದ ಗೋವಿಂದ ಭಟ್ಟನಾದರೆ, ಶರೀಫ ಬರೆದದ್ದೆಲ್ಲವೂ ವೀರಶೈವ ಶರಣ ಪರಂಪರೆಯ ಸಾಹಿತ್ಯ. ಅದರಂತೆಯೇ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಚನ್ನೂರಿನ ಜಲಾಲ ಸಾಹೇಬನ ಗುರು ವೀರಶೈವ ಅನುಯಾಯಿ ಕೂಡಲೂರು ಬಸಲಿಂಗಪ್ಪ, ಜಲಾಲಸಾಹೇಬರ ಸಾಹಿತ್ಯಕ ಗುರು ಕಡಕೋಳದ ಮಡಿವಾಳಪ್ಪ. ಇಂಥ ಜಲಾಲ ಸಾಹೇಬ ಬರೆದ ಒಂದು ಪದವನ್ನು ನೋಡಿದರು ಸಾಕು. ಕರ್ನಾಟಕದ ಧರ್ಮ ನಿರಪೇಕ್ಷ ನೆಲೆಯ ಪ್ರಬುದ್ಧ ಬದುಕಿನ ಭಿತ್ತಿಗಳು ಗೋಚರಿಸುತ್ತವೆ.

ಸಬ ಕಹತೆ ಹೈ ಈಶ್ವರ ಅಲ್ಲಾ
ಇದರ ಭೇದ ಯಾರಿಗೆ ತಿಳಿದಿಲ್ಲಾ ॥ಪ॥
ನಿರಾಕಾರಸೆ ಆಕಾರಹುವೆ
ವೇದಶಾಸ್ತ್ರಕೆ ನಿಲುಕಿಲ್ಲ
ಹಿಂದೂ ಮುಸ್ಲಮಾನ ಶಾಸ್ತ್ರ ಪಡತೆ ಹೈ
ಗುರುಮನೀಶೀಲ ಸಿಗಲಿಲ್ಲ ॥೧॥
ಲಾಯಕ್ ಗುರುಕೊ ಜಬ್ ಢೂಂಡಲಾಕೆ
ಏನು ಬೇಡಿದ್ದು ಕೊಡಬೇಕಲ್ಲಾ
ತನು ಮನ ಧನ ಸಬ ಲೋಭ ಛೋಡಕರ್
ಆಗಬೇಕು ಗುರುವಿನ ಚೇಲಾ॥
ಹಮ್ ಭೀ ಕಹತೆ ತುಮ್ ಭೀ ಕಹತೆ
ಮಾಡಬ್ಯಾಡರಿ ಮ್ಯಾಲಿನ ಶೀಲಾ
ಗುರು ಮಡಿವಾಳನ ಹೋಕರ್
ತೊಳಿಯಬೇಕರಿ ಒಳಗಿನ ಮೈಲಾ॥

ಒಂದು ಸಾಲು ಉರ್ದುವಿನಲ್ಲಿ ಇನ್ನೊಂದು ಸಾಲು ಕನ್ನಡದಲ್ಲಿ ಬರೆದ ಈ ಕೃತಿ ಕರ್ನಾಟಕ ಹಿಂದೂ-ಮುಸ್ಲಿಂ ಭಾವೈಕತಾ ಪರಂಪರೆಯ ಅಪ್ರತಿಮ ಉದಾಹರಣೆಯಾಗಿ ನಿಂತಿದೆ. ಕನ್ನಡ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ಇಂಥ ನೂರಾರು ರಚನೆಗಳು ದೊರೆಯುತ್ತವೆ.

> ಚಿಕ್ಕಮಗಳೂರಿನಲ್ಲಿರುವ ಬಾಬಾ ಬುಡನ್ ಸ್ವಾಮಿ ದರ್ಗಾ ದತ್ತಪೀಠವು ಹಿಂದೂ- ಮುಸ್ಲಿಮರಿಬ್ಬರ ಭಾವಸಂತುಷ್ಟಿಯ ಆರಾಧನಾ ಕೇಂದ್ರ. ಭಾರತಕ್ಕೆ ಕಾಫಿ ಬೀಜವನ್ನು ತಂದ ಮುಸ್ಲಿಂ ಸಂತ ಬಾಬಾಬುಡನ್‌ನ ಹೆಸರನ್ನು ಈ ಗಿರಿ ಪ್ರತಿನಿಧಿಸುತ್ತದೆ.

ಇದೇ ಪರಿಭಾವನೆಯನ್ನು ಬಿಂಬಿಸುವ ಕೃತಿಯೊಂದನ್ನು ಬೇನೂರು, ಹಜರತ್ ಕಾಕಿಪೀರ ಎಂಬ ಕವಿಯು ಬರೆದದ್ದು ಹೀಗಿದೆ.

ಕೈಸಾ ಬಾಬು ದೇಖಾ ಮೈ ಕನಸು ತೋಡಿ
ಕಮಲನೇತನೇ ಬಂದಿದ್ದ ಪಕಡೋ ಹಾತೋಂಸೇ ಪಾಪದೋಷ
ಮುಲನ್ನಿ ಪರಿಹರಿಸಿ ತಾನೇ ಹೋದ॥
ಮುಝುಕೋ ಶರಮ್ ಆತಿ ಹೈ ಮಾಡಲು
ವಿಂಟಿ ಜನರು ಏನಂದಾರಲ್ಲ
ಬಾತೋಂಸೆ ಕ್ಯಾ ಕಾಮ್ ಭಯಮೇ ಮುನ್ನದಿ
ಸ್ವಾಮಿ ಭಗವಂತ ತಾನೇ ಬಲ್ಲ॥
ನೌದರವಾಜೇ ಖೋಲೆ ಥೇ ತಲಿಸಿ ತಲ್ಲವಾರಿನ ವಿಧವಾಯಿತೆ
ದಸ್ವೆ ದರವಾಜೆ ಮೇ ದೈವ ಸ್ವರೂಪಂಬು
ಕನಪಿಂಚಿ ಬೆಳಕಾಯಿತೆ॥
ಮುರುಷದ್ ಮೇರಾ ಸಚ್ ಹೈ ಸಚ್ಚಿನಾಡು ಸಾವು ಬಾರದ ಮುನ್ನ
ಏಸಿ ಕರಾಮತ್ ಸತ್ಯ ಮುನ್ನದಿ ಸ್ವಾಮಿ ಸೇವೆ
ಮಾಡಲೋ ಮುನ್ನ॥
ಕರ್ತಿ ಕೋ ಕಲ್ ಪಾಂಚಿ ಥೇ ಪಿರನಸಾಬು
ಕನಸುಲೋ ಕವಿಕಟ್ಟಿದ ಕರನೇ . ಕು ನಯ ಚಿಂತಲೇದಯ್ಯರವಂತ
ಕಮಲವು ತೋರಿದ॥

ಇಂಥ ಚಮತ್ಕಾರಿಕ ಕೃತಿಗಳು ಉಕ್ತಿವೈಚಿತ್ರವನ್ನು ಬಿಂಬಿಸಲೆಂದೇ ರಚನೆಯಾಗಿರಬಹುದಾದರೂ ಅಂತರ್ಯದಲ್ಲಿ ಭಾಷಾ ಸಮನ್ವಯ ಮತ್ತು ಧರ್ಮ ಸಹಿಷ್ಣುತೆಗಳನ್ನು ಪೋಷಿಸುತ್ತವೆ. ಈ ಕೃತಿಯಲ್ಲಿ ಕನ್ನಡ, ಉರ್ದು, ತೆಲಗು ಮೂರು ಭಾಷೆಗಳ ಸಂಗಮವಿದೆ. ಧರ್ಮಗಳ ಸಂಕುಚಿತ, ಗಡಿಯನ್ನು ಮೀರಿದ ಈ ಸಂತರು ಭಾಷಾ ಮಡಿವಂತಿಕೆ, ಪ್ರಾದೇಶಿಕ ನಿರ್ಬಂಧನೆಗಳನ್ನು ಕಿತ್ತೊಗೆದು ಪರಸ್ಪರ ಭಾವ ಸಂವೇದಿ ನೆಲೆಯಲ್ಲಿ ಬದುಕನ್ನು ಕಟ್ಟಿಕೊಟ್ಟರು.

> ಕರ್ನಾಟಕದುದ್ದಕ್ಕೂ ನೂರಾರು ದರ್ಗಾ, ದೇವಾಲಯ, ಮಠಗಳು ಮನೆತನಗಳು, ಭಾವೈಕ್ಯತೆಯ ಫಲಕುಗಳನ್ನು ಹೊತ್ತುಕೊಂಡು ನಿಂತಿವೆ. ಇಲ್ಲಿ ನಡೆಯುವ ಜಾತ್ರೆ, ಉತ್ಸವ, ಹಬ್ಬ ಸಂತೆಗಳಲ್ಲಿ ಎಲ್ಲ ಜಾತಿಯ ಜನಾಂಗದವರಿಗೆ ಒಂದೊಂದು ಕೆಲಸಗಳು "ಚಾಜದಂತೆ" ಉಂಬಳಿಯಾಗಿ ಹಂಚಲ್ಪಟ್ಟಿವೆ. ಶಾಲು ಹೊದಿಸುವ, ಸಕ್ಕರೆ ಎಡೆ ಮಾಡುವ, ಗಂಧ ಹೂ ಅರ್ಪಿಸುವ, ಮೊಹರಮ್‌ದ ಪೀರ್‌ಗಳನ್ನು ಹೊರುವ ಹೀಗೆ ಲೆಕ್ಕವಿಲ್ಲದಷ್ಟು ಬದುಕಿನ ಭಿತ್ತಿಗಳು ಪರಸ್ಪರ ಕೊಡುಕೊಳ್ಳುವ ಸಂಕೇತವಾಗಿ ಮೈದಾಳಿ ನಿಂತಿವೆ.

ಇಹಲೋಕವೇ ಕರ್ತಾರನ ಕಮ್ಮಟ

ಪ್ರಭುತ್ವದ ದಬ್ಬಾಳಿಕೆಯನ್ನು ಪ್ರತಿರೋಧಿಸಿ ನಿಂತು ಸಾಮಾನ್ಯ ಜನರ ಬದುಕಿನ ಬವಣೆಗಳನ್ನು ಕುರಿತು ಪದ ರಚಿಸಿದರು. ಜನರ ಕಷ್ಟ, ಕೋಟಲೆ, ದುಃಖ, ದುಮ್ಮಾನಗಳಿಗೆ ಕಾರಣೀಭೂತವಾದ ಸ್ಥಳೀಯ ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಸೆಡ್ಡು ಹೊಡೆದು ನಿಂತ ಇವರುಗಳು ಜಾನಪದರಿಗೆ ಜಗದ್ಗುರುಗಳಾಗಿ ಕಂಗೊಳಿಸಿರಲು ಸಾಕು.

ಗುಲಬರ್ಗಾ ಜಿಲ್ಲೆಯ ಸುರಪೂರ ತಾಲ್ಲೂಕಿನ ಗೋನಾಲದ ಮೌನೇಶ್ವರನನ್ನು ಹಿಂದೂ-ಮುಸ್ಲೀಂ ಜನಾಂಗಗಳೆರಡೂ ಸಮಾನ ಗೌರವದಿಂದ ಪೂಜಿಸುತ್ತಿರುವುದಕ್ಕೂ ಇಂಥ ಜಾತ್ಯಾತೀತ ನಿಲುವೇ ಕಾರಣವಾಗಿದೆ. ಅಲ್ಲಾನ ಅವತಾರವೆಂದೇ ಭಾವಿಸಲಾಗುವ ತಿಂತಿಣಿ ಮೋನಪ್ಪಯ್ಯನನ್ನು ಉಪ್ಪಾಡಿಸುವ ಪರಿಯೊಂದನ್ನು ಗಮನಿಸಬೇಕು.

ಓಂ ಐಂಸಿ ಚಾರಲಾಕ ಜೀತಾ ಪೀರ ಪೈಗಂಬರ್


ಸೌಹಾರ್ದ ಪರಂಪರೆಗೆ ಬೆದರಿಕೆ ಒಡ್ಡುವ ಫ್ಯಾಸಿಸ್ಟರು

ಜಗದ್ಗುರು ಮೌನೇಶ್ವರ ಕಾಶಿಪತಿ
ಹರಹರ ಗಂಗಾಧರ ಮಹಾದೇವ

ಇಂಥ ಆಕರ್ಷಕವಾದ ಫರಾಕುಗಳು ಮತ್ತು ಭಾವೈಕ್ಯತೆ ಬಿಂಬಿಸುವ ಆಚರಣೆಗಳು ಕನ್ನಡ ನಾಡಿನುದ್ದಕ್ಕೂ ದೊರೆಯುತ್ತವೆ.

ಬೆಳಗಾವಿ ಜಿಲ್ಲೆಯ ಸಾವಳಗಿ ಶಿವಲಿಂಗೇಶ್ವರ, ಶಿರಹಟ್ಟಿ ಫಕೀರೇಶ್ವರ, ಕೊಡೆಕಲ್ ಬಸವಣ್ಣ, ತಿಂಥಿಣಿ ಮೋನಪಯ್ಯ, ಆಳಂದ ಲಾಡ್ಲೆ ಮಸಾಕ್ ಮುಂತಾದ ಪೀಠಗಳಿಗೆ ಹಿಂದೂ, ಮುಸ್ಲಿಂ ಬಾಂಧವರು ತಮ್ಮ ತಮ್ಮ ಮತಧರ್ಮಾಚರಣೆಗೆ ಅನುಸಾರವಾಗಿ ಭಕ್ತಿ ಸಲ್ಲಿಸುತ್ತಾರೆ. ಅವರ ಪೂಜಾ ಕೈಂಕರ್ಯದಲ್ಲಿ ನಂಬಿಕೆಯ ಮೊತ್ತದಲ್ಲಾಗಲಿ ಯಾವತ್ತೂ ಚ್ಯುತಿ ಬಂದಿಲ್ಲ. ಪ್ರತಿ ಜಿಲ್ಲೆಗೊಂದರಂತೆ ಇಂಥ ಭಾವ ಸಮನ್ವಯ ತಾಣಗಳನ್ನು ಪಟ್ಟಿ ಮಾಡಬಹುದು. ಇಂಥ ಧರ್ಮ ಸಮನ್ವಯದ ಭಾವುಕ ನೆಲೆಗಳಿಂದಾಗಿಯೇ ಕರ್ನಾಟಕದಲ್ಲಿ ಇವತ್ತಿಗೂ ಸೌಹಾರ್ದ ಪರಂಪರೆ ಮುಕ್ಕಾಗದಂತೆ ಉಳಿದುಕೊಂಡು ಬಂದಿರಲು ಸಾಕು.

ಸೂಫಿ ಪರಂಪರೆ

ಸೂಫಿ ಪರಂಪರೆಯಂತೂ ಕರ್ನಾಟಕದ ವೈಶಿಷ್ಟವೇ ಆಗಿದೆ. ಕ್ರಿ.ಶ. 1317-1423ರಲ್ಲಿ ಬಾಳಿದ ಕಲಬುರ್ಗಿಯ ಸಂತ ಕವಿ ಸೈಯದ್ ಮೊಹಮ್ಮದ್ ಗೇಸುದರಾಜ್‌ನೇ ಕರ್ನಾಟಕದ ಸೂಫಿ ಪರಂಪರೆಯ ಮೊದಲಿಗರಾಗಿದ್ದಾರೆ: ಖಾಜಾ ಬಂದೆ ನವಾಜ್ ಎಂದೇ ಪ್ರಸಿದ್ದಿಗೆ ಬಂದಿರುವ ಈತ ಉತ್ತರ ಹಿಂದೂಸ್ತಾನದ ಖ್ವಾಜಾ ಮೈನುದ್ದೀನ್ ಚಿಸ್ತಿ "ಯಾ" ಗರೀಬ್ ನವಾಜ್‌ಗೆ ಸಂವಾದಿ ಯಾಗಿ ನೆಲೆಸಿದ್ದಾರೆ.

ಇವರು ದಖನಿ ಶೈಲಿಯ ಉರ್ದುವಿನಲ್ಲಿ ಜೊತೆಗೆ ಫಾರಸಿ, ಅರಬ್ಬೀ 'ಹಾಗೂ ಸಂಸ್ಕೃತಗಳಲ್ಲಿಯೂ 100ಕ್ಕೂ ಮೇಲ್ಪಟ್ಟು ಕೃತಿಗಳನ್ನು ರಚಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿರುವ ಬಾಬಾ ಬುಡನ್ ಸ್ವಾಮಿ ದರ್ಗಾ ದತ್ತಪೀಠವು ಹಿಂದೂ-ಮುಸ್ಲಿಮರಿಬ್ಬರ ಭಾವಸಂತುಷ್ಟಿಯ ಆರಾಧನಾ ಕೇಂದ್ರ. ಭಾರತಕ್ಕೆ ಕಾಫಿ ಬೀಜವನ್ನು ತಂದ ಮುಸ್ಲಿಂ ಸಂತ ಬಾಬಾಬುಡನ್‌ನ ಹೆಸರನ್ನು ಈ ಗಿರಿ ಪ್ರತಿನಿಧಿಸುತ್ತದೆ. ಇಲ್ಲಿರುವ ಸಮಾಧಿ ಮತ್ತು ಪಾದುಕೆಗಳಿಗೆ ಹಿಂದೂಗಳು ಮುಸ್ಲೀಂರು ನಮಿಸುತ್ತಾರೆ. ಈ ಪೀಠದ ಮೇಲ್ಗಡೆಯಲ್ಲಿ ದಕ್ಷಿಣಕ್ಕೆ ಸ್ವಾಮಿಯ ಮಠವೊಂದು ಇದೆ. ಅದನ್ನು ಇಕ್ಕೇರಿಯ

ಪುಟ 11ಕ್ಕೆ

ದೀಪ ಹಚ್ಚೋಣ



ಅವರು ಬೆಂಕಿ ಹಚ್ಚುತ್ತಿದ್ದಾರೆ
ಬನ್ನಿ
ನಾವು ದೀಪ ಹಚ್ಚೋಣ.

ಎಲ್ಲ ಮಹಾತ್ಮರು
ಹಚ್ಚಿಟ್ಟ ಹಣತೆಗಳು
ಸಾಲಾಗಿ ಡಬ್ಬು ಬಿದ್ದಿವೆ.

ಮಂದಿರ ಮಸೀದಿ ಚರ್ಚುಗಳ ಆವರಣದಲ್ಲಿ
ಪ್ರೀತಿಯ ಬೀಜ ಬಿತ್ತಬಹುದಾದರೆ
ಧರ್ಮದ ವೇದಿಕೆಯಿಂದ
ಮನುಷ್ಯತ್ವದ ಹಾಡು ಹಾಡಬಹುದಾದರೆ
ದೇವರುಗಳಿಗೆ ಕರುಣೆ ಪ್ರೇಮದ ಪಾಠ
ಹೇಳಿಕೊಡಬಹುದಾದರೆ
ಅಲ್ಲಿಯೇ ಇರಿ

ಇಲ್ಲವಾದರೆ
ಮನಸಿನ ತುಂಬ ಹೂಗಳ ಬದಲು
ಬಂದೂಕು ಅರಳುತ್ತವೆ
ಕನಸಿನ ತುಂಬ ಪ್ರೇಮದ ಬದಲು
ಮದ್ದುಗುಂಡು ಕುಣಿಯುತ್ತವೆ
ಬೆರಳ ಕುಡಿ ದೀಪಗಳು
ಬೆಂಕಿ ಹಚ್ಚತೊಡಗುತ್ತವೆ.

ಬಂದು ಬಿಡಿ
ಜಗದ ದೀಪ ಡಬ್ಬು ಬೀಳುವ ಮೊದಲೆ
ನಾವು ದೀಪ ಹಚ್ಚೋಣ;
ಅವರು ಬೆಂಕಿ ಹಚ್ಚುತ್ತಿದ್ದಾರೆ.



● ಎಂ.ಡಿ.ಒಕ್ಕುಂದ

(ಲೋಹಿಯಾ ಪ್ರಕಾಶನ, ಬಳ್ಳಾರಿ - ಪ್ರಕಟಿಸಿರುವ 'ಮಗು ಮಲಗಿದೆ ಎದೆಯ ಮೇಲೆ' ಕವನ ಸಂಕಲನದಿಂದ)

ಮಂಡ್ಯ: ಬಿಜೆಪಿ ಮೊಟ್ಟೆಗೆ ಕಾವು ಕೊಡುತ್ತಿರುವ ಜೆಡಿ(ಎಸ್)

ಮಂಡ್ಯ ಜಿಲ್ಲೆಯ ಮಟ್ಟಿಗೆ ಬಿಜೆಪಿ ಎಂಬ ಮೊಟ್ಟೆಗೆ ಕಾವು ಕೊಟ್ಟು ಮರಿ ಮಾಡುವವರು ದಿಕ್ಕಿಲ್ಲದೆ ಲೋಳೆಯಾಗಿ ತಿಪ್ಪೆ ಸೇರುವ ಹೊತ್ತು ಬಂದಿತ್ತು. ಜೆಡಿ (ಎಸ್) ಮತ್ತಿದರ ವಿಶ್ವಾಸಘಾತಕ ತನದಿಂದಾಗಿ ಸಿಕ್ಕ ಅಧಿಕಾರ ಆ ಮೊಟ್ಟೆಗೆ ಕಾವು ಸಿಕ್ಕಿದಂತಾಗಿದ್ದು ಕೋಮುವಾದದ ಹೊಸ ಮರಿಗಳಿಗೆ ಚಿಲಿಪಿಲಿ ಗುಟ್ಟಲು ಅವಕಾಶ ನೀಡಿದಂತಾಗಿದೆ. ಬಿಜೆಪಿಗೆ ಅಧಿಕಾರ ನೀಡಬೇಕೆಂದು ಮೊನ್ನೆ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಜಿಲ್ಲೆಯ ಅನೇಕ ಕೇಂದ್ರಗಳಲ್ಲಿ ಯಡಿಯೂರಪ್ಪನನ್ನು ಮುಖ್ಯಮಂತ್ರಿ ಮಾಡಬೇಕೆಂದು ವೀರಶೈವರು ಪ್ರತಿಭಟಿಸಿದರು. ಬಹುಶಃ ಮಸೀದಿ ಮಂದಿರಗಳಲ್ಲಿ ಮಂಡ್ಯಕ್ಕೆ ಎಲ್.ಕೆ. ಅಡ್ವಾನಿ ಬಂದ ಸಂದರ್ಭಕ್ಕಿಂತ ಹೆಚ್ಚಿನ ಜನಸ್ಪಂದನ ಈಗ ಬಿಜೆಪಿಗೆ ಸಿಕ್ಕಿದೆ.

ಎಣ್ಣೆ ಹಚ್ಚುವ ಕೆಲಸ

ಈಗ ಸಿಗುತ್ತಿರುವ ಜನ ಬೆಂಬಲ ಮತ್ತು ಅಧಿಕಾರದ ಕಾರಣಕ್ಕಾಗಿ ಸಂಬಂಧ ಬಯಸುವ ಜನರನ್ನು ಸಂಘಟನಾತ್ಮಕವಾಗಿ ಬಳಸಿಕೊಳ್ಳಲು ಸಂಘ ಪರಿವಾರದ ಅಂಗ ಸಂಘಗಳು ಕ್ರಿಯಾಶೀಲವಾಗಿವೆ. ಭಾರತೀಯ ಕಿಸಾನ್ ಸಂಘದ ಹೆಸರಿನಲ್ಲಿ ಮಂಡ್ಯದ ಸುತ್ತಮುತ್ತಲ ರೈತರ ನಡುವೆ ಒಂದಷ್ಟು ಕೆಲಸಗಳು ನಡೆಯುತ್ತಿವೆ.

ಸಂಘ ಪರಿವಾರದ ಅಂಗ ಸಂಘಗಳು ಕ್ರಿಯಾಶೀಲವಾಗಿವೆ. ಭಾರತೀಯ ಕಿಸಾನ್ ಸಂಘದ ಹೆಸರಿನಲ್ಲಿ ಮಂಡ್ಯದ ಸುತ್ತಮುತ್ತಲ ರೈತರ ನಡುವೆ 'ಒಂದಷ್ಟು' ಕೆಲಸಗಳು ನಡೆಯುತ್ತಿವೆ. ಇತ್ತೀಚೆಗೆ ಮಳವಳ್ಳಿಯಲ್ಲಿ ಆರ್‌ಎಸ್‌ಎಸ್‌ನ ಜಿಲ್ಲಾ ಮಟ್ಟದ ತರಬೇತಿ ಶಿಬಿರ ನಡೆದಿದ್ದು, ತುಕ್ಕು ಹಿಡಿದಿದ್ದ ವಿಷ ಚಕ್ರದ ಕೀಲಿಗಳಿಗೆ ಎಣ್ಣೆ ಹಚ್ಚುವ ಕೆಲಸ ನಡೆದಿದೆ.

ಇತ್ತೀಚೆಗೆ ಮಳವಳ್ಳಿಯಲ್ಲಿ ಆರ್‌ಎಸ್‌ಎಸ್‌ನ ಜಿಲ್ಲಾ ಮಟ್ಟದ ತರಬೇತಿ ಶಿಬಿರ ನಡೆದಿದ್ದು, ತುಕ್ಕು ಹಿಡಿದಿದ್ದ ವಿಷ ಚಕ್ರದ ಕೀಲಿಗಳಿಗೆ ಎಣ್ಣೆ ಹಚ್ಚುವ ಕೆಲಸ ನಡೆದಿದೆ. ಪಾಂಡವಪುರದಲ್ಲಿ ಸಂಘ ಪರಿವಾರದ ಎಲ್ಲಾ ಚಟುವಟಿಕೆಗಳಿಗೆ ಅಲ್ಲಿಯ ಜೆಡಿ(ಎಸ್) ಶಾಸಕರೇ ಸಹಕಾರ ನೀಡುತ್ತಿದ್ದಾರೆ.

ಮಂಡ್ಯ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿ(ಎಸ್) ಅನಿರೀಕ್ಷಿತ ಜಯಭೇರಿ ಬಾರಿಸಿದರೆ, ಕಾಂಗ್ರೆಸ್ ಜನತೆಯಿಂದ ಮತ್ತಷ್ಟು ದೂರವಾಗಿರುವುದು ಈ ಚುನಾವಣೆಯಿಂದ ಮತ್ತಷ್ಟು ಸ್ಪಷ್ಟವಾಯಿತು. ಬಿಜೆಪಿ ಈ ಬಾರಿ 4 ಸ್ಥಳೀಯ ಸಂಸ್ಥೆಗಳಲ್ಲಿ ತನ್ನ ಪ್ರತಿನಿಧಿಗಳನ್ನು ಗೆಲ್ಲಿಸಿಕೊಳ್ಳಲು ಯಶಸ್ವಿಯಾಗಿವೆ. ಮಂಡ್ಯ ನಗರ ಸಭೆಯಲ್ಲಿ 2 ಸ್ಥಾನಗಳನ್ನು ಬಿಜೆಪಿ ಪಡೆದಿರುವುದು ಮುಂದಿನ ದಿನಗಳಲ್ಲಿ ಆತಂಕಕಾರಿಯಾಗಿ ಪರಿಣಮಿಸಬಹುದು. ಮಂಡ್ಯ ನಗರ ಸಭೆಯ ಒಂದು ಮತ್ತು ಮಳವಳ್ಳಿ ಪುರಸಭೆಯ ಎರಡು ಸ್ಥಾನಗಳಿಗೆ- ಜನರ ಪ್ರಶ್ನೆಗಳ ಆಧಾರದಲ್ಲಿ ಕನಿಷ್ಟ ಮಟ್ಟದ ಹೋರಾಟ ಆಂದೋಲನ ನಡೆಸದೆ ಚುನಾವಣೆಯಲ್ಲಿ ಸ್ಪರ್ಧಿಸಬಾರದೆಂಬ ನಿಲುವಿನ ಸಿಪಿಐ(ಎಂ) ಇದೇ ಪ್ರಥಮ ಬಾರಿಗೆ ಸ್ಪರ್ಧಿಸಲು ಸಾಧ್ಯವಾಗಿದೆ ಎಂಬುದು ಮಹತ್ವದ ವಿಚಾರ ವಾದರೂ ಗಣನೀಯ ಮತ ಪಡೆಯಲು ಸಾಧ್ಯ ವಾಗಲಿಲ್ಲ. ಸಿಪಿಐ(ಎಂ)ನ ಹೋರಾಟ, ಸಂಪರ್ಕ ಗಳನ್ನು ಸಂಘಟನೆಯಾಗಿಸಿ ಪರಿವರ್ತಿಸಲು ಆಗದೇ ಇರುವುದು ಮತ್ತು ಇತರೆ ಪಕ್ಷಗಳ ಜಾತಿ ರಾಜಕಾರಣ ಹಣ, ಹೆಂಡ ಇತ್ಯಾದಿ ಆಮಿಷ ಇದಕ್ಕೆ ಕಾರಣ.

ಸಮಸ್ಯೆ ಸುಳಿಯಲ್ಲಿ

ಮಂಡ್ಯ ಜಿಲ್ಲೆಯ ಜನತೆ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿ ತರಗುಟ್ಟುತ್ತಿದ್ದಾರೆ. ಕಬ್ಬು ಅರೆಯಲು ಕಾರ್ಖಾನೆಗಳು ಆರಂಭ ಮಾಡಿದ್ದರೂ ಕಬ್ಬಿಗೆ ದರ ನಿಗದಿ ಮಾಡಿಯಾಗಿಲ್ಲ. ಕಳೆದ ವಾರ ಜಿಲ್ಲಾಧಿಕಾರಿಗಳು ಕರೆದಿದ್ದ ಸಭೆಯಲ್ಲಿ ಕಾರ್ಖಾನೆಗಳ ಆಡಳಿತ ಮಂಡಳಿಗಳು ಟನ್‌ಗೆ ಈ ವರ್ಷ 850 ರೂ.ಗಳಿಗಿಂತ ಹೆಚ್ಚು ಕೊಡಲಾಗದು ಎಂದು ಪಟ್ಟು ಮಂಡಿಸಿದವು. ರೈತ ಸಂಘಟನೆ 1100 ರೂ.ಗೆ ಪಟ್ಟು ಹಿಡಿದಿದೆ. ಮುಂದಿನ ದಿನಗಳಲ್ಲಿ ಇದಕ್ಕೊಂದು ಹೋರಾಟದ ಸ್ವರೂಪ ಬರಬಹುದು. ಆದರೆ ಇದರಿಂದ ರೈತರಂತೂ ಆತಂಕಕ್ಕೀಡಾಗಿದ್ದಾರೆ. ಈಗಾಗಲೇ ಉತ್ಪಾದನಾ ವೆಚ್ಚ ಕಟಾವಿನ ವೆಚ್ಚ ಮಿತಿ ಮೀರಿದ್ದು 850 ರೂ. ನೀಡಿದರೆ ರೈತರೇ ಕೈಯಿಂದ ಹಣ ನೀಡಿ ಕಬ್ಬು ಕಟಾವು ಮಾಡಬೇಕಾಗಬಹುದು.

ಕಳೆದ ಮೂರು ತಿಂಗಳಿಂದ ರೇಷ್ಮೆ ಬೆಲೆ ಕೆ.ಜಿ.ಗೆ 30 ರಿಂದ 40 ರೂ.ಗಳ ಆಸುಪಾಸಿನಲ್ಲಿದೆ. ಉತ್ಪಾದನಾ ವೆಚ್ಚವೂ ಕೈಗೆ ಹತ್ತುತ್ತಿಲ್ಲ. ರೇಷ್ಮೆಯನ್ನು ನಂಬಿರುವ ಸಣ್ಣ ಅತಿ ಸಣ್ಣ ರೈತರು ದಿಕ್ಕುತೋಚದಂತಾಗಿದ್ದಾರೆ. ಆತ್ಮಹತ್ಯೆಯ ರೈತರ ಸಾಲಿಗೆ ರೇಷ್ಮೆ ಬೆಳೆಗಾರರು ಸೇರಿದರೆ ಆಶ್ಚರ್ಯವಿಲ್ಲ.

ರೈತರು ಜನತೆ ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ಜನಪ್ರತಿನಿಧಿಗಳಂತೂ ಅಧಿಕಾರದ ಏಣಿಯಾಟ ಆಡುತ್ತಿದ್ದಾರೆ. ಸಿಪಿಐ(ಎಂ) ತನ್ನ ಸೀಮಿತ ಶಕ್ತಿಯಲ್ಲಿ ಕೆಲವು ಪ್ರಶ್ನೆಗಳ ಆಧಾರದಲ್ಲಿ ಹೋರಾಟ ಮಾಡಿದೆ, ಮಾಡುತ್ತಿದೆ.

■ ಕೃಷ್ಣೇಗೌಡ.ಟಿ.ಎಲ್

ಉಡುಪಿ : ಹೆದ್ದಾರಿ ದುರಸ್ತಿ

ರಾಷ್ಟ್ರೀಯ ಹೆದ್ದಾರಿ ಬಂದ್

ಕರಾವಳಿ ಕರ್ನಾಟಕದ ಜೀವನಾಡಿಯಂತಿರುವ ರಾಷ್ಟ್ರೀಯ ಹೆದ್ದಾರಿ-17 ಅತ್ಯಂತ ಹದಗೆಟ್ಟಿದ್ದು ಅದನ್ನು ತುರ್ತಾಗಿ ದುರಸ್ತಿಪಡಿಸುವಂತೆ ಆಗ್ರಹಿಸಿ ವಿವಿಧ ರಾಜಕೀಯ ಪಕ್ಷಗಳು ಮತ್ತು ಸಂಘ ಸಂಸ್ಥೆಗಳನ್ನೊಳಗೊಂಡ 'ರಾಷ್ಟ್ರೀಯ ಹೆದ್ದಾರಿ ಉಳಿಸಿ ಹೋರಾಟ ಸಮಿತಿ' ನೀಡಿದ್ದ ಕರೆಯಂತೆ 30.10.2007 ರಂದು ನಡೆಸಲಾದ 'ರಾಷ್ಟ್ರೀಯ ಹೆದ್ದಾರಿ ಬಂದ್' ಕಾರ್ಯಕ್ರಮ ಉಡುಪಿ ಜಿಲ್ಲೆಯಲ್ಲಿ ಸಂಪೂರ್ಣ ಯಶಸ್ವಿಯಾಗಿದೆ.

ಎರಡನೇ ಪಂಚವಾರ್ಷಿಕ ಯೋಜನೆಯ ಅಂಗವಾಗಿ ನಿರ್ಮಾಣ ವಾಗಿರುವ ಮುಂಬಾಯಿಯಿಂದ ಕನ್ಯಾಕುಮಾರಿವರೆಗಿನ ಈ ರಾಷ್ಟ್ರೀಯ ಹೆದ್ದಾರಿ ಕೇರಳ, ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಜೋಡಿಸುವ ಏಕಮೇವ ಮಾರ್ಗವಾಗಿದ್ದು ದೇಶದ ಆರ್ಥಿಕತೆಯಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿದೆ. 1960 ದಶಕದಲ್ಲಿ ಪೂರ್ಣಗೊಂಡ ಈ ಹೆದ್ದಾರಿಗೆ ಅಡ್ಡವಾಗಿ ಹರಿಯುವ ಡಜನ್‌ಗಟ್ಟಲೆ ಹೊಳೆಗಳಿಗೆ ಅಂದಿನ ಕಾಲದಲ್ಲೇ ಉತ್ಕೃಷ್ಟ ಗುಣಮಟ್ಟದ ಸೇತುವೆಗಳನ್ನು ನಿರ್ಮಿಸಲಾಗಿತ್ತು. ಕಳೆದ ಅರ್ಧ ಶತಮಾನದಲ್ಲಿ ಈ ಪ್ರದೇಶದಲ್ಲಿ ಬೀಳುವ ಭಾರಿ ಮಳೆಯನ್ನು ತಾಳಿಕೊಂಡು ಈ ಹೆದ್ದಾರಿ ಸಾಕಷ್ಟು ಸುಸ್ಥಿತಿಯಲ್ಲೇ ಇದ್ದಿತು. ಶರಾವತಿ ಸೇತುವೆಯೊಂದನ್ನು ಹೊರತುಪಡಿಸಿದರೆ ಬೇರೆಲ್ಲೂ ಹೆಚ್ಚಿನ ದುರಸ್ತಿಯ ಅಗತ್ಯವೂ ಕಂಡು ಬಂದಿರಲಿಲ್ಲ.

ರಾಕ್ಷಸ ಗಾತ್ರದ ಲಾರಿಗಳು

ಆದರೆ ಕಳೆದ ನಾಲ್ಕಾರು ವರ್ಷಗಳಿಂದ ಭಾರೀ ಗಾತ್ರದ ಅದಿರು ಲಾರಿಗಳು ಈ ಹೆದ್ದಾರಿಯಲ್ಲಿ ಓಡಾಡಲು ಆರಂಭಿಸಿದ ಮೇಲೆ ಹೆದ್ದಾರಿಯ 'ಗ್ರಹಚಾರ' ಕೆಡಲಾರಂಭಿಸಿತು. ಮಳೆಗಾಲದಲ್ಲಿ ಬಿಡದೆ ಹಗಲೂ ರಾತ್ರಿ ಕಬ್ಬಿಣದ ಅದಿರು ತುಂಬಿಕೊಂಡು ನವ ಮಂಗಳೂರು ಬಂದರಕ್ಕೆ ಬರುವ ರಾಕ್ಷಸ ಗಾತ್ರದ ಲಾರಿಗಳು ಮತ್ತು ಬುಲೆಟ್ ಟ್ಯಾಂಕರುಗಳಿಂದಾಗಿ ಹೆದ್ದಾರಿ ಸರ್ವನಾಶವಾಯಿತು. ಅತಿಭಾರದ ಟ್ರಕ್ಕುಗಳನ್ನು



ತಡೆಯುವ ಪ್ರಹಸನ ಕೆಲವೆಡೆ ನಡೆಯಿತಾದರೂ ಈ ಕಾರ್ಯಕ್ರಮಗಳಿಗೆ ಪ್ರಚೋದನೆ ನೀಡಿದ ಬಿ.ಜೆ.ಪಿ.ಯಂತಹ ಪಕ್ಷಗಳ ಮುಖಂಡರೇ ಅದಿರು ಲಾರಿಗಳ ಮಾಲೀಕರಾಗಿದ್ದುದು ಒಂದು ವಿಪರ್ಯಾಸ. ಕುಮಟಾದಿಂದ ಮಂಗಳೂರುವರೆಗಿನ ರಸ್ತೆಯಲ್ಲಿ ನಿರ್ಮಾಣವಾದ ಹೊಂಡಗಳನ್ನು ತಪ್ಪಿಸಲು ವಾಹನಗಳು ಕಥಕ್ಕಳಿ ನರ್ತನ ಮಾಡಬೇಕಾಯಿತು. ಉಡುಪಿ ಜಿಲ್ಲೆಯ ತುತ್ತ ತುದಿಯ ಶಿರೂರಿನಿಂದ ಹೆಜಮಾಡಿಯವರೆಗಿನ ಹೆದ್ದಾರಿಯಲ್ಲಿ ಪ್ರತಿನಿತ್ಯ ಸಂಭವಿಸುವ ಅಪಘಾತಗಳಿಗೆ ಲೆಕ್ಕವೇ ಇಲ್ಲ, ವರ್ಷ ವರ್ಷವೂ ಇಲ್ಲ ರಸ್ತೆ ಅಪಘಾತಗಳಿಂದಸಾಯುವವರ ಸಂಖ್ಯೆ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರ ಸಂಖ್ಯೆಯನ್ನು ಮೀರುತ್ತದೆ! ಈ ಭಾಗದ ರಾಷ್ಟ್ರೀಯ ಹೆದ್ದಾರಿಯನ್ನು ಚತುಷ್ಪಥಗೊಳಿಸುವ ಯೋಜನೆ ಇನ್ನೂ ಕಾಗದದಲ್ಲೇ ಇದೆ. ಹೆದ್ದಾರಿಯನ್ನು ಚತುಷ್ಪಥ ಗೊಳಿಸುವ ಯೋಜನೆ ಇನ್ನೂ ಕಾಗದದಲ್ಲೇ ಇದೆ. ಹೆದ್ದಾರಿಯನ್ನು ದುರಸ್ತಿಗೊಳಿಸುವ ಅಥವಾ ಚತುಷ್ಪಥಗೊಳಿಸುವ ಬಗ್ಗೆ ಇಲ್ಲಿನ ಬಿ.ಜೆ.ಪಿ. ಸಂಸದೆ ಮನೋರಮಾ ಮಧ್ವರಾಜ್ ಆಗಲೀ ಇತರ ಶಾಸಕರಾಗಲೀ ಎಂದೂ ತಲೆಕೆಡಿಸಿಕೊಂಡಿಲ್ಲ. ಇವರ ಪಾಲಿಗೆ ಹೆದ್ದಾರಿಯ ದುರವಸ್ಥೆಯೊಂದು ಸಮಸ್ಯೆಯೇ ಅಲ್ಲ ಎನ್ನುವಂತಿದೆ.

ಮೊನ್ನೆ ಅಕ್ಟೋಬರ್ 30 ರಂದು ನಡೆದ ಹೆದ್ದಾರಿ ಬಂದ್ ಕಾರ್ಯಕ್ರಮದಲ್ಲಿ ಜನ ಸ್ವಯಂಸ್ಫೂರ್ತಿಯಿಂದ ಪಾಲುಗೊಂಡರು. ಕೆಲವೆಡೆ ಹೆದ್ದಾರಿಯ ಮೇಲೆ ಕ್ರಿಕೆಟ್, ಪುಟ್‌ಬಾಲ್, ಲಗೋರಿ ಆಟ ಆಡಿ ಪ್ರತಿಭಟಿಸಿದರು. ಬಂದ್‌ನ ಯಶಸ್ಸು ಅಧಿಕಾರಿ ವರ್ಗದ ಮೇಲಾದರೂ ಚುರುಕು ಮುಟ್ಟಿಸಿದೆ. ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಮುಖ್ಯ ಇಂಜಿನಿಯರ್ ಶ್ರೀ ಬಿಸ್ಸೇಗೌಡರು ಹೋರಾಟ ಸಮಿತಿಯ ಮುಖಂಡರೊಂದಿಗೆ ಈಗಾಗಲೇ ಹೆದ್ದಾರಿಯ ಸಮೀಕ್ಷೆ ನಡೆಸಿದ್ದಾರೆ. ಆದರೂ ವಿಪರೀತ ಮಳೆಯಿಂದಾಗಿ ಹೆದ್ದಾರಿ ಕೆಟ್ಟು ಹೋಗಿದೆ ಎಂಬ ಅವರ ಮಾತುಗಳನ್ನು ಒಪ್ಪಲಾಗದು. ದುರಸ್ತಿಯ ಹೆಸರಿನಲ್ಲಿ ನಡೆಯುತ್ತಿರುವ ಕಳಪೆ ಕಾಮಗಾರಿ ಮತ್ತು ಭಾರಿ ಸರಕು ವಾಹನಗಳು ಅದರಲ್ಲೂ ಅದಿರು ಲಾರಿಗಳ ಹಾವಳಿಯೇ ಹೆದ್ದಾರಿಯ ಸರ್ವನಾಶಕ್ಕೆ ಕಾರಣವಾಗಿವೆ.

ಇಷ್ಟಾದರೂ ಇಲ್ಲಿನ ಲೋಕಸಭಾ ಸದಸ್ಯೆಯಾಗಲೀ, ಶಾಸಕರಾಗಲಿ ಬಂದ್ ಕಾರ್ಯಕ್ರಮದ ಕಡೆ ತಲೆಹಾಕಿ ನೋಡಲೇ ಇಲ್ಲ. ಬಂದ್ ಬಹುತೇಕ ಶಾಂತಿಯುತವಾಗಿದ್ದಾಗಲೂ ಸಂಘ ಪರಿವಾರ ಜನ ತಮ್ಮ ದುರ್ಬುದ್ಧಿಯನ್ನು ತೋರಿಸದೆ ಬಿಡಲಿಲ್ಲ. ಕುಂದಾಪುರ 'ಹೊಸ ಬದುಕು' ಪತ್ರಿಕೆಯ ಸಂಪಾದಕ ಶಶಿಧರ ಹೆಮ್ಮಾಡಿ ಎಂಬುವರು ಪತ್ರಿಕೆಯ ಕೆಲಸದ ಮೇಲೆ ಬೈಕಿನಲ್ಲಿ ಬರುತ್ತಿದ್ದಾಗ ಭಜರಂಗಿಗಳು ಅವರನ್ನು ತಡೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಲು ಯತ್ನಿಸಿದ್ದಲ್ಲದೆ ಅವರಿಗೆ ಬೆದರಿಕೆಯನ್ನು ಒಡ್ಡಿದ್ದಾರೆ. ಇದೆಲ್ಲವೂ ಕುಂದಾಪುರದ ಎಸ್.ಐ. ಜಯಂತ್ ಅವರ ಸಮ್ಮುಖದಲ್ಲೇ ನಡೆದಿದೆಯೆಂದು ಶ್ರೀ ಶಶಿಧರ್ ಹೆಮ್ಮಾಡಿ ದೂರನ್ನಿತ್ತಿದ್ದಾರೆ. ಜನಪರ ಹೋರಾಟವೊಂದನ್ನು ಭಜರಂಗಿಗಳು ಹೀಗೆ ತಮ್ಮ ರಾಜಕೀಯ ದ್ವೇಷ ಸಾಧನೆಗೆ ಬಳಸಿಕೊಂಡಿದ್ದಾರೆ.

● ಎ.ಎಸ್. ಆಚಾರ್ಯ

ಜನಶಕ್ತಿ ಕನ್ನಡ ವಾರಪತ್ರಿಕೆ

ಬಾಣೆ ಜಮೀನು : ಹಾದಿ ತಪ್ಪಿಸುವ ನಾಯಕರು


ಕೊಡಗು ಬಂದ್ : ರಾಜ್ಯೋತ್ಸವ ಬಹಿಷ್ಕಾರ

ಕೊಡಗಿನಲ್ಲಿ ತಲೆತಲಾಂತರದಿಂದ ಬಾಣೆ ಜಾಗ ಅದರ ಒಡೆತನದಲ್ಲಿರುವ ಹಿಡುವಳಿದಾರನದ್ದಾದರೂ ಭಾ.ಜ.ಪ. ಜಾತ್ಯಾತೀತ ಜನತಾದಳ ಮೈತ್ರಿ ಸರ್ಕಾರ ಈ ಜಾಗ ಸರ್ಕಾರದ್ದೆಂದು ಹೇಳಿ ಆದೇಶ ಹೊರಡಿಸಿತು. ಇದರ ವಿರುದ್ಧ ಕೊಡಗಿನಲ್ಲಿ ಹಲವು ರೀತಿಯ ಹೋರಾಟಗಳು ನಡೆದ ಪರಿಣಾಮವಾಗಿ ಸರ್ಕಾರ ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಲು ನಿರ್ಬಂಧಿತವಾಯಿತು. ಆದರೆ ಆ ಸುತ್ತೋಲೆ ಇಂದೂ ಅನುಷ್ಠಾನದಲ್ಲಿದೆ. ಇದರಿಂದ ಕೊಡಗಿನ ಭೂ ಹಿಡುವಳಿದಾರರಿಗೆ ತುಂಬಾ ಕಷ್ಟವಾಗುತ್ತಿದೆ. ಸುತ್ತೋಲೆ ಇನ್ನೂ ಅನುಷ್ಠಾನದಲ್ಲಿರುವುದನ್ನು ವಿರೋಧಿಸಿ ನವೆಂಬರ್ ಒಂದರಂದು ಕೊಡಗಿನಲ್ಲಿ ಕರಾಳ ದಿನಾಚರಣೆ ನಡೆಸಲಾಗಿದೆ. ಅಂದು ಕೊಡಗು ಬಂದ್ ಆಯಿತು. ಈ ಕರೆಯನ್ನು ಕೊಟ್ಟಿದ್ದು ಕೊಡಗು ಅಸ್ತಿತ್ವ ಸಮಿತಿಯಾದರೂ ಮುಖಂಡತ್ವ ಭಾ.ಜ.ಪ.ದ ಕೈಯಲ್ಲಿತ್ತೆನ್ನುವುದು ಸ್ಪಷ್ಟ ಸಿಪಿಐ(ಎಂ) ಮಾತ್ರವೇ ಅಂದಿನ ಈ ಬಂದ್‌ಗೆ ಬೆಂಬಲ ಕೊಡಲಿಲ್ಲ.

ಬಹಿಷ್ಕಾರ , ದಾಂಧಲೆ

ರಾಜ್ಯೋತ್ಸವದ ಕಾರ್ಯಕ್ರಮಗಳು ಬಹಿಷ್ಕರಿಸಲ್ಪಟ್ಟವು. ಅಷ್ಟೇ ಅಲ್ಲ ಸರ್ಕಾರದ ವತಿಯಿಂದ ನಡೆಸಲಾದ ಕಾರ್ಯಕ್ರಮಗಳನ್ನು ಅಸ್ತವ್ಯಸ್ತಗೊಳಿಸಲು ಭಾ.ಜ.ಪ. ದ ಶಾಸಕರುಗಳಾದ ಕೆ.ಜಿ.ಬೋಪಯ್ಯ, ಜಾತ್ಯಾತೀತ ಜನತಾದಳದ ಶಾಸಕ ಅರುಣ್ ಮಾಚಯ್ಯನವರ ನೇತೃತ್ವದಲ್ಲೇ ಕಾರ್ಯಾಚರಣೆಗಳೂ ನಡೆದವು. ಜಿಲ್ಲಾಡಳಿತ ಮತ್ತು ಪೋಲಿಸ್ ಖಾತೆಯ ವೈಫಲ್ಯದಿಂದ ಈ ಮಹಾನುಭಾವರುಗಳು ತಮ್ಮ ಕಾರ್ಯದಲ್ಲಿ ಯಶಸ್ಸನ್ನೂ ಕಂಡರು.

ಆದರೆ ಇಂದಿನ ಈ ಸ್ಥಿತಿಗೆ ಭಾ.ಜ.ಪ. ಮತ್ತು



ಜಾತ್ಯಾತೀತ ಜನತಾದಳದ ಸ್ಥಳೀಯ ಮುಖಂಡರುಗಳು, ಶಾಸಕರುಗಳು ಮತ್ತು ರಾಜ್ಯ ಮುಖಂಡರುಗಳೇ ಕಾರಣ. ಅವರಿಗೆ ಇನ್ನೂ ಸಮಸ್ಯೆಯ ಸ್ಪಷ್ಟ ಅರಿವಿಲ್ಲ. ತಮ್ಮ ಸಹಯೋಗದ ಸರ್ಕಾರದಲ್ಲಿ ತಮ್ಮ ಪಕ್ಷದ ಮಂತ್ರಿಯಾದ ಜಗದೀಶಶೆಟ್ಟರ್‌ರವರ ಕೈಯಲ್ಲಿದ್ದ ಕಂದಾಯ ಖಾತೆಯಿಂದಲೇ ಈ ಸುತ್ತೋಲೆ ಬಂದದ್ದಾದರೂ ಭಾ.ಜ.ಪ.ದವರಿಗೆ ಅದನ್ನು ಹಿಂತೆಗೆಸಲಾಗಲಿಲ್ಲ.

ಕೊಡಗಿನಲ್ಲಿ ಭಾ.ಜ.ಪ.ಕ್ಕೆ ಇರುವುದು ಇಬ್ಬರು ಶಾಸಕರು, ಅವರಲ್ಲಿ ಒಬ್ಬರಾದ ಕೆ.ಜಿ.ಬೋಪಯ್ಯನವರು ಅರುಣ್ ಮಾಚಯ್ಯನವರೊಂದಿಗೆ ಜಾ.ಜನತಾದಳದ ದೇವೇಗೌಡರ ಮನೆ ಬಾಗಿಲಿನಲ್ಲಿ ಕಾದು ಕುಳಿತರು.

ಬಾಣೆ ಹಕ್ಕಿನ ಜಮೀನಿನ ಬಗ್ಗೆ ಆಳವಾದ ಸಮಗ್ರ ತಿಳುವಳಿಕೆಯಾಗಲೀ, ನಿಜ ಕಾಳಜಿಯಾಗಲೀ ಇಲ್ಲದ ನಾಯಕರು ರಾಜ್ಯೋತ್ಸವ ಬಹಿಷ್ಕಾರದಂತಹ ಚಟುವಟಿಕೆಗೆ ಇಳಿದಿದ್ದಾರೆ.



ಅವರ ಪಕ್ಷದವರೇ ಆದ ಮಂತ್ರಿಯೊಬ್ಬನ ಖಾತೆಯಿಂದ ಬಂದ ಸುತ್ತೋಲೆಯನ್ನು ಹಿಂತೆಗೆಸುವಂತೆ ಮಾಡಲು ಅವರು ಹೋದದ್ದು ಮತ್ತೊಂದು ಪಕ್ಷದ ವರಿಷ್ಠರ ಮನೆ ಬಾಗಿಲಿಗೆ. ಸಮಸ್ಯೆಗೆ ಉತ್ತರ ಬೆಂಗಳೂರಿನಲ್ಲಿಯೇ ಇದೆ ಎಂದು ಇವರು ಮತ್ತೊಂದು ಪಕ್ಷದ ಮುಖಂಡನ ಮನೆ ಬಾಗಿಲಿನಲ್ಲಿ ಕಾದು ಕುಳಿತರೆ ಅದೇ ಪಕ್ಷದ ಮತ್ತೊಬ್ಬ ಶಾಸಕ ಬಸವರಾಜ್ 'ಸಮಸ್ಯೆಗೆ ಪರಿಹಾರ ದೆಹಲಿಯಲ್ಲಿದೆ' ಎಂದು ಹೇಳಿ ಕೊಡಗು ನ್ಯಾಷನಲ್ ಕೌನ್ಸಿಲ್ (ಸಿ.ಎನ್.ಸಿ.) ಯ ಹಿಂದೆ ಸುತ್ತಾಡುತ್ತಿದ್ದಾರೆ.

ಕಾಂಗ್ರೆಸ್ ಶಾಸಕ ಜೀವಿಜಯ ನವರಂತೂ 'ಪ್ರತ್ಯೇಕ ಮಲೆನಾಡು ರಾಜ್ಯ ಸ್ಥಾಪನೆಯೊಂದೇ ಸಮಸ್ಯೆಗೆ ಪರಿಹಾರ' ಎಂಬಂತೆ ಮಾತನಾಡುತ್ತಿದ್ದಾರೆ. ಇವರ ಈ ಪ್ರತ್ಯೇಕ ರಾಜ್ಯದ ಬೇಡಿಕೆಗೆ ಅವರ ಪಕ್ಷದ ಜಿಲ್ಲಾ ಸಮಿತಿಯ ಬೆಂಬಲವಿದೆಯೇ, ರಾಜ್ಯ ಸಮಿತಿಯ ಬೆಂಬಲವಿದೆಯೇ ಎಂದು ಗೊತ್ತಾಗಿಲ್ಲ.

ಕೊಡಗಿನ ಶಾಸಕರುಗಳಿಗೇ ಸಮಸ್ಯೆಯ ಸ್ಪಷ್ಟ ತಿಳುವಳಿಕೆ ಇಲ್ಲವೆಂದಾದರೆ ಇನ್ನು ಆ ಪಕ್ಷಗಳ ರಾಜ್ಯ ಮುಖಂಡರುಗಳಿಗೆ ಇಲ್ಲಿ ಸ್ಪಷ್ಟ ತಿಳುವಳಿಕೆ ಇರುತ್ತದೆಯೇ?

ಸುತ್ತೋಲೆ ಹಿಂತೆಗೆತ ಸಾಕಿತ್ತು

ಇತ್ತೀಚಿಗೆ ವಿಧಾನಸಭೆಯಲ್ಲಿ ನಡೆದ ಚರ್ಚೆಯ ಸಂದರ್ಭ ಭಾ.ಜ.ಪ. ಕಾಂಗ್ರೆಸ್, ಮತ್ತು ಜಾತ್ಯಾತೀತ ಜನತಾದಳ ಈ ಮೂರೂ ಪಕ್ಷಗಳ ಮುಖಂಡರುಗಳು 'ಕೊಡಗಿನಲ್ಲಿ ಬಾಣೆ ಹಿಡುವಳಿದಾರರು ಅಕ್ರಮವಾಗಿ ಸರ್ಕಾರದ ಜಾಗವನ್ನು ವಶ ಪಡಿಸಿಕೊಂಡವರು' ಎಂದೇ ಪರಿಗಣಿಸಿದ್ದಾರೆ. ಭಾ.ಜ.ಪ. ಮುಖಂಡ ಮತ್ತು ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಪ್ರಕಾರ ಕೊಡಗಿನ ಭೂ ಹಿಡುವಳಿದಾರರು 'ಎರಡು ಹೊತ್ತಿನ ಗಂಜಿಗಾಗಿ ಹಿಂದೆ Unauthorized cultivation (ಅನಧಿಕೃತ ಸಾಗುವಳಿ) ಮಾಡಿಕೊಂಡವರು. 'ಈ ವ್ಯಾಖ್ಯಾನದ ಆಧಾರದಲ್ಲಿಯೇ 'ಸುತ್ತೋಲೆಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಶಾಶ್ವತ ಪರಿಹಾರಕ್ಕಾಗಿ ಸಮಿತಿಯೊಂದನ್ನು ರಚಿಸುವುದು' ಎಂಬ ನಿರ್ಣಯವನ್ನು ಮುಖ್ಯಮಂತ್ರಿ ಕುಮಾರಸ್ವಾಮಿಯವರು ಸದನದಲ್ಲಿ ಮಂಡಿಸಿದರು. ಸುತ್ತೋಲೆಗಳನ್ನು ಹಿಂತೆಗೆದುಕೊಂಡರೆ ಸಾಕಿತ್ತು. ಸಮಿತಿ ರಚನೆ ಅಗತ್ಯವಿರಲಿಲ್ಲ. ಸಮಿತಿ ರಚನೆ ಸಮಸ್ಯೆಯನ್ನು ಜಟಿಲಗೊಳಿಸುವ ತಂತ್ರವಾಗಿತ್ತು. 'ಈ ಸಮಿತಿ ಅಗತ್ಯವಿಲ್ಲ' ಎಂದು ಕೊಡಗಿನ ಶಾಸಕರುಗಳಾದ ಕೆ.ಜಿ.ಬೋಪಯ್ಯ, ಜೀವಿಜಯ, ಬಸವರಾಜ್ ಪಟ್ಟುಹಿಡಿಯಬೇಕಿತ್ತು. ಸಮಿತಿ ನಿರ್ಣಯದ ವಿರುದ್ಧ ಮತ ಚಲಾಯಿಸಬೇಕಿತ್ತು. 'ಕೊಡಗಿನಲ್ಲಿ ಬಾಣೆ ಹಿಡುವಳಿದಾರರು ಅಕ್ರಮವಾಗಿ ಸರ್ಕಾರದ ಜಾಗವನ್ನು ವಶಪಡಿಸಿಕೊಂಡವರಲ್ಲ, ಅವರು ಅವರ ನ್ಯಾಯಬದ್ಧ ಒಡೆಯರು' ಎಂದು ವಾದಿಸಬೇಕಿತ್ತು. ಆದರೆ ಈ ಶಾಸಕರ್‍ಯಾರೂ ಇದನ್ನು ಮಾಡಲಿಲ್ಲ. ವಿಧಾನಸಭೆಯಲ್ಲಿ ನಮ್ಮ ಶಾಸಕರುಗಳ ವರ್ತನೆ ಅವರ ಅಸ್ಪಷ್ಟ ತಿಳುವಳಿಕೆಗೆ ಸಾಕ್ಷಿಯಾಗಿದೆ. ಈ ಶಾಸಕರುಗಳ ,ಅವರ ಪಕ್ಷದ ಮುಖಂಡರುಗಳ ತಿಳುವಳಿಕೆಯ ಕೊರತೆಯನ್ನು ಜಾಮ್ದಾರ್‌ರಂತಹ ಅಧಿಕಾರಿಗಳು ಉಪಯೋಗಿಸಿಕೊಂಡರೆ ಅದಕ್ಕೆ ಕಾರಣ ಈ ಶಾಸಕರೇ ಆಗುತ್ತಾರಲ್ಲವೇ?

ತಮ್ಮ, ತಮ್ಮ ಪಕ್ಷದ ಮುಖಂಡರುಗಳ ಈ ದೌರ್ಬಲ್ಯವನ್ನು ಮರೆಮಾಚಲು ಈ ಶಾಸಕರುಗಳು ಕೊಡಗಿಗೆ ಬಂದಾಗ ವೀರಾವೇಶದ ಮಾತು ಮಾತನಾಡುತ್ತಾರೆ. ಕೊಡಗು ಕರ್ನಾಟಕಕ್ಕೆ ಸೇರಿದ್ದೇ ತಪ್ಪು ಎನ್ನುತ್ತಾರೆ. ರಾಜ್ಯೋತ್ಸವವನ್ನು ಬಹಿಷ್ಕರಿಸುತ್ತಾರೆ, ಜನರನ್ನು ದಾರಿ ತಪ್ಪಿಸಲು ಇನ್ನೂ ಹಲವು ರೀತಿಯ ನಾಟಕಗಳನ್ನಾಡುತ್ತಾರೆ.

ನ್ಯಾಯಬದ್ಧ ಒಡೆಯರು

ಇಂದು ಕೊಡಗಿನ ಬಾಣೆ ಹಿಡುವಳಿದಾರರು ಅದರ ನ್ಯಾಯ ಬದ್ಧ ಒಡೆಯರೆಂದೂ ಅದರ ಒಡೆತನ ಅವರಿಗೆ ಸೇರಿದ್ದೆಂದೂ ಏಕಕಂಠದಿಂದ ಅಸಂಧಿಗ್ದವಾಗಿ ಘೋಷಿಸಿರುವ ಏಕಮಾತ್ರ ರಾಜಕೀಯ ಪಕ್ಷ ಮತ್ತು ರಾಜ್ಯ ಮುಖಂಡತ್ವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಆಗಿದೆ ಎಂದೂ ಈ ಸಂದರ್ಭದಲ್ಲಿ ಕೊಡಗಿನ ಜನರು ಗಮನಿಸಬೇಕು.

ಕೊಡಗಿನ ಸಮಸ್ಯೆಗಳು ಪರಿಹಾರವಾಗದಿರಲು ಕಾರಣ ಕೊಡಗು ಕರ್ನಾಟಕಕ್ಕೆ ಸೇರಿದ್ದಲ್ಲ. ಬದಲಾಗಿ ಭಾ.ಜ.ಪ. ಕಾಂಗ್ರೆಸ್, ಜಾತ್ಯಾತೀತ ಜನತಾದಳದಂತಹ ಪಕ್ಷಗಳು ಅನುಸರಿಸುತ್ತಿರುವ ನೀತಿಗಳು, ಈ ಪಕ್ಷಗಳು ತಮ್ಮನ್ನು ರಕ್ಷಿಸುತ್ತದೆ ಎಂಬ ಭ್ರಮೆ ಆ ಪಕ್ಷಗಳ ಹಿಂದೆ ಕೊಡಗಿನ ಜನತೆ ಇಂದು ಅಣಿಗೊಂಡಿರುವುದೇ ಅವರ ಸಮಸ್ಯೆಗಳು ಪರಿಹಾರವಾಗದಿರಲು ಕಾರಣ, ಎಂದು ಅವರು ಇಂದಿನ ಭ್ರಮೆ ಕಳಚಿ ಅದರಿಂದ ಹೊರಬರುವರೋ ಅಂದು ಮಾತ್ರವೇ ಬಾಣೆ ಹಕ್ಕಿನ ಸಮಸ್ಯೆಯನ್ನೊಳಗೊಂಡು ಅವರ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ.

■ ಡಾ. ಇ.ರಾ.ದುರ್ಗಾಪ್ರಸಾದ್

ಸೌಹಾರ್ದ ಪರಂಪರೆಯ ವೈವಿಧ್ಯತೆಗಳು....

ಪುಟ 9 ರಿಂದ

ರಾಣಿ ಚೆನ್ನಮ್ಮಾಜಿ ಕಟ್ಟಿಸಿದಳೆಂದು ಪ್ರತೀತಿ ಇದೆ. ಈ ಸ್ವಾಮಿಯ ಹೆಸರು ಸೈಯದ್ ಮುರ್ತೂಜಾ ಶಾಹು ಖಾದ್ರಿ ಸಜ್ಜಾದೇ ಎಂದಿದೆ. ಈತನ ಬಿರುದು ಶ್ರೀ ದತ್ತಾತ್ರೆಯ ಸ್ವಾಮಿ, ಬಾಬಾ ಬುಡನ್ ಸ್ವಾಮಿ ಜಗದ್ಗುರು ಎಂದೂ ಇದೆ. ಇಲ್ಲಿ ಎರಡೂ ಜನಾಂಗಗಳು ಈವರೆಗೆ ಯಾವುದೇ ಗುಮಾನಿ, ಗುಲ್ಲು, ಧರ್ಮಾಂಧತೆಗಳಿಲ್ಲದೆ ಸಮಾನ ಗೌರವಾದರಗಳಿಂದ ಪೂಜೆ, ಪ್ರಾರ್ಥನೆ ಸಲ್ಲಿಸುತ್ತ ಬಂದಿದ್ದಾರೆ. ಇತ್ತೀಚಿಗೆ ಹಿಂದೂ ಕೋಮುವಾದಿಗಳು ಬಾಬಾಬುಡನ್‌ಗಿರಿಯ ದರ್ಗಾ ದತ್ತಪೀಠದಲ್ಲಿ ಮತೀಯ ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಮತ್ತದೇ ಇತಿಹಾಸದ ಧರ್ಮಾಂಧತೆಯ ರಕ್ತಸಿಕ್ತ ಕರಾಳ ಕೈಗಳು ವರ್ತಮಾನದಲ್ಲೂ ತಲ್ಲಣ ಹುಟ್ಟಿಸುವ ಕುತಂತ್ರ ನಡೆಸುತ್ತಿವೆ. ಯಾವತ್ತೂ ಉನ್ನತ ದಾರ್ಶನಿಕ ಧಾರೆಯಲ್ಲಿ ನೆಲೆನಿಂತ ಕನ್ನಡಿಗರು ಮಾತ್ರ ಇಂಥ ಧರ್ಮಾಂಧರ ಹುಚ್ಚು ಆವೇಶಕ್ಕೆ ಕಿವಿಕೊಡಲಾರರು ಎಂಬುದೇ ಸಮಾಧಾನದ ಸಂಗತಿ.

ಬದುಕು ದೊಡ್ಡದು

ಕರ್ನಾಟಕದುದ್ದಕ್ಕೂ ನೂರಾರು ದರ್ಗಾ, ದೇವಾಲಯ, ಮಠಗಳು ಮನೆತನಗಳು, ಭಾವೈಕ್ಯತೆಯ ಫಲಕುಗಳನ್ನು ಹೊತ್ತುಕೊಂಡು ನಿಂತಿವೆ. ಇಲ್ಲಿ ನಡೆಯುವ ಜಾತ್ರೆ, ಉತ್ಸವ, ಹಬ್ಬ, ಸಂತೆಗಳಲ್ಲಿ ಎಲ್ಲ ಜಾತಿಯ ಜನಾಂಗದವರಿಗೆ ಒಂದೊಂದು ಕೆಲಸಗಳು "ಬಾಜದಂತೆ" ಉಂಬಳಿಯಾಗಿ ಹಂಚಲ್ಪಟ್ಟಿವೆ. ಶಾಲು ಹೊದಿಸುವ, ಸಕ್ಕರೆ ಎಡೆ ಮಾಡುವ, ಗಂಧ ಹೂ ಅರ್ಪಿಸುವ, ಮೊಹರಮ್‌ದ ಪೀರ್‌ಗಳನ್ನು ಹೊರುವ ಹೀಗೆ ಲೆಕ್ಕವಿಲ್ಲದಷ್ಟು ಬದುಕಿನ ಭಿತ್ತಿಗಳು ಪರಸ್ಪರ ಕೊಡುಕೊಳ್ಳುವ ಸಂಕೇತವಾಗಿ ಮೈದಾಳಿ ನಿಂತಿವೆ. ಇವುಗಳ ಹಿಂದೆ ಜಾತಿ, ಮತ, ಪಂಥಗಳನ್ನು ಮೀರಿಯೂ ಬದುಕು ದೊಡ್ಡದು ಮತ್ತು ಅದು ಶುದ್ಧ ಪ್ರೀತಿಗೆ ಮಾತ್ರ ದಕ್ಕುವಂಥದು ಎಂಬ ತತ್ವ ಇದೆ. ಈ ರೀತಿಯ ಕ್ರಿಯಾಚರಣೆ ಮತ್ತು ನಂಬಿಕೆಯ ನೆಲೆಗಳ ಹಿಂದೆ ಹಲವು ವೈರುಧ್ಯ, ಭಿನ್ನತೆಗಳ ನಡುವೆಯೂ ಬದುಕನ್ನು ನಿರಪೇಕ್ಷೆಯ ಸ್ತರದಲ್ಲಿ ಕಟ್ಟಿಕೊಳ್ಳುವ ಮಹತ್ವಾಕಾಂಕ್ಷೆ ಇದೆ. ಮಾವನಕೇಂದ್ರಿತ ಈ ಮಹತ್ವಾಕಾಂಕ್ಷೆಯನ್ನು ಇನ್ನಷ್ಟು ವಿಸ್ತರಿಸಿ ಸೃಷ್ಟಿಯ ಸಚರಾಚರ ಜೀವಸಂಕುಲ ಪರವಾಗಿ ಹಬ್ಬಿಸಿದವರು ಸಂತರು, ಶರಣರು, ಸೂಫಿಗಳು.

ಅಖಂಡ ಜೀವಪರ ತುಡಿತವನ್ನು ಮೈಗೂಡಿಸಿಕೊಂಡಿರುವ ಈ ಸಂತ-ಶರಣ-ಸೂಫಿಗಳನ್ನು ಜನತೆ ಇವತ್ತಿಗೂ ಅನುಸರಿಸಿಕೊಂಡು ಬರುತ್ತಿದೆ. ○

.....ದಹನಕುಂಡವಾಗಿಸಿದವರು

ಪುಟ 7 ರಿಂದ

ರಣರಂಗಕ್ಕೆ ಇಳಿಸಿದ. ಕೊಲೆ ಸುಲಿಗೆಗಳಿಗೆ ಸಿದ್ಧವಾದ ಒಂದು ಜನಜಂಗುಳಿಯನ್ನು ಕಲೆಹಾಕಲಾಯಿತು. ನರೋದ ಗಾಂವ್ ಮತ್ತು ನರೋದಾ ಪತಿಯಾದ ಗಲ್ಲಿ-ಗಲ್ಲಿಗಳಲ್ಲಿ ಇವರು ಸಂಚರಿಸಲಾರಂಭಿಸಿದರು. ಅವರಿಗೆ ಆ ದಿನವಿಡೀ ಅವರೊಡನೆ ಸಂಚರಿಸಿದ ಸ್ಥಳೀಯ ಶಾಸಕಿ ಮಾಯಾಬೇನ್ ಕೊಡ್ನಾನಿಯ ಸತತ ಕುಮ್ಮಕ್ಕು. ಜತೆಗೆ ಆಕೆಯ ನಂಬಿಗಸ್ತ ಸಹಾಯಕ ಬಿಪಿನ್ ಪಾಂಚಾಲ್ ಕೂಡಾ ತನ್ನ ಶಸ್ತ್ರ ಸಜ್ಜಿತ ಅನುಯಾಯಿಗಳೊಂದಿಗೆ ಹಾಜರಿದ್ದ. ಆ ದಿನವಿಡೀ ಭಜರಂಗಿ ವಿಹೆಚ್‌ಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಜಯದೀಪ್ ಪಟೇಲ್ ರೊಂದಿಗೆ ದೂರವಾಣಿ ಸಂಪರ್ಕದಲ್ಲಿದ್ದ. ಈತ ಈ ಕಾರ್ಯಾಚರಣೆಯ ಯೋಜನೆಯಲ್ಲೂ ಪಾಲ್ಗೊಂಡಿದ್ದನೇ ಎಂಬುದನ್ನು ಭಜರಂಗಿ ತಿಳಿಸುವುದಿಲ್ಲ, ಆದರೆ ಸಮಯ-ಸಮಯಕ್ಕೆ ಆತನಿಗೆ 'ಸ್ಕೋರು' ತಿಳಿಸುತ್ತಿದ್ದೆ ಅಂದರೆ ಸತ್ತ ಮುಸ್ಲಿಮರ ಸಂಖ್ಯೆ ಎಷ್ಟು ಎಂದು ಲೆಕ್ಕ ನೀಡುತ್ತಿದ್ದೆ ಎಂದು ಹೇಳುತ್ತಾನೆ. 11 ಬಾರಿ ಪಟೇಲ್‌ಗೆ ಫೋನು ಮಾಡಿದ್ದನಂತೆ. ಗೃಹ ರಾಜ್ಯ ಮಂತ್ರಿ ಗೋರ್ಧನ್ ರುಪಾಡಿಯಾರಿಗೂ ಇದನ್ನು ತಿಳಿಸುತ್ತಿದ್ದನಂತೆ. ಈ ಹತ್ಯಾಕಾಂಡದಿಂದ ಬದುಕುಳಿದ ಹಲವು ಮುಸ್ಲಿಮರು ಈ ಜಯದೀಪ್ ಪಟೇಲ್ ನರೋದ ಹಂತಕರ ಮುಖಂಡ ಎಂದು ಗುರುತಿಸಿದ್ದಾರೆ.

ದಿನದ ಕೊನೆಗೆ ಈ 'ಸ್ಕೋರು' 200 ದಾಟಿತ್ತಂತೆ. ರಾಜ್ಯ ಸರಕಾರದ ಅಧಿಕೃತ ಸಂಖ್ಯೆ 105 ಎಂಬುದನ್ನು ಗಮನಿಸಿ. ನರೋದ್ ಪತಿಯಾ ಹತ್ಯಾಕಾಂಡದ ನಂತರ ಸ್ವತಃ ಮೋದಿ ಅಲ್ಲಿಗೆ ಬಂದು ಇದರಲ್ಲಿ ಮುಖ್ಯ ಪಾತ್ರ ವಹಿಸಿದ ಚಹಾರಾ ಬುಡಕಟ್ಟು ಜನಗಳನ್ನು ಪ್ರಶಂಸಿಸಿದರಂತೆ.

* * *

'ಕತ್ತರಿಸಿ, ಕತ್ತರಿಸಿ ಹಾಕಿ ಸುಟ್ಟೆವು' ಎಂದ ಮದನ್ ಚವಲ್

ಮೇಘಾನಿನಗರದ ಗುಲ್ಬಾರ್ಗ್ ಹೌಸಿಂಗ್ ಸೊಸೈಟಿ ಸಾಮೂಹಿಕ ದಹನಕುಂಡವಾದ ಅಹಮದಾಬಾದಿನ ಇನ್ನೊಂದು ಸ್ಥಳ. ಇದು ಮುಸ್ಲಿಮರು ವಾಸವಾಗಿದ್ದ ಕಟ್ಟಡ. ತೆಹಲ್ಕಾ ಇದರಲ್ಲಿ ಭಾಗವಹಿಸಿದ ಮೂವರನ್ನು ಭೇಟಿಯಾಯಿತು- ಮಂಗೀಲಾಲ್ ಜೈನ್, ಪ್ರಹ್ಲಾದ್ ರಾಜು ಮತ್ತು ಮದನ್ ಚವಲ್. ಈ ಮೂವರ ಮೇಲೂ ಕೇಸುಗಳಿವೆ. ಆದರೆ ಇವರಿಗೆ ನೇತೃತ್ವ ನೀಡಿದ ವಿಹೆಚ್‌ಪಿ ಮುಖಂಡರಾದ ಅತುಲ್ ವೈದ್ ಮತ್ತು ಭರತ್ ತೇಲಿ ಹೆಸರುಗಳು ಎಫ್‌ಐಆರ್‌ನಲ್ಲಿ ಇದ್ದರೂ ನಂತರ ಪೋಲೀಸರು ಚಾರ್ಜ್‌ಶೀಟ್ ಹಾಕಿದಾಗ ಅವರ ಹೆಸರುಗಳು ಇರಲಿಲ್ಲ. ತಾನು ಮತ್ತು ತನ್ನ ಜತೆಗಾರರು ಹೇಗೆ ಮಾಜಿ ಕಾಂಗ್ರೆಸ್ ಸಂಸತ್ ಸದಸ್ಯ ಎಹಸಾನ್ ಜಾಫ್ರಿಯವರನ್ನು ಮೊದಲು ಕೊಚ್ಚಿ ಹಾಕಿ ನಂತರ ಆತನ ಅಂಗಗಳನ್ನು ಒಂದೊಂದಾಗಿ ಕತ್ತರಿಸಿ ಅವನ್ನು ರಾಶಿ ಹಾಕಿ ಬೆಂಕಿ ಹಚ್ಚಿದೆವು ಎಂದು ಚವಲ್ ರಸವತ್ತಾಗಿ ವರ್ಣಿಸುತ್ತಾನೆ.



ಈ ದಹನಕುಂಡದಲ್ಲಿ ಸತ್ತವರ ಸಂಖ್ಯೆ ಅಧಿಕೃತವಾಗಿ 39. ಆದರೆ ನಿಜವಾಗಿ ಸತ್ತವರ ಸಂಖ್ಯೆ ಇನ್ನೂ ಹೆಚ್ಚಿದೆಯೆನ್ನುತ್ತಾರೆ ಈ ಮೂರು ಜನ. ಈ ಕಟ್ಟಡದಲ್ಲಿ ಆಗ ಅಲ್ಲಿಯ ನಿವಾಸಿಗಳಲ್ಲದೆ ಹತ್ತಿರದ ಕೊಳೆಗೇರಿಗಳಲ್ಲಿ ವಾಸಿಸುವ ಬಡ ಮುಸ್ಲಿಮರೂ ಹಲ್ಲೆಗಳಿಂದ ಇಲ್ಲಾದರೂ ರಕ್ಷಣೆ ಸಿಗಬಹುದು ಎಂದು ಆಶ್ರಯ ಪಡೆದಿದ್ದರು. ಅವರೂ ಬಲಿಯಾದರು.

* * *

'600 ರನ್ನುಗಳ ಟೆಸ್ಟ್ ಪಂದ್ಯವಾಡಿ' ಎಂದ ರಾಜೇಂದ್ರ ವ್ಯಾಸ್

ಕಲುಪುರ್ ಮತ್ತು ದರಿಯಾಪುರ್ ಅಹಮದಾಬಾದಿನ ಎರಡು ಅತಿ ಸೂಕ್ಷ್ಮ ಪ್ರದೇಶಗಳು. ಇಲ್ಲಿ ಮುಸ್ಲಿಮರ ಮೇಲೆ ಆಕ್ರಮಣಗಳನ್ನು ಯೋಜಿಸಿದವರು ವಿಹೆಚ್‌ಪಿ ಮುಖಂಡರಾದ ರಾಜೇಂದ್ರ ವ್ಯಾಸ್ ಮತ್ತು ರಮೇಶ್ ದವೆ. ವ್ಯಾಸ್ ಸಾಬರಮತಿ ಎಕ್ಸ್‌ಪ್ರೆಸ್‌ನ ಉಸ್ತುವಾರಿಯನ್ನೂ ಹೊತ್ತಿದ್ದ ವ್ಯಕ್ತಿ. 'ಮುಸ್ಲಿಮರು ಒಂದು ದಿನದ ಪಂದ್ಯವಾಡಿ ನಮ್ಮ ಮುಂದೆ 60 ರನ್ನುಗಳ ಗುರಿಯಿಟ್ಟಿದ್ದಾರೆ. ನಾವು ಈಗ ಟೆಸ್ಟ್ ಪಂದ್ಯವಾಡಿ 600 ರನ್ನುಗಳಾಗುವ ವರೆಗೂ ನಿಲ್ಲಬಾರದು' ಎಂದು ತಮ್ಮ ಕಾರ್ಯಕರ್ತರನ್ನು ಹುರಿದುಂಬಿಸಿದರಂತೆ.

ಕಲುಪುರದಲ್ಲಿ ತಾನು ಐವರು ಮುಸ್ಲಿಮರನ್ನು ಗುಂಡಿಟ್ಟು ಕೊಂದೆ, ಒಂಭತ್ತು ಮುಸ್ಲಿಂ ಮನೆಗಳನ್ನು ಸುಟ್ಟು ಹಾಕಿದೆ ಎಂದು ತೆಹಲ್ಕ ಕ್ಯಾಮರಾದ ಎದುರು ವ್ಯಾಸ್ ಹೇಳಿಕೊಂಡಿದ್ದಾನೆ.

ಅತ್ತ ದರಿಯಾಪುರ್‌ನಲ್ಲಿ ದವೆ ತಾನು ಮತ್ತು ತನ್ನ ಜತೆಯವರು ತಾವೆಲ್ಲ 20 ವರ್ಷಗಳಿಂದ ನೋಡುತ್ತಿದ್ದ ಮುಸ್ಲಿಮರ ಮೇಲೆ ಗುರಿಯಿಟ್ಟೆವು, 'ಈ ಬಾರಿ ಆರಿಸಿ ಆರಿಸಿ ಹೊಡೆದೆವು' ಎನ್ನುತ್ತಾನೆ.

* * *

'ಹೊರಗಿನಿಂದ ಬಾಗಿಲು ಹಾಕಿ, ಒಳಗಿನಿಂದ ಸುಟ್ಟು ಹಾಕಿ? ಎಂದ' ಅನಿಲ್ ಪಟೇಲ್

ಸಬರ್ಕಾಂತ ಜಿಲ್ಲೆಯಲ್ಲಿ ಮುಸ್ಲಿಮರು ಗರಿಷ್ಟ ಆರ್ಥಿಕ ನಷ್ಟ ಅನುಭವಿಸಿದರು. ವಿಹೆಚ್‌ಪಿ ವಿಭಾಗದ ಮುಖ್ಯಸ್ಥ ಅನಿಲ್ ಪಟೇಲ್ ಈ ಧಾಳಿಗಳನ್ನು ಯೋಜಿಸಿದವರಲ್ಲಿ ಪ್ರಮುಖ ವ್ಯಕ್ತಿ. ಕನಿಷ್ಟ 500 ಮುಸ್ಲಿಮರನ್ನು ಕೊಲ್ಲದಿದ್ದರೆ ತಾನು ತನ್ನ ವಿಹೆಚ್‌ಪಿ ಹುದ್ದೆಯನ್ನು ತ್ಯಜಿಸುವುದಾಗಿ ಆತ ಪಣ ತೊಟ್ಟಿದ್ದನಂತೆ. 'ಹೊರಗಿನಿಂದ ಬಾಗಿಲು ಹಾಕಿ, ಒಳಗಿನಿಂದ ಮುಸ್ಲಿಮರನ್ನು ಸುಟ್ಟು ಹಾಕಿ' ಎಂಬುದು ತಮ್ಮ ಯುದ್ಧಘೋಷವಾಗಿತ್ತು ಎನ್ನುತ್ತಾನೆ ಈತ ತೆಹಲ್ಕಾದ ಎದುರು. ಮುಸ್ಲಿಮರನ್ನು ಕೊಲ್ಲಿ, ಅವರ ಆಸ್ತಿಗಳನ್ನು ಸುಟ್ಟು ಹಾಕಿ ಎಂದು ತಾನು ಆರೆಸ್ಸೆಸ್ ಮತ್ತು ವಿಹೆಚ್‌ಪಿ ಕಾರ್ಯಕರ್ತರಿಗೆ ಬಹಿರಂಗ ಕರೆ ನೀಡಿದುದಾಗಿಯೂ ಸಬರ್ಕಾಂತ ಜಿಲ್ಲೆಯಲ್ಲಿ ಮುಸ್ಲಿಂ ಮನೆಗಳು ಅಂಗಡಿಗಳು ಸುಡದೇ ಇದ್ದ ಒಂದಾದರೂ ಹಳ್ಳಿ ಉಳಿಯಲಿಲ್ಲ ಎಂದು ಆತ ಹೇಳಿಕೊಂಡಿದ್ದಾನೆ.



ಈ ಹತ್ಯಾಕಾಂಡದ ವೇಳೆ ಪ್ರವೀಣ್ ತೊಗಾಡಿಯಾ ಜಿಲ್ಲಾ ಮಟ್ಟದಲ್ಲಿ ಇವೆಲ್ಲದರ ಸಂಯೋಜನೆ ಮಾಡುತ್ತಿದ್ದರು, ಮುಖ್ಯ ವಿಹೆಚ್‌ಪಿ ಜನಗಳ ಮೇಲೆ ಕೇಸುಗಳಾಗದಂತೆ ಕೆಲಸ ಮಾಡಿ ಎಂದು ತನಗೆ ಹೇಳಿದ್ದರೆಂದು ಪಟೇಲ್ ಹೇಳುತ್ತಾನೆ.

ಸಬರ್ಕಾಂತದಲ್ಲಿ ಮುಸ್ಲಿಮರ 1545 ಮನೆಗಳು, 1237 ಮಳಿಗೆಗಳು ಮತ್ತು 549 ಅಂಗಡಿಗಳು ಭಸ್ಮವಾದವು.

* * *

ಭಯೋತ್ಪಾದನಾ ಸಂಘಟನೆಗಳಾಗಿ ಬಿಟ್ಟವು

2002 ರಲ್ಲಿ ಗುಜರಾತಿನ ಹತ್ಯಾಕಾಂಡದಲ್ಲಿ ಪ್ರಮುಖ ಪಾತ್ರ ವಹಿಸಿದವರು ವಿಹೆಚ್‌ಪಿ ಮತ್ತು ಭಜರಂಗ ದಳ. ಮುಖ್ಯವಾಗಿ ಇವೆರಡೂ ಸೇರಿ ಈ ನರಮೇಧದ ಯೋಜನೆ ತಯಾರಿಸಿದ್ದವು ಎಂದು ತೆಹಲ್ಕಾ ತನಿಖೆಯಿಂದ ಕಂಡು ಬಂದಿದೆ. ಈ ಯೋಜನೆಯನ್ನು 'ಪರಿಣಾಮಕಾರಿಯಾಗಿ' ಕಾರ್ಯಗತ ಗೊಳಿಸಲು ಅವರಿಗೆ ಖಡ್ಗಗಳು, ಚಾಕುಗಳಿಗಿಂತ ಮೇಲ್ಮಟ್ಟದ, ಜನಗಳನ್ನು ದೊಡ್ಡ ಸಂಖ್ಯೆಯಲ್ಲಿ ಸಂಹಾರ ಮಾಡುವ ಅಸ್ತ್ರಗಳು ಬೇಕಾಗಿತ್ತು. ಈ ಎರಡು ಪಡೆಗಳು ಗೋಧ್ರಾ ಘಟನೆಯ ನಂತರ ಬಾಂಬುಗಳು, ರಾಕೆಟ್ ಲಾಂಚರುಗಳು ಮತ್ತಿತರ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಮತ್ತು ಹಂಚುವ ಭಯೋತ್ಪಾದಕ ಸಂಘಟನೆಗಳಾಗಿ ಪರಿವರ್ತನೆಗೊಂಡಿದ್ದವು ಎಂದು ಕಂಡು ಬಂತು.

* * *

ಈ ಹತ್ಯಾಕಾಂಡಗಳ ವಿಚಾರಣೆ ನಡೆಸುತ್ತಿರುವ ಆಯೋಗದ ಒಬ್ಬ ನ್ಯಾಯಾಧೀಶ ನ್ಯಾಯಮೂರ್ತಿ ಶಹಾ 'ನಮ್ಮ ಮನುಷ್ಯ' ಎಂದು ಆ ಆಯೋಗದ ಮುಂದೆ ಸರಕಾರೀ ವಕೀಲರಾಗಿದ್ದ ಅರವಿಂದ ಪಂಡ್ಯ ಹೇಳಿದರು. ಅದೇ ಆಯೋಗದ ಇನ್ನೊಬ್ಬ ನ್ಯಾಯಾಧೀಶ, ನ್ಯಾಯಮೂರ್ತಿ ನಾನಾವತಿ ತನಗೆ ತೆಹಲ್ಕಾದ ಈ ಕಾರ್ಯಕ್ರಮವನ್ನು 'ಆಜ್ ತಕ್' ಚಾನಲ್ ನಲ್ಲಿ ನೋಡಲಾಗಲಿಲ್ಲ, ಆ ದಿನ ಅದೇಕೋ ಅದಿರಲಿಲ್ಲ ಎಂದರು. ಆಗ ಕರ್ನಾಟಕದಲ್ಲಿ ಜೆಡಿ(ಎಸ್)- ಬಿಜೆಪಿ ಸರಕಾರ ಅಧಿಕಾರದಲ್ಲಿ ಇರಲಿಲ್ಲ. ಆದ್ದರಿಂದ ನಮ್ಮ ಮಾಜಿ ಮುಖ್ಯ ಮಂತ್ರಿ ಹೆಚ್. ಡಿ. ಕುಮಾರಸ್ವಾಮಿಯವರಿಗೆ ಈ ಸಮಸ್ಯೆ ಇದ್ದಿರಲಿಲ್ಲ. ಆದರೂ ಇದನ್ನೆಲ್ಲ ಅವರು ನೋಡಿದರೋ ಗೊತ್ತಿಲ್ಲ. ಇದೆಲ್ಲ ಕಾಂಗ್ರೆಸ್ಸಿನ ಕೆಲಸ ಎಂದರು. ಅತ್ತ ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರಕಾರ ತೆಪ್ಪಗಿದೆ. ಅದೇನೇ ಇರಲಿ, ಕುಮಾರಸ್ವಾಮಿಯವರಿಗೆ ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎನ್ನುತ್ತಾ ಮಂಗಳೂರಿನಲ್ಲಿ ಅದರ ಜ್ಯಾರಿಗೆ ಪ್ರಯತ್ನಿಸಿದ 'ಸಹಯೋಗಿ'ಗಳೊಂದಿಗೆ ಕೆಲಸ ಮಾಡಿದ ಅನುಭವವಿದೆ. ಇತ್ತೀಚೆಗಷ್ಟೆ ತಮಿಳುನಾಡಿನ ಮುಖ್ಯ ಮಂತ್ರಿಗಳ ಹೇಳಿಕೆ ಸಂಬಂಧ ಕರ್ನಾಟಕದಲ್ಲಿ ಬಸ್ ಸುಟ್ಟು ಇಬ್ಬರನ್ನು ಬಲಿ ತೆಗೆದುಕೊಂಡವರ ಕೈಗೆ ಅಧಿಕಾರ ಕೊಡಬಹುದೆ ಎಂದು ಪ್ರಶ್ನಿಸಿದ್ದವರು ಇವರೇ ಅಲ್ಲವೇ 'ಈಗ ಅವರ ಕೈಗೇ ಅಧಿಕಾರ ಕೊಡುತ್ತಿದ್ದಾರೆ. ಕರ್ನಾಟಕದ ಜನ ಜಾಗೃತರಾಗಿರಬೇಕು.'

ಸಮಸ್ಯೆಗಳ ಮೂಟೆಹೊತ್ತ ರೈತರು......

ಪುಟ 5 ರಿಂದ

ಉತ್ಪಾದನೆ, ಉತ್ಪಾದಕತೆ ಹೆಚ್ಚಿಸಬೇಕೆಂದು ಹೇಳುತ್ತಾರೆ. ಆದರೆ ಕೃಷಿಯಲ್ಲಿನ ಹೂಡಿಕೆ ದಿನೇ ದಿನೇ ಹೆಚ್ಚುತ್ತಿದೆ. ಬೆಳೆದ ಫಸಲಿಗೆ ಲಾಭದಾಯಕ ಬೆಲೆ ಸಿಗದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ತಲೆದೋರಿದೆ. ದೇಶದಲ್ಲಿ ಇದುವರೆಗೂ ಸರಿಸುಮಾರು 3ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರು. ಹೊಸ ಆರ್ಥಿಕ ಮತ್ತು ಜಾಗತೀಕರಣ ನೀತಿಗಳಿಂದಾಗಿ ರೈತರು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗದೆ ಕೂಲಿನಾಲಿ ಮಾಡಿ ಜೀವನ ಸಾಗಿಸಲು ನಗರಗಳತ್ತ ವಲಸೆ ಹೋಗುತ್ತಿದ್ದಾರೆ ಎಂದರು.

ರಾಜ್ಯದಲ್ಲಿನ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜಾತ್ಯಾತೀತ ಜನತಾದಳಗಳು ಕ್ಷಣಕ್ಕೊಂದು ಹೇಳಿಕೆಗಳನ್ನು ನೀಡುತ್ತಾ ಜನರಲ್ಲಿ ಗೊಂದಲ ಉಂಟು ಮಾಡುತ್ತಿವೆ ಎಂದು ಬಹಿರಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಬಾಗೇಪಲ್ಲಿ ಸಿಪಿಎಂ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಟೀಕಿಸಿದರು. ನಾನು ವಚನ ಭ್ರಷ್ಟ ಎಂದು ಕುಮಾರ ಸ್ವಾಮಿ ಹೇಳಿದರೆ, ಇನ್ನೆಂದೂ ಜೆಡಿಎಸ್ ಜೊತೆ ಸೇರಿ ಸರ್ಕಾರ ರಚಿಸುವುದಿಲ್ಲ ಎಂದು ಯಡಿಯೂರಪ್ಪ ಹೇಳಿದರು. ಹೇಳಿದ ಅರ್ಧ ಗಂಟೆಯಲ್ಲೇ ಧರ್ಮಯುದ್ಧ ಯಾತ್ರೆ ಮೊಟಕುಗೊಳಿಸಿ ಸರ್ಕಾರ ರಚಿಸಲು ತುಮಕೂರಿನಿಂದ ಬೆಂಗಳೂರಿಗೆ ಆಗಮಿಸಿದರು. ಇವರನ್ನು ಏನೆನ್ನಬೇಕು. ಇವರನ್ನು ಯಾವ ಆಸ್ಪತ್ರೆಗೆ ಸೇರಿಸಬೇಕೆಂದು ಪ್ರಶ್ನಿಸಿದರು.

ಮಾಜಿ ಪ್ರಧಾನಿ ದೇವೆಗೌಡರು ಕರ್ನಾಟಕವನ್ನು ತಮ್ಮ ಖಾಸಗಿ ಆಸ್ತಿ ಎಂದು ಅಂದುಕೊಂಡಿದ್ದಾರೆ. ಒಮ್ಮೆ ಸರ್ಕಾರ ರಚಿಸಲು ಬೆಂಬಲ ಇಲ್ಲ ಎಂದು ಪತ್ರ ನೀಡುತ್ತಾರೆ. ಮಗದೊಮ್ಮೆ ಬೆಂಬಲ ವ್ಯಕ್ತಪಡಿಸಿ ಪತ್ರ ನೀಡುತ್ತಾರೆ. ಇವರಿಗೆ ಇಷ್ಟಬಂದಂತೆ ನಡೆದುಕೊಳ್ಳುತ್ತಾರೆ ಎಂದು ಕಿಡಿ ಕಾರಿದರು.

ಐದು ವರ್ಷ ಆಡಳಿತ ನಡೆಸಿ ಎಂದು ಕರ್ನಾಟಕದ ಜನತೆ ನೀಡಿದ ಜನಾದೇಶಕ್ಕೆ ಕಿಂಚಿತ್ತೂ ಮರ್ಯಾದೆ ನೀಡದ ಇವರಿಗೆ ಜನತೆ ಸರಿಯಾದ ಬುದ್ಧಕಲಿಸಬೇಕೆಂದು ಕರೆ ನೀಡಿದರು.

ಈ ಮೂರೂ ಪಕ್ಷಗಳಿಗೆ ಮಾನ ಮರ್ಯಾದೆ ನೈತಿಕತೆ ಇಲ್ಲ, ಅವರನ್ನು ನೋಡಿದರೆ ಜನರೇ ತಮ್ಮ ಮಾನ ಕಾಪಾಡಿಕೊಳ್ಳಲು ಮುಖ ಮುಚ್ಚಿಕೊಳ್ಳುವಂತಾಗಿದೆ. ರೈತರ, ಬಡವರ ಸಮಸ್ಯೆಯನ್ನು ಪರಿಹಾರ ಮಾಡಲಾಗದೆ ಇವರು ರಾಜೀನಾಮೆ ನೀಡಿಲ್ಲ. ಕೇವಲ ತಮ್ಮ ಸ್ವಾರ್ಥ ಹಿತಾಸಕ್ತಿಗೆ ರಾಜೀನಾಮೆ ನೀಡಿದ್ದಾರೆ ಎಂದರು.

ಬೆಂಗಳೂರಿನ ಸುತ್ತ ಮುತ್ತ ಲ್ಯಾಂಡ್ ಮಾಫಿಯಾಗಳು 40 ಸಾವಿರಕ್ಕೂ ಹೆಚ್ಚು ಸರ್ಕಾರಿ ಭೂಮಿಯನ್ನು ಕಬಳಿಸಿದ್ದಾರೆ. ಅದರಿಂದ ಲೂಟಿ ಮಾಡಿರುವ ಹಣವನ್ನು ಶಾಸಕರ ಖರೀದಿಗೆ ಬಳಕೆ ಮಾಡುತ್ತಿದ್ದಾರೆ ಎಂದರು. ಇವರನ್ನು ಕಿತ್ತೊಗೆಯದೆ ಬೇರೆ ದಾರಿಯಿಲ್ಲ ಎಂದು ಕರೆ ನೀಡಿದರು. ಮಾರುತಿ ಮಾನ್ಪಡೆ, ನಿತ್ಯಾನಂದ ಸ್ವಾಮಿ, ಚಂದ್ರಪ್ಪ ಹೊಸಕೆರೆ, ಯು.ಬಸವರಾಜ್, ವೆಂಕಟಾಚಲಯ್ಯ, ಶಾಂತಾರಾಮ್ ನಾಯಕ್, ಪಿ.ಆರ್.ಸೂರ್ಯ ನಾರಾಯಣ ರ‍್ಯಾಲಿಯ ನೇತೃತ್ವ ವಹಿಸಿದ್ದರು.

ಸಂಸ್ಕೃತಿಯ ಸಂರಕ್ಷಣೆಯಲ್ಲಿ...

ಸೀತಾರಾಂ ಯೆಚೂರಿ ಭಾಷಣ

ಕರ್ನಾಟಕದ ವೀರಶೈವ ಮಠಗಳಲ್ಲಿಯೇ ಅತ್ಯಂತ ವಿಶಿಷ್ಟ, ವಿಭಿನ್ನವಾಗಿರುವ ಚಿತ್ರದುರ್ಗದ ಮುರುಘಮಠ. 12ನೇ ಶತಮಾನದ ಶರಣರ ಚಳುವಳಿಯ ನಿಜ ಅಂತಃಸತ್ವ ನೆಲೆಯಾಗಿ ಹೊಂದಿದೆ. ಮೂಢನಂಬಿಕೆ, ಜಾತಿ ತಾರತಮ್ಯ ಕೋಮುವಾದ, ಜಾಗತೀಕರಣದ ವಿರುದ್ಧ ಸಮಾನತೆಗಾಗಿ ಸಂಘರ್ಷದ ಧ್ವನಿ ಮೊಳಗಿಸಿದವರು ಮುರುಘ ಶರಣರು. ಈ ವರುಷದ ಶರಣ ಸಂಸ್ಕೃತಿ ಉತ್ಸವದಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಸೀತಾರಾಂ ಯೆಚೂರಿಯವರ ಮಾತುಗಳು ಇಲ್ಲಿವೆ.



ಶ್ರೀ ಶಿವಮೂರ್ತಿ ಶರಣರೇ, ಹಿರಿಯರೇ, ಈ ಸಂದರ್ಭ ದೊರೆತಿದ್ದು ನನಗೆ ಗೌರವ ಎಂದೇ ಭಾವಿಸುವೆ. ಭಾರತದ ವೈವಿಧ್ಯತೆಯನ್ನು ನಾವು ಕಾಯ್ದುಕೊಳ್ಳಬೇಕಿದೆ. ಕೆಲವು ದಿನಗಳ ಹಿಂದೆ ಸ್ವಾಮಿಗಳು ಮತ್ತು ನಾನು ಭಾರತ ಅಮೇರಿಕಾ ಅಣು ಒಪ್ಪಂದದ ವಿಚಾರ ಸಂಕಿರಣದಲ್ಲಿ ಒಂದೇ ವೇದಿಕೆಯಲ್ಲಿ ಮಾತನಾಡಿದೆವು. ಭಾರತವನ್ನು ಕಾಡುತ್ತಿರುವ ಜಾಗತೀಕರಣದ ಸಂಕಟಗಳ ಕುರಿತು ಮಾತನಾಡಿದ ವೇದಿಕೆ ಅದು. ಆಗ ನನಗೆ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಮುರುಘಾ ಶರಣರ ಕೆಲಸ ನನಗೆ ತಿಳಿದಿದೆ. ಭಾರತದ ಸ್ವಾತಂತ್ರ್ಯ, ಸಾರ್ವಭೌಮತೆಯ ರಕ್ಷಣೆ ವಿಷಯದಲ್ಲಿ, ವೈವಿಧ್ಯತೆಯನ್ನು ಕಾಪಾಡಲು ಅವರ ಜೊತೆಗೂಡಿ ಕೆಲಸ ಮಾಡಲು ನಮಗೆ ಹೆಮ್ಮೆ ಎನಿಸುತ್ತದೆ.

ಶರಣರು ಅಂದಿನ ವಿಚಾರ ಸಂಕಿರಣದಲ್ಲಿ ಒಂದು ಆಸಕ್ತಿದಾಯಕ ವಿಷಯವನ್ನು ಪ್ರಸ್ತಾಪಿಸಿದರು. ಅಮೇರಿಕ ಏನನ್ನು ಬಯಸುತ್ತಿದೆ ಎಂಬುದಕ್ಕೆ www.com ಬಗ್ಗೆ ಮಾತನಾಡಿದರು. w ಎಂದರೆ ವೆಪನ್ಸ್ - ಶಸ್ತ್ರ, w ವಾರ್-ಯುದ್ಧ, w ವೆಲ್ತ್-ಸಂಪತ್ತು ಎಂದು ವ್ಯಾಖ್ಯಾನಿಸಿದರು. ಇದನ್ನು ನಾವು ppp.com ಎಂದು ಮಾಡಬೇಕೆಂದರು. p - ಎಂದರೆ ಪೀಸ್ (ಶಾಂತಿ), p - ಎಂದರೆ ಪ್ರಾಸ್ಪರಿಟಿ (ಉನ್ನತಿ), p - ಪ್ರೋಗ್ರೆಸ್ (ಪ್ರಗತಿ) ಬಯಸುತ್ತೇವೆ. ಈ ನಿಟ್ಟಿನಲ್ಲಿ ಭಾರತದ ಕಮ್ಯೂನಿಸ್ಟರಾದ ನಾವು ಅದೇ ಉದ್ದೇಶಗಳಿಗೆ ಶ್ರಮಿಸುತ್ತಿದ್ದೇವೆ. ಇಂತಹ ಒಂದು ಬದಲಾವಣೆಯನ್ನು ತರಬೇಕೆಂಬುದು ನಮ್ಮ ಬಯಕೆ.

ಮಾನವೀಯತೆಗೆ ಜೊತೆಗೂಡಿ

ಬಸವಣ್ಣನವರು 12ನೇ ಶತಮಾನದಲ್ಲಿ ಆ ಕಾಲದ ಕ್ರಾಂತಿಕಾರಿಗಳು. ಅವರು ಸಾಮಾಜಿಕ ಕ್ರಾಂತಿಗಾಗಿ ಶ್ರಮಿಸಿದವರು. ನಾವು ಇಂದಿನ ಸಮಾಜವನ್ನು ಬದಲಾಯಿಸಲು ಕ್ರಾಂತಿಕಾರಿಗಳಾಗಿ ಕೆಲಸ ಮಾಡುತ್ತಿರುವಂತೆಯೇ ಹಿಂದಿನ ಕಾಲ ಘಟ್ಟದಲ್ಲಿ ಕ್ರಾಂತಿಕಾರಿಗಳಾಗಿ ಕೆಲಸ ಮಾಡಿದವರು. ಸಮಾನತೆಯ ಸಮಾಜವನ್ನು ನಿರ್ಮಿಸಲು ಶ್ರಮಿಸಿದವರು. ಮಾನವರ ನಡುವೆ ಭೇದ ಇರಬಾರದು ಎಂದು ಪ್ರತಿಪಾದಿಸಿದವರು. ಇಂತಹ ಮಹತ್ಕಾರ್ಯವನ್ನು ಸಾಧಿಸಬೇಕೆಂದರೆ ಮುಖ್ಯವಾಗಿ ನಮ್ಮ ಮಾನಸಿಕ, ವೈಚಾರಿಕ ಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ.

ಹಾಗೆಯೇ ಆರ್ಥಿಕ ಅಧಿಕಾರವಿಲ್ಲದೆ ಸಾಮಾಜಿಕ ಅಧಿಕಾರ ಪ್ರಾಪ್ತವಾಗುವು ದಿಲ್ಲ ಎಂಬ ಸತ್ಯವನ್ನು ನಾವು ಬೌದ್ಧ ಧರ್ಮದಿಂದಲೂ, ಬಸವ ಧರ್ಮದಿಂದಲೂ ತಿಳಿದುಕೊಳ್ಳ ಬಹುದು. ಇಲ್ಲಿಗೆ ಇಂತಹ ಸಭೆಯಲ್ಲಿ ಪಾಲ್ಗೊಳ್ಳಲು ನಾನು ಹೋಗುತ್ತಿದ್ದೇನೆ ಎಂದಾಗ ದೆಹಲಿಯಲ್ಲಿ ಆಶ್ಚರ್ಯ ವ್ಯಕ್ತಪಡಿಸಿದ ಕೆಲವರು 'ನೀವು ನಾಸ್ತಿಕರು, ದೇವರಲ್ಲಿ ನಂಬಿಕೆ ಇಲ್ಲದವರು. ಆದರೆ ಅಲ್ಲಿಗೆ ಹೇಗೆ ಹೋಗುವಿರಿ' ಎಂದರು. ನಮ್ಮ ದೇಶದಲ್ಲಿ ಹಿಂದೂ ಧರ್ಮದಲ್ಲಿ ಚಾರ್ವಾಕರು, ಬೃಹಸ್ಪತಿಯಂತಹ ಅನೇಕ ನಾಸ್ತಿಕರು ಸುಪ್ರಸಿದ್ಧರಾಗಿದ್ದಾರೆ ಮತ್ತು ಸಮಾಜಕ್ಕೆ ಕಾಣಿಕೆ ಕೊಟ್ಟಿದ್ದಾರೆ. ನಾಸ್ತಿಕರು ಎಂದರೆ ದೇವರನ್ನು ನಂಬುವವರನ್ನು ಅಗೌರವಿಸುವುದಲ್ಲ. ದೇವರನ್ನು ನಂಬಲು ಆ ವ್ಯಕ್ತಿಗೆ ಹಕ್ಕಿದೆ. ಹಾಗೆಯೇ ನಂಬದಿರುವವರಿಗೂ ಹಕ್ಕಿದೆ. ನಾವು ಎಲ್ಲರೂ ಕೂಡಿ ಸಮಾಜದ ಒಳಿತಿಗಾಗಿ, ಉತ್ತಮ ಭವಿಷ್ಯತ್ತಿಗಾಗಿ ಒಂದಾಗಿ ಶ್ರಮಿಸಲು ಸಾಧ್ಯವಿದೆ. ನಾವು ಭವಿಷ್ಯತ್ತಿನಲ್ಲಿ ಮಾನವೀಯತೆಗಾಗಿ ಜೊತೆಗೂಡಿ ಕೆಲಸ ಮಾಡಲು ಬಯಸುತ್ತೇವೆ.

'ಜಾಗತಿಕ ಜಾತಿ ವ್ಯವಸ್ಥೆ'

ಸಂಸ್ಕೃತಿಯ ಮೇಲೆ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಮಾತನಾಡಲು ಮುರುಘಾ ಶರಣರು ತಿಳಿಸಿದ್ದಾರೆ. ಅದನ್ನು ನಂತರ ಮಾತನಾಡುವೆ. 12ನೇ ಶತಮಾನದ ಶರಣರಂತೆ, ಈಗ ಮುರುಘಾ ಮಠ ಜಾತಿ ವ್ಯವಸ್ಥೆಯ ವಿಕೃತಿಗಳು ಹಾಗೂ ಶೋಷಣೆಯ ವಿರುದ್ಧ ಹೋರಾಟ ನಡೆಸುತ್ತಾ ಬರುತ್ತಿದೆ. ಇದು ಮಠದ ಬದ್ಧತೆ. ಆ ಹೋರಾಟವನ್ನು ನಾವು ಇನ್ನು ದೊಡ್ಡ ರೀತಿಯಲ್ಲಿ ಮೇಲು ಮಟ್ಟಕ್ಕೆ ಕೊಂಡೊಯ್ಯಬೇಕಿದೆ. ಸಮಾಜವಿನ್ನೂ ಜಾತಿ, ವರ್ಣಾಶ್ರಮದ ಹಿಡಿತದಲ್ಲಿದೆ. ಇದರಿಂದ ವಿಮೋಚಿಸಲು ನಾವು ಜೊತೆ ಗೂಡಿ ಹೋರಾಡಬೇಕು. ಇಂದು ಅಂತಹುದೇ ಒಂದುಬಗೆಯ ಜಾತೀಯ ವ್ಯವಸ್ಥೆಯನ್ನು ತರಲು ಅಂತರರಾಷ್ಟ್ರೀಯವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿ ಹೊರಟಿದೆ. ಅದಕ್ಕಾಗಿ ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ನಿಧಿ, ವಿಶ್ವ ವ್ಯಾಪಾರ ಸಂಘಟನೆಗಳನ್ನು ಹರಿಯಬಿಟ್ಟಿದೆ. ಇಡೀ ಜಗತ್ತನ್ನು, ಭಾರತ ದೇಶವನ್ನು ಆರ್ಥಿಕ ಗುಲಾಮತನಕ್ಕೆ, ವಸಾಹತುವನ್ನಾಗಿಸಲು ಅದು ಗುರಿಯಿರಿಸಿದೆ. ಇದಕ್ಕಾಗಿ ಆ 'ತ್ರಿಮೂರ್ತಿ'ಗಳನ್ನು ಬಳಸುತ್ತಿದೆ. ಜಾತಿ ವ್ಯವಸ್ಥೆಯ ಆಧಾರದ ಜಾತಿ ತಾರತಮ್ಯ, ಶೋಷಣೆಯ ವಿರುದ್ಧ ಹೋರಾಡುತ್ತಿರುವಂತೆ ಇಂದು 'ಅಂತರರಾಷ್ಟ್ರೀಯ ಜಾತಿ ವ್ಯವಸ್ಥೆ' ತರುತ್ತಿರುವ ಅಮೇರಿಕಾ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಬೇಕಿದೆ.



ಸ್ವಾಮಿ ಅಗ್ನಿವೇಶ್‌ಗೆ 'ಬಸವಶ್ರೀ' ಪ್ರಶಸ್ತಿ ಮುರುಘ ಶರಣರಿಂದ

ಮೂರನೇಯ ಜಗತ್ತಿನ, ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ಪುನರ್ ವಸಾಹತು ಮಾಡಲು, ಗರಿಷ್ಠ ಲಾಭ ಹೊಡೆಯಲು ಸಾಮ್ರಾಜ್ಯಶಾಹಿಯು ಎಲ್ಲಾ ಹಾದಿಗಳನ್ನು ಬಳಸುತ್ತಿದೆ. ಸಂಸ್ಕೃತಿ ಎಂಬುದು ಅದರ ದೊಡ್ಡ ಹೆದ್ದಾರಿ. ಜಾಗತೀಕರಣದ ಸಂದರ್ಭದಲ್ಲಿ ಈಗ ಅಸ್ತಿತ್ವದಲ್ಲಿರುವ ಸಂಸ್ಕೃತಿಯನ್ನು ಏಕಮುಖವಾದ, ಏಕೀಕೃತವಾದ ಸಂಸ್ಕೃತಿಯನ್ನಾಗಿ ಬೆಳೆಸುತ್ತಿದೆ. ಇಂತಹ ಏಕೀಕೃತ ಸಂಸ್ಕೃತಿಯ ಯಜಮಾನಿಕೆ ಸ್ಥಾಪಿಸ ಬಯಸಿದೆ. ಏಕೆಂದರೆ ಏಕೀಕೃತವಾದ ಸಂಸ್ಕೃತಿ ಸರಕನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿದಲ್ಲಿ, ದೊಡ್ಡ ಪ್ರಮಾಣದ ಲಾಭವನ್ನು ಗಳಿಸಬಹುದು ಎಂಬುದು ಅದರ ಲೆಕ್ಕಾಚಾರ. ಸಾಮ್ರಾಜ್ಯಶಾಹಿಯ ನೇರ ಪರಿಣಾಮ ಸಂಸ್ಕೃತಿಯ ಮೇಲೆ ಕಾಣುವುದು. ಉದಾಹರಣೆ ಜನಪದ ಅದೆಷ್ಟು ವೈವಿಧ್ಯತೆಯಿಂದ, ಶ್ರೀಮಂತಿಕೆಯಿಂದ ಕೂಡಿದೆ. ಸಾಮ್ರಾಜ್ಯಶಾಹಿಯು ಈ ವೈವಿಧ್ಯಮಯವನ್ನು ನಾಶ ಮಾಡಿ ಏಕ ಸ್ವರೂಪದ ಸಂಸ್ಕೃತಿಯನ್ನು ಹೇರಬಯಸುತ್ತದೆ. ಪ್ರೊ. ಶ್ರೀಶೈಲ ಹುದ್ದಾರ್‌ರವರು ಸಂಸ್ಕೃತಿಯ ವೈವಿಧ್ಯತೆಯನ್ನು ವಿವರವಾಗಿ ತೆರೆದಿಟ್ಟರು. ಇಂತಹ ಶ್ರೀಮಂತ, ವೈವಿಧ್ಯಮಯ ಸಂಸ್ಕೃತಿಯು ನಮ್ಮ ಸಂಪತ್ತು. ಸಂಸ್ಕೃತಿಯೆಂಬುದು ಜನತೆಯ ಆಶೋತ್ತರಗಳ ಸೃಜನಶೀಲ ಅಭಿವ್ಯಕ್ತಿ. ಈ ಸಂಪತ್ತನ್ನು ಒಂದೇ ಸ್ವರೂಪಕ್ಕೆ ತಂದು ತನ್ನ ಕೈವಶ ಮಾಡಿಕೊಂಡು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲು, ಒಂದೇ ಛತ್ರದಡಿ ತರಲು ಸಾಮ್ರಾಜ್ಯಶಾಹಿ ಬಯಸುತ್ತದೆ. ಸಾಮ್ರಾಜ್ಯಶಾಹಿಯು ಅದಕ್ಕಾಗಿ ಬೃಹತ್ ಕೈಗಾರಿಕೆ, ಸಂಸ್ಥೆಗಳನ್ನು ತೊಡಗಿಸಿದೆ. ಇದನ್ನು ICE ಎನ್ನುತ್ತದೆ. Information (ಮಾಹಿತಿ), Culture(ಸಂಸ್ಕೃತಿ), Entertainment (ಮನೋರಂಜನೆ)ಗಳನ್ನು ಒಂದಡಿ ತಂದು ಸಾವಿರಾರು ಕೋಟಿ ರೂಪಾಯಿಗಳನ್ನು ತೊಡಗಿಸಿ ಬಹುರಾಷ್ಟ್ರೀಯ ಕಂಪನಿಗಳು ಸಂಸ್ಕೃತಿಯ 'ಸರಕ'ನ್ನು ಉತ್ಪಾದಿಸುತ್ತಿವೆ. ನಮಗಿಂದು ಬೇಕಿರುವ ಸಂಸ್ಕೃತಿಯು ಸರಕಿನಂತೆ ಉತ್ಪಾದಿಸುವುದಲ್ಲ, ಮಾರುವುದಲ್ಲ. ನಮಗೆ ಸಂಸ್ಕೃತಿಯು ಬೆಳೆಯಬೇಕು. ಅದನ್ನು ಸಂರಕ್ಷಿಸಿಕೊಳ್ಳಬೇಕು. ನಮ್ಮ ವೈವಿಧ್ಯತೆಯು ಉಳಿಯಬೇಕು. ಅದಕ್ಕಾಗಿ ಶ್ರಮಿಸಬೇಕು.

ಇತ್ತೀಚೆಗೆ ಆಫ್ರಿಕಾ ದೇಶದಲ್ಲಿ ಒಂದು ಸಮೀಕ್ಷೆಯಾಯಿತು. ಅಲ್ಲಿ ಶೇಕಡಾ 90 ರಷ್ಟು ಮಕ್ಕಳು ಅನಕ್ಷರಸ್ಥರು ಅವರಿಗೆ ವಾಲ್‌ಡಿಸ್ನಿಯ ಮಿಕ್ಕಿ ಮೌಸ್, ಡೋನಾಲ್ಡ್ ಡಕ್‌ಗಳ ಭಾವಚಿತ್ರಗಳನ್ನು ತೋರಿಸಲಾಯಿತು. ಆ ಮಕ್ಕಳು ಅವುಗಳನ್ನು ಸುಲಭವಾಗಿ ಗುರುತಿಸಿದರು. ಸಾಮ್ರಾಜ್ಯಶಾಹಿಯು ಒಂದೆಡೆ ಅನಕ್ಷರಸ್ಥರನ್ನಾಗಿ ಇಡುತ್ತದೆ. ನೀವು ಶಾಲೆಗೆ ಹೋಗಬೇಕಿಲ್ಲ, ಶಿಕ್ಷಣ ಪಡೆಯಬೇಕಿಲ್ಲ, ಪ್ರಜ್ಞೆಯು ಬೆಳೆಯದಂತೆ, ಅದನ್ನು ಅರಗಿಸಿಕೊಳ್ಳಲಾಗದಂತೆ ತಡೆಯುತ್ತದೆ. ಆದರೆ ಅವರ ಸಾಂಸ್ಕೃತಿಕ ಸಂಕೇತಗಳನ್ನು ಗುರುತಿಸುವಷ್ಟು ಮಾತ್ರ ತಿಳುವಳಿಕೆ ಇರಬೇಕು. ಅವರ ವ್ಯಾಪಾರ, ಲಾಭ ಅಭಾದಿತವಾಗಿರಬೇಕು ಎಂದು ನೋಡುತ್ತದೆ. ಅವರಿಗೆ ನಾಗರೀಕ ಸಮಾಜದ ಸ್ವಾಸ್ಥ್ಯ ಲೆಕ್ಕಕ್ಕಿಲ್ಲ. ಅವರಿಗೆ ಅಂತಹ ಸಂಸ್ಕೃತಿ ಮಾರಾಟವಾಗಬೇಕು ಅಷ್ಟೆ.

ಕೆಲವರು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಬೇಕು ಎನ್ನುತ್ತಾ ಸ್ವದೇಶಿಯನ್ನು ಬಲಪಡಿಸಿ ವಿದೇಶಿಯನ್ನು ಎದುರಿಸಬೇಕು ಎನ್ನುತ್ತಾರೆ. ಇದು ಅವರು ಹೇಳಿದಷ್ಟು ಸೀದಾ ಸಾಧ್ಯವಾದದ್ದಲ್ಲ. ಸಾಮ್ರಾಜ್ಯಶಾಹಿಯು ಇಂದು ಅತಿ ಚಾಣಾಕ್ಯ, ಹುಷಾರು ಆಗಿ, ಬಲಿಷ್ಟವಾಗಿ ಕೆಲಸ ಮಾಡುತ್ತದೆ ಎಂಬುದನ್ನು ಮರೆಯಬಾರದು. ಅದು ನಮ್ಮದೇ ಆದ ಸ್ವದೇಶಿ ಸಾಂಸ್ಕೃತಿಕ ಕಲೆಗಳನ್ನು ಪೂರ್ಣ ಕೈವಶ ಮಾಡಿಕೊಳ್ಳುತ್ತಿದೆ. ಪಂಜಾಬಿನ ಬಾಂಗ್ಡಾ, ಒರಿಸ್ಸಾದ ಜನಪದದಂತಹ ಪ್ರಕಾರಗಳನ್ನು ಎಂ.ಟಿ.ವಿ., ಬಿ.ಟಿ.ವಿ.ಯಂತಹ ಮೂಲಗಳಿಂದ ವಶಪಡಿಸಿಕೊಂಡು ಲಾಭೋದ್ಯಮವಾಗಿ ಬಳಸುತ್ತಿವೆ. ಇಂದು ನಡೆಯಬೇಕಾದ ಹೋರಾಟ ಕೇವಲ ಸಾಂಸ್ಕೃತಿಕ- ಕಲಾ ಪ್ರಕಾರಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಮಾತ್ರವಲ್ಲ, ಅದು ನಮ್ಮ ಸಂಸ್ಕೃತಿಯೊಳಗೆ ಅತಿಕ್ರಮ ಪ್ರವೇಶ ಮಾಡಲು ನಾವು ಬಿಡುವುದಿಲ್ಲ ಎಂಬುದು ರಾಜಕೀಯ ವಿಷಯವಾಗಿದೆ. ನಮ್ಮ ವೈವಿಧ್ಯಮಯ ಸಂಸ್ಕೃತಿ ಉಳಿಸಿಕೊಂಡು ಅತಿಕ್ರಮಣದ ವಿರುದ್ಧ ಹೋರಾಡುತ್ತೇವೆ ಎಂದು ಸಂಕಲ್ಪಿಸುವುದು, ಹಿಮ್ಮೆಟ್ಟಿಸುವುದು ನಮ್ಮದನ್ನು ಉಳಿಸಿಕೊಳ್ಳುವ ಒಂದು ಸಾಧನ. ಸಾಮ್ರಾಜ್ಯಶಾಹಿಯು ಸಾಂಸ್ಕೃತಿಕ ವೈವಿಧ್ಯತೆಯ ಮೇಲೆ ದಾಳಿ ನಡೆಸಿ ನುಂಗಿ ನೀರು ಕುಡಿಯಬಯಸುತ್ತದೆ. ನಮ್ಮ ದೇಶದೊಳಗೂ ಆಂತರಿಕ ಅಪಾಯಗಳೂ ಇವೆ. ಅದು ದೇಶದೊಳಗಿನ 'ತ್ರಿಶೂಲ'-ಅದು 'ಕೋಮುವಾದ'. ಅವರು ಬೇರೆ ಯಾವುದೇ ವೈವಿಧ್ಯಮಯ ಸಂಸ್ಕೃತಿಯನ್ನು ಅದರ ಅಭಿವ್ಯಕ್ತಿಯನ್ನು ಒಪ್ಪುವುದಿಲ್ಲ, ಅದನ್ನು ನಾಶ ಮಾಡಲು ಕೋಮುವಾದಿಗಳು ಯತ್ನಿಸುತ್ತಾರೆ. ಅವರ ದಾಳಿ ಅವರು ಒಪ್ಪಿಕೊಳ್ಳುವ ಧಾರ್ಮಿಕ ಆಚರಣೆಗಳನ್ನಷ್ಟೇ ಪ್ರತಿಪಾದಿಸುತ್ತಾರೆ. ಸದ್ಯ ನೋಡಿ ಬಾಬಾಬುಡನ್ ಗಿರಿಯಲ್ಲಿ ಆರಾಧನಾ ಸ್ಥಳದಲ್ಲಿ ನಡೆದಿರುವುದೇನು? ಅದನ್ನು ಒಂದು ವಿವಾದದ ಕೇಂದ್ರವನ್ನಾಗಿಸಲಾಗಿದೆ. ಈಗ ಅಲ್ಲಿ ನಡೆದಿರುವ ವಿದ್ಯಮಾನಗಳು ಶಾಂತಿ ಕದಡದೇ ಮುಗಿಯಲಿ ಎಂದು ಆಶಿಸುತ್ತೇವೆ. ಆದರೆ ಚಿಕ್ಕಮಗಳೂರಿನಲ್ಲಿ ಈ ವಿವಾದವನ್ನು ಬಳಸಿ ತೀಕ್ಷ್ಣ ಘರ್ಷಣೆಗೆ ಎಡೆ ಮಾಡುವಂತೆ ಯತ್ನಿಸಲಾಗುತ್ತಿದೆ. ಕೆಲವು ಜನರ ನಂಬಿಕೆಯನ್ನು ಪ್ರಶ್ನಿಸಲಾಗುತ್ತಿದೆ. ಇದನ್ನು ಪ್ರಶ್ನಿಸಲು ಅವರ್ಯಾರು? ನಾವ್ಯಾರು? ತಮ್ಮ ಕಷ್ಟ-ಸುಖ ಹೇಳಿಕೊಳ್ಳಲು, ಬಗೆಹರಿಸಿಕೊಳ್ಳಲು ಆ ಜನತೆ ಅವರದೇ ರೀತಿಯಲ್ಲಿ ಬಯಸಿದರೆ ಅದಕ್ಕೆ ಅಡ್ಡಿಪಡಿಸಲಾಗದು. ಅಲ್ಲಿಯವರೆಗೆ ಅಂತಹ ಒಂದು ಹಕ್ಕು ಅವಕಾಶಗಳನ್ನು ರಕ್ಷಿಸುವುದು ನಮ್ಮೆಲ್ಲರ ಹೊಣೆ. ಅಲ್ಲಿದ್ದ ಯಾವುದೇ ರೀತಿಯ ಆಚರಣೆ ಮಾಡಲು ಅವರಿಗೆ ಅವಕಾಶವಿರಬೇಕು. ಹಿಂದೆ ಬುದ್ಧನಿಂದ ಹಿಡಿದು, ಬಸವಣ್ಣನವರನ್ನೊಳಗೊಂಡು ಅಂತಹ ವೈವಿಧ್ಯತೆಯನ್ನು ರಕ್ಷಿಸುವಂತಹ ವಿಚಾರಗಳು ಪರಂಪರೆಯಲ್ಲಿ

ಪುಟ 14ಕ್ಕೆ

ಎಡಪಂಥೀಯರಾಗುವ ಗಟ್ಟಿತನ

ಬಸವ ಅನುಯಾಯಿಗಳು ಎಡಪಂಥೀಯರಾಗುವ ಗಟ್ಟಿತನ ತೋರಬೇಕಾಗಿದೆ. ಎಡಪಂಥೀಯನಾಗಿ ವಿಚಾರ ಮಾಡುವನಿಗೆ ಸಮಾಜದಲ್ಲಿ ಅವಮಾನ. ಅವಘಡಗಳು ಎದುರಾಗುವುದು ಸಾಮಾನ್ಯ. ಇವುಗಳನ್ನು ಮೀರಿ ಪ್ರಗತಿಪಥದತ್ತ, ಹೆಜ್ಜೆ ಹಾಕಬೇಕು. ವರ್ಗ ರಹಿತ, ಜಾತಿ ರಹಿತ ಸಮಾಜದಿಂದ ಮಾತ್ರ ಸಮಾನತೆ ಸಾಧ್ಯ.

12ನೇ ಶತಮಾನದಲ್ಲೇ ಸಮಾಜ ಸುಧಾರಣೆಗೆ ಕ್ರಾಂತಿಕಾರಕ ಹೆಜ್ಜೆಗಳನ್ನಿಟ್ಟ ಬಸವಣ್ಣ ಅಂದೇ ದೇವರು ಮಂದಿರದಲ್ಲಿ ಇಲ್ಲ. ಮನದಲ್ಲಿ ಇದ್ದಾನೆ ಎಂದು ತೋರಿಸಿಕೊಟ್ಟಿದ್ದರು. ಬಸವಣ್ಣ ಚಿಂತನೆಗಳು ಇಂದಿನ ಸಮಾಜಕ್ಕೆ ಹೆಚ್ಚು ಪ್ರಸ್ತುತ.

– ಶಿವಮೂರ್ತಿ ಮುರುಘಾ ಶರಣರು

ಜಗದಗಲ

■ ಶರತ್‌ಚಂದ್ರ

ಪಾಕಿಸ್ತಾನದಲ್ಲಿ ತುರ್ತುಪರಿಸ್ಥಿತಿ : ತೀವ್ರ ಬಿಕ್ಕಟ್ಟು

ಪಾಕಿಸ್ತಾನದಲ್ಲಿ ಹೊಸದಾಗಿ ಚುನಾಯಿತ ಅಧ್ಯಕ್ಷ ಮುಶರಫ್ ನಿರೀಕ್ಷಿಸಿದಂತೆ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ಸುಪ್ರೀಂ ಕೋರ್ಟು ತಮ್ಮ ಚುನಾವಣೆಯನ್ನು ಕಾನೂನು ಬಾಹಿರವೆಂದು ತಳ್ಳಿ ಹಾಕಬಹುದೆಂಬ ಆತಂಕದಿಂದ ಮುಶರಫ್ ಈ ಕ್ರಮ ಕೈಗೊಂಡರು ಎನ್ನಲಾಗಿದೆ. ಸುಪ್ರೀಂ ಕೋರ್ಟು ತುರ್ತು ಪರಿಸ್ಥಿತಿ ಘೋಷಣೆಯನ್ನೇ ಪ್ರಶ್ನಿಸಿತ್ತು. ಆ ಕೂಡಲೇ ಮುಖ್ಯ ನ್ಯಾಯಾಧೀಶ ಸೇರಿದಂತೆ ಹಲವು ನ್ಯಾಯಾಧೀಶರುಗಳನ್ನು ವಜಾ ಮಾಡಲಾಯಿತು. ದೇಶದಾದ್ಯಂತ ತುರ್ತು ಪರಿಸ್ಥಿತಿ ವಿರೋಧಿಸಬಹುದಾದ ಎಲ್ಲಾ ರಾಜಕೀಯ ಪಕ್ಷಗಳ, ಚಳುವಳಿಗಳ ಪ್ರಮುಖ ನಾಯಕರು ಕಾರ್ಯಕರ್ತರುಗಳನ್ನು ಸಾವಿರಾರು ಸಂಖ್ಯೆಯಲ್ಲಿ ಬಂಧಿಸಲಾಗಿದೆ. ಇಲ್ಲವೆ ಗೃಹ ಬಂಧನದಲ್ಲಿ ಇಡಲಾಗಿದೆ. ವಕೀಲರ ಮತ್ತು ಮಾನವ ಹಕ್ಕು ಸಂಘಟನೆಗಳ ಕಾರ್ಯಕರ್ತರುಗಳನ್ನೂ ಬಂಧಿಸಲಾಗಿದೆ.

ದೇಶದಾದ್ಯಂತ ಪ್ರದರ್ಶನಗಳ ಮೇಲೆ ನಿರ್ಬಂಧ ಇದ್ದರೂ ತುರ್ತು ಪರಿಸ್ಥಿತಿ ವಿರುದ್ಧ ವ್ಯಾಪಕ ಪ್ರದರ್ಶನಗಳು ನಡೆದಿವೆ. ಇಸ್ಲಾಮಿಕ್ ಭಯೋತ್ಪಾದಕರ ಅಪಾಯ ಎದುರಿಸಲು ತುರ್ತು ಪರಿಸ್ಥಿತಿ ಎಂಬ ಮುಶರಫ್ ಹೇಳಿಕೆಯನ್ನು ಯಾರೂ ಗಂಭೀರವಾಗಿ ತೆಗೆದುಕೊಂಡಿಲ್ಲ. ಬಂಧಿತರಲ್ಲಿ ಬಹುಸಂಖ್ಯಾತರು ಜಾತ್ಯತೀತ ಪಕ್ಷ ಅಥವಾ ಸಂಘಟನೆಗಳಿಗೆ ಸೇರಿದವರು ಎಂಬುದೇ ಮುಶರಫ್ ಬುರುಡೆಯನ್ನು ಬಯಲು ಮಾಡುತ್ತದೆ. ಅಂತರ್ರಾಷ್ಟ್ರೀಯವಾಗಿಯೂ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಶರಫ್ ಗುರು ಬುಶ್ ಸಹ ತುರ್ತು



ಪರಿಸ್ಥಿತಿಯನ್ನು ಖಂಡಿಸಬೇಕಾಗಿ ಬಂದಿದೆ. ಮುಶರಫ್ ತಮ್ಮ ಸೇನಾ ಮುಖ್ಯಸ್ಥ ಪಟ್ಟ ಬಿಟ್ಟು ಕೊಡಬೇಕು. ಪಾರ್ಲಿಮೆಂಟು ಚುನಾವಣೆಯನ್ನು ಶೀಘ್ರವಾಗಿ ನಡೆಸಬೇಕು. ಇಲ್ಲದಿದ್ದರೆ ಅಮೆರಿಕ ಈ ಬಗ್ಗೆ ಒತ್ತಡ ಹೇರುವುದು ಎಂದಿದೆ. ಇದಕ್ಕೆ ಉತ್ತರವಾಗಿ ಮುಶರಫ್ ಚುನಾವಣೆಯನ್ನು ಫೆಬ್ರುವರಿಯೊಳಗೆ ನಡೆಸಲಾಗುವುದು ಎಂದಿದ್ದಾರೆ.

ತೋರಿಕೆಯ ಪ್ರಜಾಪ್ರಭುತ್ವ, ಹೆಚ್ಚು ಕಡಿಮೆ ಮಿಲಿಟರಿ ಸರ್ವಾಧಿಕಾರ, ಅದಕ್ಕೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಬೆಂಬಲ - ಈ ಬಗ್ಗೆ ಹಿಂದೆಂದಿಗಿಂತಲೂ ವ್ಯಾಪಕವಾಗಿ ಸ್ಪಷ್ಟವಾಗಿ ಪಾಕಿಸ್ತಾನದ ಜನತೆಗೆ ಅರ್ಥವಾಗಿದೆ. ನವಾಜ್ ಶರೀಫ್ ಪಕ್ಷ ಅಮೆರಿಕ ಮತ್ತು ಇತರ ಪಾಶ್ಚಿಮಾತ್ಯ ಸರ್ಕಾರಗಳ ಮೃದು ಧೋರಣೆಯನ್ನು ಟೀಕಿಸಿದೆ. ಇವರು ಮನಸ್ಸು ಮಾಡಿದರೆ ತುರ್ತು ಪರಿಸ್ಥಿತಿ ಒಂದು ದಿನವೂ ಮುಂದುವರೆಯುವುದಿಲ್ಲ ಎಂದು ಮಾರ್ಮಿಕವಾಗಿ ಹೇಳಿದೆ. ಪಾಕಿಸ್ತಾನದ ಜನತೆ ತುರ್ತು ಪರಿಸ್ಥಿತಿ ಮತ್ತು ಮಿಲಿಟರಿ ಸರ್ವಾಧಿಕಾರದ ವಿರುದ್ಧ ತೀವ್ರ ಹೋರಾಟಕ್ಕೆ ಸಿದ್ಧವಾಗಿದ್ದರೂ, ರಾಜಕೀಯ ಪಕ್ಷಗಳು ವಿವಿಧ ಮಟ್ಟಗಳಲ್ಲಿ ಮಿಲಿಟರಿ ಆಡಳಿತದ ಜತೆ ರಾಜಿ ಮಾಡಿಕೊಂಡಿರುವುದು ಅದಕ್ಕೆ ತೊಡಕಾಗಿದೆ. ಅತ್ಯಂತ ದೊಡ್ಡ ರಾಜಕೀಯ ಪಕ್ಷವಾದ ಬೆನಜಿರ್ ಭುಟ್ಟೊರ ಪಿ.ಪಿ.ಪಿ. ಮುಶರಫ್ ಜತೆ ಗುಪ್ತ ರಾಜಿ ಇಲ್ಲದೆ ಅವರು ಅಧ್ಯಕ್ಷರಾಗಿ ಚುನಾಯಿತರಾಗುವುದು ಸಾಧ್ಯವಿರಲಿಲ್ಲ. ಬೆನಜಿರ್ ಭುಟ್ಟೊ ಅಮೆರಿಕದ ಬೆಂಬಲಕ್ಕೆ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಆದರೆ ಒಟ್ಟಾರೆಯಾಗಿ 'ನಿರ್ದೇಶಿತ ಪ್ರಜಾಪ್ರಭುತ್ವ'ದ ಅಮೆರಿಕ-ಪಾಕಿಸ್ತಾನಿ ಮಿಲಿಟರಿ ಫಾರ್ಮುಲಾ ಇಂದಿನ ಬದಲಾದ ಪಾಕಿಸ್ತಾನದಲ್ಲಿ ಕೆಲಸ ಮಾಡೀತೆ ಎಂದು ಕಾದು ನೋಡಬೇಕಾಗಿದೆ.

ಗ್ವಾಟೆಮಾಲಾದಲ್ಲಿ ಬಲಪಂಥೀಯರಿಗೆ ಸೋಲು

ಲ್ಯಾಟಿನ್ ಅಮೆರಿಕದ ಇನ್ನೊಂದು ದೇಶದ ಜನತೆ ಬುಶ್ ಬೆಂಬಲಿತ ಬಲಪಂಥೀಯರಿಗೆ ಸೋಲು ಉಣ್ಣಿಸಿದೆ. ಗ್ವಾಟೆಮಾಲಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಬಲಪಂಥೀಯ ಅಭ್ಯರ್ಥಿ ಮಾಜೀ ಜನರಲ್ (ಸೈನ್ಯದ ಕುಖ್ಯಾತ ಗುಪ್ತ ದಳದ ಮಾಜೀ ಮುಖ್ಯಸ್ಥ) ಪೆರೆಜ್ ಮೋಲಿನಾ ಸೋತಿದ್ದಾರೆ. ಅವರ ವಿರುದ್ಧ ಸ್ಪರ್ಧಿಸಿದ್ದ ನೇಶನಲ್ ಪಾರ್ಟಿ ಆಫ್ ಹೋಪ್ ಪಕ್ಷದ ನಾಯಕ ಅಲ್ವಾರೋ ಕೊಲೊಮ್ ಶೇ. 54 ಕ್ಕೂ ಹೆಚ್ಚು ಮತ ಗಳಿಸಿ ಜಯಗಳಿಸಿದ್ದಾರೆ. ಅವರು ಮೂರನೇ ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಗ್ವಾಟೆಮಾಲಾ ಅಮೆರಿಕದ ಮುಕ್ತ ವ್ಯಾಪಾರ ಸಂಘಟನೆಯ ಸದಸ್ಯ ದೇಶ ವಾಗಿದ್ದು, ಅಮೆರಿಕದ ರಾಜಕೀಯ ಬೆಂಬಲಿಗನಾಗಿತ್ತು. ಗ್ವಾಟೆಮಾಲಾದ ಎಡಪಂಥೀಯ 'ಭಯೋತ್ಪಾದಕರ' ಮೇಲೆ ಯುದ್ಧಕ್ಕೆ ಬೆಂಬಲದ ನೆಪದಲ್ಲಿ ಅಮೆರಿಕ ಗ್ವಾಟೆಮಾಲಾದ ಮಿಲಿಟರಿ ಮೂಲಕ ಆ ದೇಶದಲ್ಲಿ ಮೂಗು ತೂರಿಸುತ್ತಿತ್ತು.

ಗ್ವಾಟೆಮಾಲಾ ಕಳೆದ 50 ವರ್ಷಕ್ಕೂ ಹೆಚ್ಚು ಕಾಲ ಅಮೆರಿಕ ಬೆಂಬಲಿತ ಮಿಲಿಟರಿ ದಬ್ಬಾಳಿಕೆಯಲ್ಲಿ ನರಳುತ್ತಿತ್ತು. ಮಿಲಿಟರಿ ದಬ್ಬಾಳಿಕೆಯ ಕಾಲದಲ್ಲೇ ಯುವ ಬೀದಿ-ಗ್ಯಾಂಗ್ ಗಳು ಮತ್ತು ಮಾದಕ ದ್ರವ್ಯಗಳ ಮಾಫಿಯಾಗಳು ಹೆಚ್ಚು ಕಡಿಮೆ ಗ್ವಾಟೆಮಾಲಾದ ಸಾರ್ವಜನಿಕ ಜೀವನವನ್ನು ನಿಯಂತ್ರಿಸುತ್ತಿದ್ದವು. ಗ್ವಾಟೆಮಾಲಾ ಲ್ಯಾಟಿನ್ ಅಮೆರಿಕದಲ್ಲೇ ಅತ್ಯಂತ ಹೆಚ್ಚಿನ ಕೊಲೆಯ ದರ ಹೊಂದಿರುವ ದೇಶವೆಂದು ಕುಖ್ಯಾತವಾಗಿತ್ತು. ಈ ಹಿಂಸಾಚಾರವನ್ನು ನಿಯಂತ್ರಿಸಲು ಮಿಲಿಟರಿ ಆಡಳಿತ ಬೇಕು ಎಂದು ಅಮೆರಿಕ ಮತ್ತು ಗ್ವಾಟೆಮಾಲಾದ ಆಳುವ ವರ್ಗಗಳು ನೆಪ ಹೂಡುತ್ತಿದ್ದವು. ಅಧ್ಯಕ್ಷ ಚುನಾಯಿತ ಅಲ್ವಾರೋ ಕೊಲೊಮ್ ಮತ್ತು ಅವರ ಪಕ್ಷ, ಜನರಲ್ ಪೆರೆಜ್ ಮೋಲಿನಾ ಮತ್ತು ಅವರ ಪಕ್ಷದ ಈ ವಾದಕ್ಕೆ ಸವಾಲು ಹಾಕಿದ್ದವು. ಕಳೆದ 50 ವರ್ಷಕ್ಕೂ ಹೆಚ್ಚು ಕಾಲ ಮಿಲಿಟರಿ ಆಡಳಿತ ನಂತರವೂ ಈ ಪರಿಸ್ಥಿತಿ ಏಕಿದೆ ಎಂದು ಅವರು ಪ್ರಶ್ನಿಸಿದರು. ಇದಕ್ಕೆ ಮಿಲಿಟರಿ ಹೆಚ್ಚಿಸುವುದು ಪರಿಹಾರ ಅಲ್ಲ. ವ್ಯಾಪಕ ನಿರುದ್ಯೋಗ ನಿವಾರಿಸುವುದು, ಸಾಮಾಜಿಕ ಸೇವೆಗಳನ್ನು ಸುಧಾರಿಸುವುದು ಅಗತ್ಯ ಎಂಬ ಅವರ ವಾದವನ್ನು ಗ್ವಾಟೆಮಾಲಾದ ಮತದಾರರು ಎತ್ತಿ ಹಿಡಿದಿದ್ದಾರೆ. ಅತ್ಯಂತ ಹೆಚ್ಚಿನ ಹಿಂಸೆ ಕಂಡ ಈ ಚುನಾವಣೆಯಲ್ಲಿ ಕೊಲೊಮ್ ಪಕ್ಷದ 20ಕ್ಕೂ ಹೆಚ್ಚು ಕಾರ್ಯಕರ್ತರು-ಪಾರ್ಲಿಮೆಂಟು ಅಭ್ಯರ್ಥಿಗಳು ಕೊಲೆಯಾಗಿದ್ದರು. 50 ರ ದಶಕದಲ್ಲೇ ಎಡ ಹಾದಿ ಹಿಡಿದು ಅಮೆರಿಕನ್ ಸಾಮ್ರಾಜ್ಯಶಾಹಿ ಮಿಲಿಟರಿ ಮಧ್ಯ ಪ್ರವೇಶಕ್ಕೆ ಒಳಗಾಗಿದ್ದ ಗ್ವಾಟೆಮಾಲಾ ಅಮೆರಿಕನ್ ಸಾಮ್ರಾಜ್ಯಶಾಹಿ ಧಿಕ್ಕರಿಸಿದ್ದು ಮಹತ್ವಪೂರ್ಣ ಬೆಳವಣಿಗೆ.

ಬುಶ್‌ಸಾಥಿಗಳಿಗೆ ಎಲ್ಲೆಲ್ಲೂ ಛೀಮಾರಿ

ಬುಶ್ ಸಾಥಿಗಳಿಗೆ ಎಲ್ಲೆಲ್ಲೂ ಛೀಮಾರಿ ಕಾದಿದೆ. ಅವರ ಅತ್ಯಂತ ನಿಕಟ ಸಾಥಿ ಮಾಜಿ ರಕ್ಷಣಾ ಕಾರ್ಯದರ್ಶಿ ರಮ್ಸ್ ಫೆಡ್ ಇತ್ತೀಚೆಗೆ ತಮ್ಮ ಪ್ಯಾರಿಸ್ ಭೇಟಿ ಮೊಟಕುಗೊಳಿಸಿ ಫ್ರಾನ್ಸ್ ಬಿಟ್ಟು ಓಡಿ ಹೋಗಬೇಕಾಯಿತು. ರಮ್ಸ್ ಫೆಡ್ ಅವರು ಪ್ಯಾರಿಸ್ ನಲ್ಲಿ ಭಾಗವಹಿಸಲು ಬಂದ ಸಮಾರಂಭವೊಂದರ ಹೊರಗೆ ಪ್ರದರ್ಶನಕಾರರು 'ಚಿತ್ರಹಿಂಸೆಕಾರ' 'ಯುದ್ಧ ಅಪರಾಧಿ' ಎಂಬ ಭಿತ್ತಿಪತ್ರ ಹಿಡಿದು ಪ್ರತಿಭಟಿಸಿದರು. ರಮ್ಸ್ ಫೆಡ್ ವಿರುದ್ಧ ಅಬು ಘ್ರೆಬ್ ಮತ್ತು ಗ್ವಾಟೆನಾಮೊ ಜೈಲುಗಳಲ್ಲಿ ಚಿತ್ರಹಿಂಸೆಗೆ ಪ್ರಚೋದನೆ ಮತ್ತು ಅನುಮತಿ ಕೊಟ್ಟಿದ್ದಕ್ಕೆ ದೂರು ಸಲ್ಲಿಸಲಾಗಿತ್ತು. ಇರಾಕ್ ವಿರುದ್ಧ ಯುದ್ಧದಲ್ಲಿ ಯುದ್ಧ ಅಪರಾಧಗಳ ಆಪಾದನೆ ಸಹ ಮಾಡಲಾಗಿತ್ತು. ಹಲವು ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಮಾನವ ಹಕ್ಕು ಸಂಘಟನೆಗಳು ಈ ದೂರು ಸಲ್ಲಿಸಿದ್ದವು. ಫ್ರೆಂಚ್ ಕಾನೂನು ಪ್ರಕಾರ ಇಂತಹ ಅಪರಾಧದ ಬಗ್ಗೆ ದೂರು ಇದ್ದರೆ, ಅಂತಹ ವ್ಯಕ್ತಿ (ಆತ ವಿದೇಶಿಯನಾಗಿದ್ದರೂ) ಫ್ರಾನ್ಸ್ ನಲ್ಲಿ ಇದ್ದಾಗ ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು.

ಇದರಿಂದ ಗಾಬರಿಗೊಂಡ ಪ್ಯಾರಿಸ್ ಪೋಲಿಸರು ರಮ್ಸ್ ಫೆಡ್ ಅವರನ್ನು ಪ್ಯಾರಿಸ್ ನಿಂದ ಮಾಯ ಮಾಡಿ ಜರ್ಮನಿ ಗಡಿವರೆಗೆ ಸಾಗಿಸಿ ಬಂದರು ಎಂದು ವರದಿಯಾಗಿದೆ. ಜರ್ಮನಿ ಯಾಕೆ? ರಮ್ಸ್ ಫೆಡ್ ವಿರುದ್ಧ ಜರ್ಮನಿ ಸೇರಿದಂತೆ ಹಲವು ದೇಶಗಳಲ್ಲಿ 'ಅಂತರ್ರಾಷ್ಟ್ರೀಯ ಯುದ್ಧ ಅಪರಾಧಿ' ಮತ್ತು 'ಚಿತ್ರ ಹಿಂಸೆ ಪ್ರಚೋದಕ' ಎಂಬ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಆದರೆ ಜರ್ಮನಿಯ ಉಚ್ಚ ನ್ಯಾಯಾಲಯ ಇಂತಹ ಆರೋಪದ ಕೇಸ್ ನ್ನು ವಜಾ ಮಾಡಿತ್ತು.

ಬುಶ ಇನ್ನೊಬ್ಬ ಸಾಥಿ ಮತ್ತು ಈಗಿನ ವಿದೇಶ ಕಾರ್ಯದರ್ಶಿ ರೈಸ್ ಗೆ ಓಡಿ ಹೋಗುವ ಅಗತ್ಯ ಬೀಳಲಿಲ್ಲ. ಆದರೆ ಅವರ ಟರ್ಕಿ ಭೇಟಿ ಸಂದರ್ಭದಲ್ಲಿ ತೀವ್ರ ಕಹಿ ಅನುಭವ ಆಯಿತು. ಟರ್ಕಿ ಇರಾಕ್ ಮೇಲೆ ಯುದ್ಧ ಹೂಡುವ ಸ್ಥಿತಿ ತಪ್ಪಿಸಲು ಮಾತುಕತೆಗೆ ತೆರಳಿದ ರೈಸ್ ಭಾರೀ ಪ್ರತಿಭಟನೆ ಎದುರಿಸಬೇಕಾಯಿತು. 'ಯಾಂಕೀ ಮನೆಗೆ ಹೋಗು' ಮುಂತಾದ ಘೋಷಣೆ ಮತ್ತು ಭಿತ್ತಿಪತ್ರ ಎದುರಿಸಬೇಕಾಯಿತು. ಪಾಕಿಸ್ತಾನದ ತುರ್ತು ಸ್ಥಿತಿ ಬಗ್ಗೆ ಏನೂ ಮಾಡಿಲ್ಲ ಎಂದು ಅಲ್ಲಿನ ವಿರೋಧ ಪಕ್ಷಗಳು ರೈಸ್ ಗೆ ತೀವ್ರ ಛೀಮಾರಿ ಹಾಕಿದವು.

ಸಂಸ್ಕೃತಿಯ ಸಂರಕ್ಷಣೆಯಲ್ಲಿ.......

ಪುಟ 13 ರಿಂದ

ಪ್ರವಹಿಸುತ್ತಾ ಬಂದಿವೆ. ಬುದ್ಧ, ಬಸವಣ್ಣ ಹಾಗೂ ಸ್ವಾಮಿವಿವೇಕಾನಂದರು, 'ಬೇರೆ ಬೇರೆ ನದಿಗಳು ಭಿನ್ನ ಹಾದಿಗಳಲ್ಲಿ ಹರಿಯುವಂತೆ, ದೇವರನ್ನು ಆರಾಧಿಸಲು ಅವರದ್ದೇ ಆದ ಮಾರ್ಗಗಳು ಇರುತ್ತವೆ' ಎಂದಿದ್ದಾರೆ. ಅವರಿಗೆ ಬೇಕಾದ ಧರ್ಮ, ದೇವರನ್ನು ಆರಾಧಿಸಲು ಅವಕಾಶವಿರಬೇಕು. ಅಂತಹ ವೈವಿಧ್ಯವನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿರಬೇಕು. ಒಂದು ಕಡೆ ಆ 'ತ್ರಿಮೂರ್ತಿ' ಇನ್ನೊಂದಡೆ ಈ 'ತ್ರಿಶೂಲ' ಒಂದಾಗಿ ನಮ್ಮ ಸಂಸ್ಕೃತಿ, ಸಂಪತ್ತನ್ನು, ಸಮೃದ್ಧಿಯನ್ನು ನಾಶಗೊಳಿಸಲು ಯತ್ನಿಸುತ್ತಿವೆ.


ನಾನು ಇಲ್ಲಿ ಬರುವ ಮೊದಲು ಮಠಕ್ಕೆ ಭೇಟಿ ನೀಡಿದಾಗ ಅಲ್ಲಿ ಯಾವುದೇ ಮಾನವ ರೂಪಿ ವಿಗ್ರಹವಿಲ್ಲದೆ ಗ್ರಂಥಗಳಿದ್ದವು, ವಿಚಾರಗಳನ್ನು ಹೀಗೆ ಗೌರವಿಸಲಾಗುತ್ತಿದೆ.

ಬಸವಣ್ಣನವರ ಮೂಲ ವಿಚಾರಗಳಿಗೆ ಮರಳಬೇಕಾಗಿದೆ. ಈ ಪ್ರಯತ್ನದಲ್ಲಿ ಶಿವಮೂರ್ತಿ ಶರಣರು, ಹಾಗೂ ಮುರುಘಾ ಮಠ ವಹಿಸುತ್ತಿರುವ ಪಾತ್ರ, ಕೆಲಸಗಳಿಗೆ ಭವಿಷ್ಯತ್ತಿನಲ್ಲಿ ಭಾರಿ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ. ಈ ವೈಚಾರಿಕ ಸಮರದಲ್ಲಿ ನಾವೂ ಕೂಡ ನಿಮ್ಮ ಜೊತೆ ಮಿತ್ರರಾಗಿ, ಸಹಭಾಗಿಯಾಗಿ ಇರುತ್ತೇವೆ. ದೇಶದಲ್ಲಿ ವೈಚಾರಿಕ ಸಂಸ್ಕೃತಿಯನ್ನು ಬೆಳೆಸುವುದರಿಂದ ನಮ್ಮ ದೇಶವನ್ನು ಸಂರಕ್ಷಿಸಿಕೊಳ್ಳಲು ಸಾಧ್ಯ. ಇಲ್ಲಿಗೆ ಕರೆದು ನನ್ನ ಅನಿಸಿಕೆ ಹಂಚಿಕೊಳ್ಳಲು ದೊರೆತ ಅವಕಾಶಕ್ಕೆ ಕೃತಜ್ಞನಾಗಿದ್ದೇನೆ.

ಸಮಾನತೆಯ ಆಧಾರದಲ್ಲಿ ಸಮಾಜವನ್ನು ನಿರ್ಮಿಸಬೇಕು. ನಮ್ಮ ಸಂವಿಧಾನದಲ್ಲಿ ಈ ಸಮಾನತೆಯನ್ನು ಪ್ರತಿಯೊಬ್ಬರಿಗೂ ಒಂದು ಓಟು ಎನ್ನುವುದರ ಮೂಲಕ ಸಾಧಿತವಾಗಿದೆ. ಆದರೆ ಅದು 'ಪ್ರತಿ ವ್ಯಕ್ತಿಗೂ ಒಂದೇ ಮೌಲ್ಯ' ಎಂದು ಸಾಧಿಸಬೇಕು ಎಂಬುದಾಗಿ ಡಾ. ಅಂಬೇಡ್ಕರ್ ಪ್ರತಿಪಾದಿಸಿದ್ದರು, ಬಯಸಿದ್ದರು. ಅಂತಹ ಸಮಾನತೆಯ ಸಮಾಜ ನಿರ್ಮಿಸಲು ನಾವೆಲ್ಲಾ ಜೊತೆಯಾಗಿಯೇ ದುಡಿಯೋಣ. ಧನ್ಯವಾದಗಳು.

ಭಾಷಣ ಅನುವಾದ: ■ ಜೆ.ಎನ್.ನಾಗರಾಜ್


ಸಂಗ್ರಹಾನುವಾದ ■ ಎಸ್.ವೈ.ಜಿ.



ಯುರೇನಿಯಂನ ವಿವಿಧ ಉಪಯೋಗಗಳು

ಪ್ರಶ್ನೆ: ಯುರೇನಿಯಂನಿಂದ, ಥೋರಿಯಂಗಳಿಂದ ವಿದ್ಯುತ್ ಉತ್ಪಾದಿಸುವ ಬಗೆಗೆ ಜ್ಞಾನ ವಿಜ್ಞಾನ ಕಾಲಂನಲ್ಲಿ ಬರೆಯುತ್ತಿದ್ದೀರಿ. ಮೊದಲಿಗೆ ಈ ಯುರೇನಿಯಂ ಇತ್ಯಾದಿಗಳ ಬಗೆಗೆ ಕಂಡುಕೊಂಡವರು ಯಾರು? ಇದರ ಉಪಯೋಗ ವಿದ್ಯುತ್ ಉತ್ಪಾದನೆ, ಬಾಂಬ್‌ಗಳಿಗಲ್ಲದೆ ಬೇರೆ ಇನ್ನೇನಕ್ಕಾದರೂ ಉಂಟೋ?


1896ರಲ್ಲಿ ಹೆನ್ರಿ ಬೆಕ್ವೆರಲ್ ಎಂಬ ವಿಜ್ಞಾನಿಯು ಯುರೇನಿಯಂನಂತಹ ವಸ್ತುಗಳಿಗೆ ವಿಕಿರಣವನ್ನು ಹೊರಸೂಸುವ ಗುಣವಿದೆ ಎಂಬುದನ್ನು ಆವಿಷ್ಕಾರ ಮಾಡಿದರು. ಪಿಯರಿ ಕ್ಯೂರಿ ಮತ್ತು ಮೇಡಂ ಕ್ಯೂರಿ ದಂಪತಿಗಳು ವಸ್ತುಗಳ ವಿಕಿರಣಶೀಲತೆ ಕುರಿತು ಮತ್ತಷ್ಟು ಸಂಶೋಧನೆ ನಡೆಸಿ, ಹೆಚ್ಚು ವಿಕಿರಣವನ್ನು ಹೊರಸೂಸುವ ರೇಡಿಯಂ ಎಂಬ ವಸ್ತುವನ್ನು ಬೇರ್ಪಡಿಸಿದರು. ಇಂತಹ ವಿಕಿರಣಶೀಲ ವಸ್ತುಗಳು ಯಾವುದೇ ವಸ್ತುವಿನ ಮೂಲಕ ತೂರಿಹೋಗಬಲ್ಲ ಸಾಮರ್ಥ್ಯವನ್ನು ಹೊಂದಿದ್ದು ಅವುಗಳು ಆಲ್ಫಾ ಕಿರಣಗಳು, ಬೀಟಾ ಕಿರಣಗಳು ಮತ್ತು ಗಾಮಾ ಕಿರಣಗಳು ಎಂಬ ಮೂರು ತೆರನಾದ ಕಿರಣಗಳನ್ನು ಹೊಂದಿರುತ್ತವೆಂದು ಕಂಡುಹಿಡಿದರು. ವಿಕಿರಣ ವಸ್ತುಗಳಿಂದ ಇಂಥಹ ಕಿರಣಗಳು ಯಾವುದಾದರೊಂದು ವಸ್ತುವಿನ ಮೂಲಕ ಹಾದು ಹೋಗುವ ಸಮಯದಲ್ಲಿ ಆ ವಸ್ತುಗಳನ್ನು ತೀವ್ರವಾಗಿ ಹಾನಿಮಾಡುತ್ತವೆಂದು ತಿಳಿದುಕೊಳ್ಳಲಾಯಿತು. ಆದರೆ ದ್ವಿತೀಯ ಮಹಾಯುದ್ದ ಸಮಯದಲ್ಲಿ ಅಮೇರಿಕಾ ಮತ್ತು ಬ್ರಿಟನ್ ದೇಶಗಳ ಸಹಭಾಗಿತ್ವದ ಮ್ಯಾನ್‌ಹಟ್ಟನ್ ಯೋಜನೆಯ ಮೂಲಕ ಪರಮಾಣುಗಳಿಂದ ತಯಾರಿಸಿದ ಅಣು ಬಾಂಬನ್ನು ಕಂಡುಹಿಡಿಯಲಾಯಿತು.



ಜಲಾಂತರ್ಗಾಮಿ

ನಿಸರ್ಗದಲ್ಲಿರುವ ಕೆಲವು ಅಣುಗಳು ಸದಾ ಅಸ್ಥಿರ ಸ್ಥಿತಿಯಲ್ಲಿರುವ ಗುಣವನ್ನು ಹೊಂದಿವೆ. ವಸ್ತುಗಳ ಈ ಅಸ್ಥಿರ ಸ್ಥಿತಿಯಿಂದಾಗಿ, ಅಂತಹ ವಸ್ತುಗಳು (ಹೆಚ್ಚು ಶಕ್ತಿ ಹೊಂದಿರುವ) ಗಾಮಾ ಕಿರಣಗಳ ರೂಪದಲ್ಲಿ ಮತ್ತು (ಒಂದು ಜೊತೆ ಪ್ರೋಟಾನುಗಳನ್ನು ಹೊಂದಿರುವ) ಆಲ್ಫಾ ಕಿರಣಗಳು ಹಾಗೂ (ಹೆಚ್ಚು ಶಕ್ತಿಯುತ ಎಲೆಕ್ಟ್ರಾನುಗಳಾದ) ಬೀಟಾ ಕಿರಣಗಳ ರೂಪದಲ್ಲಿ ಶಕ್ತಿಯನ್ನು ಬಿಡುಗಡೆ ಮಾಡುತ್ತವೆ. ಅಂತಹ ವಸ್ತುಗಳನ್ನು ವಿಕಿರಣಶೀಲ ವಸ್ತುಗಳು ಎಂದು ಕರೆಯಲಾಗುತ್ತದೆ.

ಪರಮಾಣು ಸ್ಥಾವರ ಮತ್ತು ಪರಮಾಣು ಬಾಂಬುಗಳ ಸ್ಫೋಟನೆಯಲ್ಲಿ ಜರುಗುವ ಕ್ರಿಯೆಗಳ ನಡುವೆ ಇರುವ ವ್ಯತ್ಯಾಸವೆಂದರೆ ಪರಮಾಣು ಸ್ಥಾವರಗಳಲ್ಲಿ ಪರಮಾಣು ಸರಣಿ ಕ್ರಿಯೆಗಳು ಮಾನವ ನಿಯಂತ್ರಣದಲ್ಲಿ, ಒಂದು ನಿರ್ದಿಷ್ಟ ಗತಿಯಲ್ಲಿ ಜರುಗುವಂತೆ ಮಾಡಲಾಗುತ್ತದೆ. ಆದರೆ ಪರಮಾಣುಬಾಂಬು ಸ್ಫೋಟನೆಯಲ್ಲಿ ಇಂತಹುದೇ ಸರಣಿ ಕ್ರಿಯೆಗಳು ಯಾವುದೇ ನಿಯಂತ್ರಣವಿಲ್ಲದೆ ಜರುಗುತ್ತವೆ.



ಬೆಂಕಿ, ಹೊಗೆ ಪತ್ತೆ ಹಚ್ಚುವ ಸಾಧನ

ಪರಮಾಣುಗಳ ಪ್ರಕ್ರಿಯೆಯನ್ನು ಒಳಗೊಂಡ ತಂತ್ರಜ್ಞಾನವನ್ನು ಪರಮಾಣು ತಂತ್ರಜ್ಞಾನ ಎಂದು ಕರೆಯಲಾಗುತ್ತದೆ. ಬೆಂಕಿ ಹತ್ತಿಕೊಂಡು ಅನಾಹುತ ಸಂಭವಿಸಬಹುದಾದದ್ದನ್ನು ಹೊಗೆಯ ಮೂಲಕವೇ ಪತ್ತೆ ಮಾಡುವ ಉಪಕರಣ (ಸ್ಮೋಕ್ ಡಿಟೆಕ್ಟರ್)ದ ತಯಾರಿಕೆಯಿಂದ ಆರಂಭಿಸಿ, ವೈದ್ಯಕೀಯ ಉಪಕರಣಗಳ ತಯಾರಿಕೆ, ಗನ್‌ಗಳನ್ನು ಪತ್ತೆಹಚ್ಚುವ ಉಪಕರಣ(ಗನ್ ಸೈಟ್), ಅಣ್ವಸ್ತ್ರಗಳನ್ನು ಪತ್ತೆ ಹಚ್ಚುವ ಉಪಕರಣ(ನ್ಯೂಕ್ಲಿಯರ್ ವೆಪನ್ ಡಿಟೆಕ್ಟರ್) ತಯಾರಿಕೆ, ಪರಮಾಣು ಸ್ಥಾವರಗಳನ್ನು ನಿರ್ಮಿಸುವವರೆಗೂ ಬಳಸಲಾಗುತ್ತದೆ. ವೈದ್ಯಕೀಯ ಚಿಕಿತ್ಸೆ, ಕೈಗಾರಿಕಾ ಉತ್ಪಾದನೆ, ವಿದ್ಯುಚ್ಛಕ್ತಿ ತಯಾರಿಕೆ, ಇತ್ಯಾದಿಯಂತಹ ನಾಗರೀಕ ಸೇವೆಗಳಿಗಾಗಿ ಬಳಸುವ ಪರಮಾಣು ತಂತ್ರಜ್ಞಾನವನ್ನು ನಾಗರೀಕ ಪರಮಾಣು ತಂತ್ರಜ್ಞಾನ ಎಂದು ಕರೆಯಲಾಗುತ್ತದೆ. ಉದಾಹರಣೆಗೆ, 1950ರ ದಶಕದಲ್ಲಿ ಅಮೇರಿಕಾ, ಬ್ರಿಟನ್ ಮತ್ತು ಸೋವಿಯತ್ ರಷ್ಯಾ ದೇಶಗಳು ಪರಮಾಣು ವಿದ್ಯುತ್ ಸ್ಥಾವರಗಳನ್ನು ತಯಾರಿಸಿ ಬಳಕೆಗೆ ತಂದವು. ಹಣ್ಣು, ತರಕಾರಿ, ಧಾನ್ಯಗಳು, ಆಹಾರೋತ್ಪನ್ನಗಳು ಇತ್ಯಾದಿಗಳಲ್ಲಿ ನುಸುಳಿರುವ ಸೂಕ್ಷ್ಮಜೀವಿಗಳನ್ನು ಕೊಲ್ಲಲು ಕೋಬಾಲ್ಟ್-60 ಎಂಬ ವಿಕಿರಣ ಪಟುತ್ವ ವಸ್ತುವನ್ನು ಬಳಸಲಾಗುತ್ತದೆ. ಅಲ್ಲದೆ ವೈದ್ಯಕೀಯ ಮತ್ತು ಹಲ್ಲಿನ ಚಿಕಿತ್ಸೆಯಲ್ಲಿ ಕ್ಷ-ಕಿರಣಗಳ ಇಮೇಜರ್ ಉಪಕರಣಗಳಲ್ಲಿ ಕೋಬಾಲ್ಟ್-60 ನ್ನು ಬಳಸಲಾಗುತ್ತದೆ. ಆಳವಾದ ತೈಲ ಬಾವಿಗಳನ್ನು ಕೊರೆಯುವಾಗ ಭೂಮಿಯೊಳಗಿನ ಬಂಡೆಕಲ್ಲುಗಳ ವಿಧಗಳು, ಸಾಂದ್ರತೆ, ಮತ್ತು ಇತರೆ ಗುಣಗಳನ್ನು ತಿಳಿಯಲು ಗಾಮಾ ಕಿರಣಗಳನ್ನು ಬಳಸಲಾಗುತ್ತದೆ.

ಅಣ್ವಸ್ತ್ರಗಳು, ಪರಮಾಣು ಬಾಂಬುಗಳು, ಇತ್ಯಾದಿಯಂತಹ ಮಿಲಿಟರಿ ಬಳಕೆಗಾಗಿ ಉಪಯೋಗಿಸುವ ತಂತ್ರಜ್ಞಾನವನ್ನು ಮಿಲಿಟರಿ ಪರಮಾಣು ತಂತ್ರಜ್ಞಾನ ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ಹಲವಾರು ತಿಂಗಳುಗಳ ಕಾಲ ನೀರಿನೊಳಗೇ ಚಲಿಸುವ ನ್ಯೂಕ್ಲಿಯರ್ ಸಬ್ ಮೇರಿನ್‌ಗಳು, ನ್ಯೂಕ್ಲಿಯರ್ ಯುದ್ದ ನೌಕೆಗಳು, ನ್ಯೂಕ್ಲಿಯರ್ ಯುದ್ದವಿಮಾನಗಳು, ಇತ್ಯಾದಿ.

ರೈತರ ಒಡಲ ಬೇಗುದಿಯೂ..

ಪುಟ 5 ರಿಂದ

ಸಮಸ್ಯೆ ಇದೆ. ನೀರಾವರಿ ಸಮಸ್ಯೆ ಭೀಕರವಾಗಿ ಕಾಡುತ್ತಿದೆ. ಕೃಷಿಗೆ ಬೇಕಾದ ಮೂಲಸೌಕರ್ಯಗಳು ಲಭ್ಯವಿಲ್ಲ ಎಂಬುದನ್ನು ಪ್ರಧಾನಿಗಳು ಹೇಳುತ್ತಿಲ್ಲ. ಆಸ್ಟ್ರೇಲಿಯಾ ಮತ್ತಿತರ ದೇಶಗಳಿಂದ ಪ್ರತಿ ಕ್ವಿಂಟಾಲ್ ಗೋಧಿಗೆ 1,600 ರೂ.ಪಾವತಿಸಿ ಆಮದು ಮಾಡಿಕೊಳ್ಳುವ ಕೇಂದ್ರ ಸರ್ಕಾರ ಭಾರತದಲ್ಲಿ ಗೋಧಿ ಉತ್ಪಾದಿಸುವ ರೈತನಿಗೆ 800-850 ರೂ. ಬೆಂಬಲ ಬೆಲೆ ನೀಡುತ್ತಿದೆ. ಬೆಂಬಲ ಬೆಲೆ ಹೆಚ್ಚಳದ ಬಗೆಗೆ ತೀರ್ಮಾನ ಮಾಡಿದ್ದರೂ ಕೊಡದೆ ಮೀನಾಮೇಷ ಎಣಿಸಲಾಗುತ್ತಿದೆ. ಇಲ್ಲಿನ ರೈತನಿಗೆ ಪ್ರತಿ ಕ್ವಿಂಟಾಲ್ ಗೋಧಿಗೆ ಕನಿಷ್ಠ 1000 ರೂ. ಬೆಂಬಲ ಬೆಲೆ ನೀಡಿದರೂ ಈ ದೇಶದ ಎಲ್ಲ ಜನತೆಗೆ ಅಗತ್ಯವಾದಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸುವ ಶಕ್ತಿ ಭಾರತದ ರೈತರಿಗಿದೆ. ಆದರೆ ಸರ್ಕಾರ ಇನ್ನು ಮಾಡಲು ಸಿದ್ಧವಿಲ್ಲ. ದುಪ್ಪಟ್ಟು ಬೆಲೆ ಪಾವತಿಸಿ ವಿದೇಶಗಳಿಂದ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತೀರಾ! ಭಾರತದ ರೈತರು ಬೆಳೆದ ಉತ್ಪನ್ನಗಳಿಗೆ ಏಕೆ ಲಾಭದಾಯಕ ಬೆಲೆ ನೀಡುತ್ತಿಲ್ಲ? ಎಂದು ಕಳೆದ ತಿಂಗಳು ಅಮೇರಿಕಾದ ಪೆನ್ಸಿಲ್ವೇನಿಯಾದ ವಿ.ವಿ.ಯಲ್ಲಿ ಏರ್ಪಡಿಸಿದ್ದ ಸಂವಾದದಲ್ಲಿ ಅಲ್ಲಿನ ವಿದ್ಯಾರ್ಥಿಗಳು ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂರನ್ನು ಕೇಳಿದ್ದರು. ಇದಕ್ಕೆ ಸಮರ್ಪಕ ಉತ್ತರ ನೀಡಲು ಚಿದು ತಿಣಕಾಡಿದ್ದರು.

ಕೃಷಿಯ ಕಂಪನೀಕರಣ

ಜಾಗತೀಕರಣ, ಆರ್ಥಿಕ ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳನ್ನು ಹಿಮ್ಮೆಟ್ಟಿಸದೆ ಕೃಷಿ ಬಿಕ್ಕಟ್ಟು ನಿವಾರಣೆಯಾಗುವುದಿಲ್ಲ. ಈ ಎಲ್‌ಪಿಜಿ ನೀತಿಗಳೇ ಕೃಷಿ ಬಿಕ್ಕಟ್ಟಿಗೆ ಕಾರಣ ಎಂಬುದನ್ನು ಮುಚ್ಚಿಟ್ಟಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ಸಮುದಾಯ ಮಾತ್ರವಲ್ಲದೆ ಇಡೀ ದೇಶವನ್ನೇ ದಿಕ್ಕು ತಪ್ಪಿಸುತ್ತಿದ್ದಾರೆ.

ಕೃಷಿಯನ್ನು ಕಾರ್ಪೋರೇಟೈಸ್ (ಕಂಪನೀಕರಣ) ಮಾಡಲು ಸರ್ಕಾರಗಳು ಮುಂದಾಗಿವೆ. ಇದಕ್ಕೆ ಅನುಗುಣವಾಗಿಯೇ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದಿವೆ. ಈಗಿರುವ ಎಪಿಎಂಸಿ ಮಾರುಕಟ್ಟೆಗಳ ಸಮೀಪ ಖಾಸಗಿಯವರೂ ಮಾರುಕಟ್ಟೆಯನ್ನು ಆರಂಭಿಸಬಹುದಾಗಿದೆ. ಕಂಪನಿಗಳು ತಮಗೆಬೇಕಾದ ಉತ್ಪನ್ನಗಳನ್ನು ಬೆಳೆಸಿ ಅದಕ್ಕೆ ಅನುಗುಣವಾಗಿ ಮಾರುಕಟ್ಟೆ ಮಾಡಿಕೊಳ್ಳಲು ಇದು ಅನುವು ಮಾಡಿಕೊಡುತ್ತದೆ. ಗುತ್ತೇದಾರಿ ಆಧಾರಿತ ಕೃಷಿ ವ್ಯವಸ್ಥೆಯನ್ನು ಜಾರಿಗೆ ಬರುತ್ತದೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಸರ್ಕಾರಗಳು ಬೋಗಸ್ ವಾದ ಹರಿಯಬಿಡುತ್ತಿವೆ. ವಾಸ್ತವವಾಗಿ ರೈತರು ಭವಿಷ್ಯದಲ್ಲಿ ಊಟ ಮಾಡಲು ರಾಗಿ ಭತ್ತಕ್ಕಾಗಿ ಬಹುರಾಷ್ಟ್ರೀಯ ಕಂಪನಿಗಳ ಮುಂದೆ ಕೈಚಾಚುವಂತಹ ಪರಿಸ್ಥಿತಿ ಉದ್ಭವಿಸುತ್ತದೆ. ಕೃಷಿ ತಜ್ಞರಾದ ಸ್ವಾಮಿನಾಥನ್ ಅವರು ವರದಿ ನೀಡಿ ಎರಡು ವರ್ಷಗಳಾಗಿದೆ, ಆದರೆ ಇದುವರೆಗೂ ಸರಿಯಾದ ಕ್ರಮ ಕೈಗೊಂಡಿಲ್ಲ.

ಅರಣ್ಯರೋಧನ

ಕಾಡಿನಲ್ಲಿ ನೆಲೆಸಿರುವ ಬುಡಕಟ್ಟು ಜನಾಂಗಗಳು, ಆದಿವಾಸಿಗಳಿಗೆ ಅಲ್ಲಿರುವ ಭೂಮಿಯನ್ನು ನೀಡಬೇಕೆಂದು ಅರಣ್ಯ ಕಾಯ್ದೆ 2006ರನ್ನು ರೂಪಿಸಲಾಯಿತು. ಕಾಯ್ದೆ ರೂಪಿಸಿ ಒಂದು ವರ್ಷವಾದರೂ ಜಾರಿಗೊಳಿಸಿಲ್ಲ. ಗಣಿ ಉದ್ಯಮಿಗಳು, ಅರಣ್ಯ ಸಂಪತ್ತಿನ ಮೇಲೆ ಕಣ್ಣಿಟ್ಟಿರುವ ದರೋಡೆಕೋರರು ಈ ಬುಡಕಟ್ಟು ಜನಾಂಗಗಳನ್ನು ಎತ್ತಂಗಡಿ ಮಾಡಿಸುತ್ತಿದ್ದಾರೆ. ಅರಣ್ಯ ಅಧಿಕಾರಿಗಳು ಇವರಿಗೆ ನಿರಂತರವಾಗಿ ಕಿರುಕುಳಗಳನ್ನು ನೀಡುತ್ತಿದ್ದಾರೆ. ಇದರಿಂದಾಗಿ ತಲಾತಲಾಂತರದಿಂದ ಕಾಡಿನಲ್ಲಿ ವಾಸಿಸಿಕೊಂಡು ಬರುತ್ತಿರುವ ಜನ ಬೀದಿಪಾಲಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ರಿಯಲ್ ಎಸ್ಟೇಟ್ ದಂಧೆ

ಬಂಡವಾಳಶಾಹಿ ಅಭಿವೃದ್ಧಿ ಯಾಗುತ್ತಿದ್ದಂತೆ ಕೈಗಾರಿಕೆಗಳು ಬೆಳೆದು ನಗರ ಪ್ರದೇಶಗಳು ಬೃಹತ್ತಾಗಿ ವಿಸ್ತರಿಸುತ್ತಿವೆ. ಅದಕ್ಕಾಗಿ ನಗರ ಪ್ರದೇಶದ ಸುತ್ತಮುತ್ತಲಿನ ಪ್ರದೇಶಗಳನ್ನು ಆಕ್ರಮಿಸಲು ರಿಯಲ್ ಎಸ್ಟೇಟ್ ಶಾರ್ಕ್‌ಗಳು ಹೊಂಚು ಹಾಕುತ್ತಿದ್ದಾರೆ. ದೇವನಹಳ್ಳಿ ಸಮೀಪ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಸಾವಿರಾರು ಎಕರೆ ಭೂಮಿಯನ್ನು ಈಗಾಗಲೇ ಸ್ವಾಧೀನ ಮಾಡಿಕೊಳ್ಳಲಾಗಿದೆ. ಕೈಗಾರಿಕಾ ಅಭಿವೃದ್ಧಿ ಮಂಡಳಿ ಭಾರಿ ಪ್ರಮಾಣದ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಉದ್ಯಮಿಗಳಿಗೆ ಹಂಚಿದೆ. ಭೂಮಿಯನ್ನು ಕಳೆದುಕೊಂಡಿರುವ ರೈತರು ತಮ್ಮಲ್ಲಿರುವ ಹಣ ಮುಗಿದ ನಂತರ ದೇವನಹಳ್ಳಿಯ ಬೀದಿಗಳಲ್ಲಿ ಬಿಕಾರಿಗಳಾಗಿ ತಿರುಗಾಡುತ್ತಿದ್ದಾರೆ. ಇನ್ನೂ ಲಕ್ಷಾಂತರ ಎಕರೆ ಭೂಮಿ ಸ್ವಾಧೀನಕ್ಕೆ ಕೆಐಎಡಿಬಿ ಅಧಿಸೂಚನೆ ಹೊರಡಿಸಿದೆ. ಭೂಮಿಯನ್ನು ಕಳೆದುಕೊಳ್ಳುವ ರೈತರು ತಮ್ಮ ಹೊಟ್ಟೆಪಾಡಿಗಾಗಿ ಅವರದೇ ಜಮೀನಿನಲ್ಲಿ ಸ್ಥಾಪಿಸುವ ಕಂಪನಿಗಳಲ್ಲಿ ಕೂಲಿಗಳಾಗಿ ಕೆಲಸ ಮಾಡುವಂತಹ ಪರಿಸ್ಥಿತಿ ನಿರ್ಮಾಣ ವಾಗಿದೆ.


ಆನೇಕಲ್ ಕತೆ

ಆನೇಕಲ್ ತಾಲ್ಲೂಕಿನ ಹೊಸಹಳ್ಳಿಯಲ್ಲಿ 2004 ಎಕರೆ ಭೂಮಿ ಸ್ವಾಧೀನಕ್ಕೆ ಕೆಐಎಡಿಬಿ ಅಧಿಸೂಚನೆ ಹೊರಡಿಸಿದೆ. ಎರಡು ಮೂರು ಬೆಳೆ ತೆಗೆಯುವ ಈ ಭೂಮಿಯನ್ನು ಬಂಜರು ಭೂಮಿ ಎಂದು ದಾಖಲೆಗಳನ್ನು ಸರ್ಕಾರ ಸೃಷ್ಟಿಸಿದೆ. ಹೊರ ರಾಜ್ಯಗಳಿಂದ ಬಂದು ಭೂಮಿ ಖರೀದಿಸಿ ಕಾಂಪೌಂಡ್ ಹಾಕಿಕೊಂಡಿರುವ ಜಮೀನುಗಳನ್ನು ಅಧಿಸೂಚನೆಯಿಂದ ಕೈಬಿಟ್ಟಿರುವ ಸರ್ಕಾರ ರೈತರ ಭೂಮಿ ಸ್ವಾಧೀನಕ್ಕೆ ಮುಂದಾಗಿದೆ. ಭೂಮಿ ಕಳೆದುಕೊಂಡ ಮೇಲೆ ನಮ್ಮ ಬದುಕು ಹೇಗೆ ಎಂದು ಅಲ್ಲಿನ ರೈತ ಮುಖಂಡರಾದ ಬಾಬುರೆಡ್ಡಿ ಆತಂಕ ವ್ಯಕ್ತಪಡಿಸುತ್ತಾರೆ. ಭೂಮಿ ಸ್ವಾಧೀನ ಮಾಡಿಕೊಳ್ಳುವ ಮುನ್ನ ಅಲ್ಲಿನ ರೈತರೊಂದಿಗೆ ಸರ್ಕಾರ ಮತ್ತು ಅಧಿಕಾರಿಗಳು ಚರ್ಚೆಗಳನ್ನು ನಡೆಸಬೇಕು. ರೈತರು ಒಪ್ಪಿದರೆ ಮಾತ್ರ ಸ್ವಾಧೀನ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಮಾಡಬಾರದು. ಉದ್ಯಮ ಮತ್ತು ಇತರ ಚಟುವಟಿಕಗಳಿಗಾಗಿ ಸ್ವಾಧೀನ ಮಾಡಿಕೊಂಡ ಭೂಮಿಯಲ್ಲಿ ಶೇ.40ರಷ್ಟನ್ನು ರೈತರಿಗೆ ಬಿಟ್ಟುಕೊಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹಿಸುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳು ಭೂಮಿ ಮೇಲೆ ಕಣ್ಣಿಟ್ಟಿರುವುದರಿಂದ ಹತ್ತಾರು ವರ್ಷಗಳಿಂದ ಅಲ್ಲೇ ನೆಲೆಸಿರುವ ರೈತರಿಗೆ ಸರ್ಕಾರ ಸಾಗುವಳಿ ಚೀಟಿ, ಹಕ್ಕುಪತ್ರಗಳನ್ನು ವಿತರಿಸುತ್ತಿಲ್ಲ. ಮನೆ ನಿವೇಶನಗಳನ್ನು ವಿತರಿಸುತ್ತಿಲ್ಲ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರಬೇಕೆಂಬ ಎಡಪಕ್ಷಗಳ ಒತ್ತಾಯದಿಂದಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸೇರಿಸಲಾಯಿತು. ಇದನ್ನು ಎಲ್ಲ ರಾಜ್ಯಗಳಿಗೂ ವಿಸ್ತರಿಸಬೇಕೆಂದು ಒತ್ತಾಯಿಸಲಾಗುತ್ತಿದೆ. ರಾಹುಲ್ ಗಾಂಧಿ ಇತ್ತೀಚೆಗೆ ಮನವಿ ನೀಡಿ ಒತ್ತಾಯಿಸಿದರು ಎಂದು ಹೇಳುತ್ತಾ ಕಾಂಗ್ರೆಸ್ ಪಕ್ಷ ಅದರಲ್ಲೂ ರಾಜಕೀಯ ದುರ್ಲಾಭ ಪಡೆಯಲು ಮುಂದಾಗಿರುವುದು ಹೇಸಿಗೆ ಹುಟ್ಟಿಸುವ ಕೃತ್ಯವಾಗಿದೆ. ಈ ಯೋಜನೆಯನ್ನು ರಾಜ್ಯ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಬೇಕು. ಕನಿಷ್ಠ ಕೂಲಿಯನ್ನು ಈಗಿರುವ 67 ರೂ.ಗಳಿಂದ 100ರೂ.ಗೆ ಹೆಚ್ಚಿಸಬೇಕು

■ ಮುರಳಿಕೃಷ್ಣ

ಜಗತ್ತನ್ನ ಕಿರಿದುಗೊಳಿಸಲು ನಾಂದಿ ಹಾಡಿದ ಸ್ಪುಟ್ನಿಕ್ ಉಪಗ್ರಹ



ಸ್ಪುಟ್ನಿಕ್‌ನ್ನು ಅಂತರಿಕ್ಷಕ್ಕೆ ಕಳುಹಿಸಿ 50ವರ್ಷಗಳು ಸಂದಿವೆ. 'ರಷ್ಯಾ ದೇಶವು ಜಗತ್ತಿನ ಮೊಟ್ಟ ಮೊದಲ ಮಾನವ-ನಿರ್ಮಿತ ಉಪಗ್ರಹ ಸ್ಪುಟ್ನಿಕ್‌ನ್ನು ಅಂತರಿಕ್ಷಕ್ಕೆ ಕಳುಹಿಸಿದ ಪರಿಣಾಮವಾಗಿ ಅಮೇರಿಕಾದ ಉಪಗ್ರಹದ ಮೂಲಕ 1969ರಲ್ಲಿ ಮಾನವನು ಮೊದಲ ಬಾರಿಗೆ ಚಂದ್ರನ ಮೇಲೆ ಕಾಲಿಡಲು ಮತ್ತು ಅಮೇರಿಕಾದ ರಾಷ್ಟ್ರೀಯ ಗಗನಯಾನ ಏಜೆನ್ಸಿ (ನ್ಯಾಸಾ) ಇಂದಿನ ಹಂತಕ್ಕೆ ಬೆಳೆಯಲು ಸಾಧ್ಯವಾಗಿದೆ.' ಎಂದು ಅದರ ಅಧ್ಯಕ್ಷ ಮೈಕೇಲ್ ಗ್ರಿಫಿನ್ ಹೇಳಿರುವುದು ಆಶ್ಚರ್ಯ ತರುವ ಸಂಗತಿಯೇನಲ್ಲ. ಆದರೆ, ತಾನು ಜಗತ್ತಿನ ಸೂಪರ್ ಪವರ್ ಎಂದು ಬೀಗುತ್ತಿದ್ದ ಅಮೇರಿಕಾವನ್ನು ಹಿಂದಿಕ್ಕಿ ರಷ್ಯಾ ಅಂತರಿಕ್ಷಕ್ಕೆ ಉಪಗ್ರಹ ಕಳುಹಿಸಿದಾಗ ಅಮೇರಿಕಾ ಬೆವೆತು ಹೋಗಿತ್ತು. 'ಮಕ್ಕಳು ರಸ್ತೆಯಲ್ಲಿ ಸಾಗುವ ಕಾರುಗಳ ಮೇಲೆ ರಸ್ತೆ ಬದಿಯಿಂದ ಕಲ್ಲೆಸೆಯುವಂತೆ' ರಷ್ಯಾವು ಅಂತರಿಕ್ಷದಲ್ಲಿರುವ ಸ್ಪುಟ್ನಿಕ್ ಮೂಲಕ ಅಮೇರಿಕಾ ಮೇಲೆ ಬಾಂಬುಗಳ ಸುರಿಮಳೆ ನಡೆಸುವುದೆಂದು ಅಮೇರಿಕಾದ ಕೆಲವರು ವದಂತಿ ಹಬ್ಬಿಸಿದ್ದರು.

ನ್ಯೂಟನ್ ಮುಂಗಾಣ್ಕೆ

1687ರಲ್ಲಿ, ಭೌತವಿಜ್ಞಾನ ಕ್ಷೇತ್ರದಲ್ಲಿ ಹಲವು ವರ್ಷ ಕಾಲ ಬೈಬಲ್ ಎಂದೇ ಕರೆಯಲಾಗುತ್ತಿದ್ದ ಐಸಾಕ್ ನ್ಯೂಟಾನ್‌ರವರ ಪುಸ್ತಕದಲ್ಲಿ ಮಾನವ-ನಿರ್ಮಿತ ಉಪಗ್ರಹವೊಂದು ಭೂಮಿಯ ಸುತ್ತಲೂ ಪ್ರದಕ್ಷಿಣೆ ಹಾಕುವ ಕುರಿತು ಉಲ್ಲೇಖಿಸಲಾಗಿತ್ತು. 1957ರಲ್ಲಿ ಸ್ಪುಟ್ನಿಕ್ ಉಡಾವಣೆಯಾಗುವುದರೊಂದಿಗೆ ಅದು ತಾಂತ್ರಿಕ ವಾಸ್ತವತೆಯಾಯಿತು.

ಸ್ಪುಟ್ನಿಕ್‌ನ್ನು ಅಂತರಿಕ್ಷಕ್ಕೆ ಕಳುಹಿಸಿದ ನಂತರದಿಂದ ಆರಂಭಿಸಿ ಇಂದಿನವರೆಗೆ ಸುಮಾರು 6,600 ಉಪಗ್ರಹಗಳನ್ನು ಅಂತರಿಕ್ಷಕ್ಕೆ ಉಡಾಯಿಸಲಾಗಿದ್ದು, ಅವುಗಳಲ್ಲಿ ಇನ್ನೂ 1,000 ಕ್ಕೂ ಹೆಚ್ಚು ಉಪಗ್ರಹಗಳು ಕ್ರಿಯಾಶೀಲವಾಗಿ ಕಾರ್ಯನಿರತವಾಗಿವೆ ಮತ್ತು 660 ಕ್ಕೂ ಹೆಚ್ಚು ಉಪಗ್ರಹಗಳನ್ನು ಸಂವಹನ ಕಾರ್ಯಗಳಿಗಾಗಿ ಬಳಸಲಾಗುತ್ತಿದೆ.

ಮೊದಲ ಕೃತಕ ಉಪಗ್ರಹ

ಜಗತ್ತಿನ ಮೊಟ್ಟ ಮೊದಲ ಮಾನವ-ನಿರ್ಮಿತ ಉಪಗ್ರಹ ಸ್ಪುಟ್ನಿಕ್‌ನ್ನು 1957ರ ಅಕ್ಟೋಬರ್ 4ರಂದು ಇಂದಿನ ಕಜಕ್‌ಸ್ತಾನದ ಟೈಯುರಟಂ ಎಂಬ ಸ್ಥಳದಿಂದ ಉಡಾವಣೆ ಮಾಡಲಾಯಿತು. ಅದುವರೆಗೂ ಭೂಮಿಯ ಸುತ್ತ ಕೇವಲ ಚಂದ್ರ ಮಾತ್ರವೇ ಪ್ರದಕ್ಷಿಣೆ ಹಾಕುತ್ತಿತ್ತು. ಇದೀಗ ಚಂದ್ರನ ಜೊತೆಗೆ 83.6ಕೆಜಿ ತೂಕದ 23 ಇಂಚು ವ್ಯಾಸವಿರುವ ಉಪಗ್ರಹವು ಸೇರಿಕೊಂಡಿತು. ಉಡಾವಣೆಗಾಗಿ ಪ್ರಬಲವಾದ ಎರಡು ಆರ್-7 ರಾಕೆಟ್‌ಗಳನ್ನು ಉಪಯೋಗಿಸಲಾಯಿತು. ಅದರಲ್ಲಿ ಪ್ರಧಾನ ಪಾತ್ರವಹಿಸಿದ್ದವರೆಂದರೆ: ವಿಶ್ವದ ಮಹಾನ್ ರಾಕೆಟ್/ಕ್ಷಿಪಣಿ ನಿರ್ಮಾಣಗಾರರಲ್ಲೊಬ್ಬರಾದ ಸೆರ್ಗಿ ಕೊರೊಲೆವ್, ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಜೋಸೆಫ್ ಸ್ಟಾಲಿನ್, ಮತ್ತು ನಿಕಿತಾ ಕ್ರುಶ್ಚೇವ್. ಸ್ಪುಟ್ನಿಕ್-1 ಸರಳ ಉಪಗ್ರಹವಾಗಿದ್ದು, ಅದರ ತುಂಬ ನೈಟ್ರೋಜನ್ ಅನಿಲವನ್ನು ತುಂಬಲಾಗಿತ್ತು. ಅದರೊಳಗೆ ಎರಡು ರೇಡಿಯೋ ಟ್ರಾನ್ಸ್‌ಮಿಟರ್‌ಗಳು, ಒಂದು ಬ್ಯಾಟರಿ, ಒಂದು ಒತ್ತಡ ಅಳೆಯುವ ಮಾಪಕ ಮತ್ತು ಶಾಖಮಾಪಕ ಹಾಗೂ ನಾಲ್ಕು ಆಂಟೆನಾಗಳು ಇದ್ದವು. ಸ್ಪುಟ್ನಿಕ್ ಅಂತರಿಕ್ಷದಲ್ಲಿ ಬ್ಯಾಟರಿ ಉರಿದು ಹೋಗುವವರೆಗೆ ಅಂದರೆ 20ದಿನಗಳ ಕಾಲ ಕಕ್ಷೆಯಲ್ಲಿಯೇ ಉಳಿದಿತ್ತು. ಅದರ ಕಕ್ಷೆಯು ನಿಧಾನವಾಗಿ ಕ್ಷೀಣಗೊಂಡ ನಂತರ 1958ರ ಜನವರಿ 4ರಂದು ವಾಪಸು ಭೂಮಿಗೆ ಬಂದಿತು.

ಲೈಕಾ ಎಂಬ ನಾಯಿ

ಸ್ಪುಟ್ನಿಕ್-1 ನ್ನು ಕಳುಹಿಸಿದ ಒಂದು ತಿಂಗಳ ತರುವಾಯ ಅಂದರೆ 1957ರ ನವೆಂಬರ್ 4ರಂದು ಅದಕ್ಕಿಂತಲೂ ದೊಡ್ಡದಾದ ಸ್ಪುಟ್ನಿಕ್-2 ನ್ನು ಉಡಾಯಿಸಲಾಯಿತು. ಅದರೊಂದಿಗೆ ಲೈಕಾ ಎಂಬ ನಾಯಿಯನ್ನು ಕಳುಹಿಸಲಾಗಿತ್ತು. ಆದರೆ ಅಂತರಿಕ್ಷದಲ್ಲಿ ಆಮ್ಲಜನಕವಿಲ್ಲದ್ದರಿಂದ 10ದಿನಗಳಲ್ಲೇ ನಾಯಿಯು ಕೊನೆಯುಸಿರೆಳೆಯಿತು.

ಮಾನವ ನಿರ್ಮಿತ ಉಪಗ್ರಹಗಳು ನಮ್ಮ ಜೀವನದ ಪ್ರತಿಯೊಂದು ಮಜಲನ್ನು ಆಕ್ರಮಿಸಿಕೊಂಡಿದೆ. ಇಂದು ಉಪಗ್ರಹದ ಬಗ್ಗೆ ತಿಳಿಯದೇ ಇದ್ದರೂ ನಾವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಅದರ ಉಪಯುಕ್ತತೆಗಳನ್ನು ಪಡೆಯುವಷ್ಟರ ಮಟ್ಟಿಗೆ ಉಪಗ್ರಹಗಳು ನಮ್ಮನ್ನು ಆವರಿಸಿಕೊಂಡಿವೆ. ಉದಾಹರಣೆಗೆ 1998ರ ಮೇ ತಿಂಗಳಲ್ಲಿ, ಅಮೇರಿಕಾದಲ್ಲಿ ಒಂದೇ ಒಂದು ಸಂವಹನ ಉಪಗ್ರಹವು ಕೆಟ್ಟು ನಿಂತಿದ್ದರಿಂದ 3 ಕೋಟಿಗೂ ಹೆಚ್ಚು ಪೇಜರ್ ಉಪಕರಣಗಳು ಸ್ಥಗಿತಗೊಂಡವು, ಕ್ರೆಡಿಟ್ ಕಾರ್ಡ್ ಹಣ ಪಾವತಿ ಕಾರ್ಯ ನಿಷ್ಕ್ರಿಯಗೊಂಡಿತು, ರೇಡಿಯೋ ಮತ್ತು ದೂರದರ್ಶನ ಜಾಲಗಳು ಸ್ತಬ್ಧಗೊಂಡವು. ದೂರದರ್ಶನದ ಚಿತ್ರಗಳು, ಇ-ಮೇಲ್ ಸುದ್ದಿಗಳು, ದೂರವಾಣಿ ಕರೆಗಳು, ಮೊಬೈಲ್ ಕರೆಗಳು, ಇತ್ಯಾದಿಗಳು ಸಂವಹನ ಉಪಗ್ರಹವು ಬಿತ್ತರಿಸುವ ಸಿಗ್ನಲ್‌ಗಳ ಮೂಲಕ ಕಾರ್ಯ ನಿರ್ವಹಿಸುತ್ತವೆ. ಇದರಿಂದಾಗಿ ಇಡೀ ಜಗತ್ತೇ ಒಂದು ಜಾಗತಿಕ ಹಳ್ಳಿಯಾಗಿ ಪರಿವರ್ತಿತಗೊಂಡಿದೆ. ವಾತಾವರಣ ಬದಲಾವಣೆ, ಹವಾಮಾನ ಮುನ್ಸೂಚನೆಯಂತಹ ಅತ್ಯುಪಕಾರಿ ಕಾರ್ಯಗಳನ್ನು ಉಪಗ್ರಹವಿಲ್ಲದೆ ಊಹಿಸಿ ಕೊಳ್ಳುವುದು ಕಷ್ಟ. ಬೆಳೆ ವೈವಿಧ್ಯತೆ, ಜಲ ಮೂಲದ ಮಾಲಿನ್ಯ ವಿವರ, ಸೂಕ್ಷ್ಮ ಸಂವೇದಿ ಮಾಹಿತಿಗಳು, ಇತ್ಯಾದಿ ಬಹುಪಯೋಗಿ ಕ್ಷೇತ್ರಗಳಲ್ಲಿ ಉಪಗ್ರಹಗಳನ್ನು ಬಳಸಲಾಗುತ್ತಿದೆ. ಬೆಳೆಗಳ ಆರೋಗ್ಯ ಕುರಿತ ಮಾಹಿತಿ, ಕಾಡ್ಗಿಚ್ಚು, ಸಮುದ್ರದಲ್ಲಿ ಮೀನಿನ ಕುರಿತು, ಕ್ಷಾಮದ ಮುನ್ಸೂಚನೆ, ಅಂತರ್ಜಲ ಪತ್ತೆ ಹಚ್ಚುವುದು, ತೈಲ ಮತ್ತು ಅನಿಲ ಶೋಧನೆ, ಚಂಡಮಾರುತಗಳ ಮುನ್ಸೂಚನೆ, ಇತ್ಯಾದಿಯಂತಹ ಮಾಹಿತಿಗಳ ಮಹಾಪೂರವನ್ನು ಅವು ನೀಡುತ್ತಿವೆ.

ಉಡಾವಣಾ ಸ್ಪರ್ಧೆ?!

ಇತ್ತೀಚೆಗೆ ಉಪಗ್ರಹ ಉಡಾವಣೆಯ ಸ್ಪರ್ಧೆಯನ್ನೇ ಏರ್ಪಡಿಸ ಲಾಗಿದೆಯೇ? ಎನ್ನುವಷ್ಟರ ಮಟ್ಟಿಗೆ ಉಪಗ್ರಹಗಳನ್ನು ಭೂಮಿ ಮತ್ತು ಚಂದ್ರನ ಕಕ್ಷೆಗೆ ಉಡ್ಡಯನ ಮಾಡಲಾಗುತ್ತಿದೆ. ಎರಡು ತಿಂಗಳ ಹಿಂದೆಯಷ್ಟೆ ಜಪಾನ್ ತನ್ನ ಮೊಟ್ಟ ಮೊದಲ ಅಂತರಿಕ್ಷ ನೌಕೆಯನ್ನು ಚಂದ್ರನ ಪ್ರದಕ್ಷಿಣೆಗಾಗಿ ಉಡಾಯಿಸಿದೆ. ಕಳೆದ ತಿಂಗಳಷ್ಟೆ, ಚಾಂಗ್ - ಎಂಬ ಹೆಸರಿನ ಗಗನನೌಕೆಯನ್ನು ಚೀನಾ ಯಶಸ್ವಿಯಾಗಿ ಕಳುಹಿಸಿದೆ. 2008ರ ಏಪ್ರಿಲ್‌ನಲ್ಲಿ ಚಂದ್ರಯಾನ್-1 ಎಂಬ ಹೆಸರಿನ ಗಗನನೌಕೆಯನ್ನು ಭಾರತ ಉಡಾವಣೆ ಮಾಡಲಿದೆ.

■ ಜಯ

ಸಂದರ್ಶನ

'ವಚನ ನೀಡಿದಂತೆ ಯುಪಿಎ ಕೆಲಸ ಮಾಡಬೇಕು'

ಕಿರು ಸಂದರ್ಶನದಲ್ಲಿ ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯು

ಪ್ರ: ಅಮೇರಿಕಾದೊಂದಿಗೆ ಅಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರ ಅಷ್ಟೊಂದು ಉತ್ಸಾಹವಾಗಿದೆ ಯಾಕೆ? ಅಮೇರಿಕಾದ ಒತ್ತಡಕ್ಕೆ ಕಾರಣವೇನು? ವರ್ಗ ಹಿತಾಸಕ್ತಿಗಳೇನು?

ಸೀತಾರಾಂ: ಅಮೇರಿಕಾದ ಅಡಿಯಾಳಾದರೆ ಮಾತ್ರ ತಮ್ಮನ್ನು ಕ್ರೋಢೀಕರಣ ಮಾಡಿಕೊಳ್ಳಬಹುದು ಎಂದು ಭಾವಿಸಿದ್ದಾರೆ. ಅಮೇರಿಕನ್ ಸಾಮ್ರಾಜ್ಯಶಾಹಿಗೆ ಹೆಚ್ಚು ಹೆಚ್ಚು ಹತ್ತಿರವಾದರೆ ಮಾತ್ರ ತಮ್ಮ ಲಾಭ ಪಡೆಯಬಹುದು. ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಆರ್ಥಿಕ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವುದು ಸಾಧ್ಯ ಎಂದು ಯೋಚಿಸುತ್ತಾರೆ. ಇದು ಆಳುವವರ್ಗಗಳ ಹಿತಾಸಕ್ತಿಯಾಗಿದೆ.

ಅಮೇರಿಕಾದಂತಹ ಸೂಪರ್ ಪವರ್ ಜೊತೆಗಿದ್ದರೆ ಮಾತ್ರ ತಾವು ಬದುಕಬಹುದು ಎಂದು ಹಾತೊರೆಯುತ್ತಲೇ ಇದ್ದಾರೆ. ಜಾಗತಿಕ ಆಧಿಪತ್ಯ ಸ್ಥಾಪನೆಗೆ ಭಾರತ ತನ್ನ ಸಹಪಾಲುದಾರ (ಜೂನಿಯರ್ ಪಾರ್ಟ್‌ನರ್) ಆಗಿರಬೇಕು ಎಂದು ಅಮೇರಿಕಾ ಬಯಸುತ್ತಿದೆ.

ಪ್ರ: ಆಂಧ್ರದಲ್ಲಿನ ಭೂಮಿಗಾಗಿನ ಹೋರಾಟ. ಯಾವ ಹಂತದಲ್ಲಿದೆ? ಸರ್ಕಾರದ ದಬ್ಬಾಳಿಕೆ ನಂತರದ ಸ್ಥಿತಿ, ಅದನ್ನು ಎದುರಿಸುವ ಬಗೆ ಹೇಗೆ?

ಸೀತಾರಾಂ: ಈಗಾಗಲೇ ಆಂಧ್ರದಲ್ಲಿ ಜನತೆ ಹಿಡಿದಿರುವ ಭೂಮಿಯನ್ನು ಸರ್ಕಾರ ಕೂಡಲೇ ಕಾನೂನು ಬದ್ಧಗೊಳಿಸಬೇಕು. ಇದು ಸರ್ಕಾರದ ಭೂಮಿ, ಆದ್ದರಿಂದ ಸಹಜವಾಗಿ ಜನರಿಗೆ ಸೇರಿದ್ದು, ಇದನ್ನು ಪರಿಶೀಲಿಸಿ ಕಾನೂನುಬದ್ಧಗೊಳಿಸಬೇಕು ಎಂದು ಆಗ್ರಹಿಸುತ್ತಿದ್ದೇವೆ. ಸರ್ಕಾರ ಇದಕ್ಕೆ ಹೇಗೆ ಪ್ರತಿಕ್ರಿಯಿಸುವುದೋ ನೋಡುತ್ತಿದ್ದೇವೆ. ಇದನ್ನು ನೋಡಿ ಹೋರಾಟದ ಮುಂದಿನ ಕ್ರಮ ಕೈಗೊಳ್ಳಲಾಗುವುದು ಒಪ್ಪಿದರೆ ಒಳ್ಳೆಯದು, ಇಲ್ಲವಾದರೆ ಸಂಘರ್ಷವಿದ್ದೇ ಇದೆ...

ಪ್ರ: ಆಂಧ್ರದಲ್ಲಿನ ಈ ಭೂಮಿ ನಿವೇಶನಕ್ಕಾಗಿ ನಡೆಯುತ್ತಿರುವ ಹೋರಾಟದಿಂದ ರಾಜಕೀಯ ಶಕ್ತಿಗಳ ಬಲದಲ್ಲಿ ಹೊಸ ಮಾರ್ಪಾಡು ಏರ್ಪಟ್ಟಿದೆಯೇ?



ಸೀತಾರಾಂ: ಅದನ್ನು ನೋಡಬೇಕು. ಮುಖ್ಯವಾಗಿ ಜನತೆಯ ಈ ಸಮರಧೀರ ಹೋರಾಟಕ್ಕೆ ವಿವಿಧ ಕಡೆಗಳಿಂದ ವ್ಯಾಪಕ ಬೆಂಬಲ ಸಿಗುತ್ತಿದೆ. ಹೋರಾಟದಲ್ಲಿ ಹುಮ್ಮಸ್ಸಿದೆ. ಈ ಬೆಳವಣಿಗೆಗಳ ಜೊತೆಗೆ ವಿರೋಧ ಪಕ್ಷವೂ ಬೆಂಬಲಿಸಿದೆ. ಮುಂದೆ ಹೇಗೆಲ್ಲಾ ಸ್ವರೂಪ ಪಡೆಯಲಿದೆ ನೋಡಬೇಕು.

ಪ್ರ: ಕೇಂದ್ರದ ಯು.ಪಿ.ಎ. ಸರ್ಕಾರದ ಒಟ್ಟು ಕಾರ್ಯವೈಖರಿ (Performance) ಬಗ್ಗೆ ಏನನ್ನಿಸುತ್ತದೆ?

ಸೀತಾರಾಂ: ಸಕಾರಾತ್ಮಕಗಿಂತ ನಕಾರಾತ್ಮಕತೆಯೇ ಹೆಚ್ಚು. ಯುಪಿಎ ಸರ್ಕಾರ ಜನತೆಗೆ ವಚನ ನೀಡಿದಂತೆ ಕೆಲಸ ಮಾಡಬೇಕೆಂದು ಒತ್ತಾಯಿಸುತ್ತಿದ್ದೇವೆ.

ಎಡಪಕ್ಷಗಳ 61 ಸಂಸತ್ ಸದಸ್ಯರಲ್ಲಿ 54 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ್ನು ಸೋಲಿಸಿಯೇ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಪ್ರ: ನೇಪಾಳದಲ್ಲಿ ಬೆಳವಣಿಗೆಗಳು ಹೇಗೆ? ಮಾವೋವಾದಿಗಳು 'ಸರ್ಕಾರ'ದಿಂದ' ಹೊರಬಂದಿದ್ದಾರೆ? ಮುಂದೇನು?

ಸೀತಾರಾಂ: ಈಗ ನೇಪಾಳವು ಬಹಳಷ್ಟು ಸೂಕ್ಷ್ಮವಾದ ಸನ್ನಿವೇಶದಲ್ಲಿ ಹಾದುಹೋಗುತ್ತಿದೆ. ಹೊಸ ಸಂಸತ್‌ಗೆ ಚುನಾವಣೆ ಅಕ್ಟೋಬರ್ 2 ಎಂದಿತ್ತು.... ಮುಂದೆ ಹೋಗಿದೆ. ಮಾವೋವಾದಿಗಳು ಸರ್ಕಾರದಿಂದ ಹೊರಬಂದಿದ್ದಾರೆ. ಅಲ್ಲಿನ ಸಂವಿಧಾನ ರಚನಾ ಮಂಡಳಿಯು ಸಂಸತ್‌ಗೆ ಪ್ರಾತಿನಿಧ್ಯವು ಪ್ರಮಾಣಾತ್ಮಕ ಪ್ರಾತಿನಿಧ್ಯ ಇರಬೇಕು ಎಂಬುದು ಬೇಡಿಕೆ. ನಾವು ಪ್ರಮಾಣಾತ್ಮಕ ಪ್ರಾತಿನಿಧ್ಯದ ಪರವಾಗಿದ್ದೇವೆ. ಪ್ರಮಾಣಾತ್ಮಕ ಪ್ರಾತಿನಿಧ್ಯ ಮತ್ತು ಫಸ್ಟ್ ಪಾಸ್ಟ್ ದಿ ಪೋಸ್ಟ್ (ಒಂದು ಮತ ಪಡೆದರೂ ಗೆದ್ದಂತೆ ನಮ್ಮ ದೇಶದಲ್ಲಿರುವ ಹಾಗೆ) ಶೇ.50 ರಷ್ಟು ಆಗಬಹುದು ಎಂಬುವವರಿದ್ದಾರೆ. ಈಗ ಹೊಸದಾ ಶೇ.75ರಷ್ಟು ಪ್ರಮಾಣಾತ್ಮಕ ಪ್ರಾತಿನಿಧ್ಯ ಶೇ. ರಷ್ಟು ಫಸ್ಟ್ ಪಾಸ್ಟ್ ದಿ ಪೋಸ್ಟ್ ಎ ಮಾತುಗಳೂ ಇವೆ.

ಪ್ರ: ಗುಜರಾತ್‌ನಲ್ಲಿ ವಿಧಾನಸಭೆ ಚುನಾವಣೆಗಳು ಕಾವು ಏರತೊಡಗಿದ ಮುಖ್ಯಮಂತ್ರಿ ನರೇಂದ್ರಮೋದಿ ಮೊನ್ನೆ ಟಿ. ಸಂದರ್ಶಕರ ಪ್ರಶ್ನೆಗಳಿಗೆ ಉತ್ತರಿಸದೇ ಹೋದನ

ಸೀತಾರಾಂ: ಮೋದಿ ಉತ್ತರ ಹೇಳ ಸ್ಥಿತಿಯಲ್ಲಿಯೇ ಇಲ್ಲ. ಇನ್ನು ಹೆಚ್ಚು ಹೆಚ್ಚು ಉ ಹೇಳುವಾಗ ಅಸಮರ್ಥ ಸ್ಥಿತಿಯೇ ಆತನದು. ಈ ಚುನಾವಣಾ ಕಣ ಸಿದ್ಧವಾಗುತ್ತಿದೆ. ಬಿಜೆಪಿಯ ಅಲ್ಲಿ ಸೋಲಿಸಲೇಬೇಕು.

ಮೋದಿ ಅತ್ಯಂತ ಅಪಾಯಕಾ ಅನಾಹುತಕಾರಿ ಎಂಬುದನ್ನು ಕಾಂಗ್ರೆಸ್ ಪಕ್ಷದ ಎಷ್ಟು ಅರಿಯುತ್ತಾರೆ ಎಂಬುದು ಗುಜರಾತ ಭಾರತದ ಹಿತಾಸಕ್ತಿಗಳಿಗೆ ಅವಶ್ಯವಿದೆ. ಚುನಾ ಹತ್ತಿರವಾಗುತ್ತಿರುವಂತೆ ತೀವ್ರ ಬೆಳವಣಿಗೆಗಳಿ (ಕಾಂ: ಸೀತಾರಾಂ ದೆಹಲಿಗೆ ಹೊರಡಬೇಕಿತ್ತು. ಆಗ ದೀರ್ಘವಾದ ಮಾಧ್ಯಮಗೋಷ್ಠಿಯೂ ಮುಗಿದಿ ಶುಭ ಹಾರೈಸಿ ಸೀತಾರಾಂ ಹೆಜ್ಜೆ ಹಾಕಿದರು...)

■ ಎಸ್.ವೈ.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH